ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 13 ಮಾರ್ಚ್ 28, 2004 ಬೆಲೆ ರೂ. 3.00




ಪರ್ಯಾಯ ಸರ್ಕಾರಕ್ಕೊಂದು ಪರ್ಯಾಯ ಕೃಷಿ ನೀತಿ



ಹೆಣ್ಣು ಭ್ರೂಣ ಹತ್ಯೆ ಶೋಷಣೆಯ ಕ್ರೂರ ಮುಖ

ಬಿಜೆಪಿ ಮತ್ತು ಮಾಧ್ಯಮ : ಅಬ್ಬರ ! ವಾಸ್ತವ ?



- ಅಮೆರಿಕಾದಲ್ಲೂ 'ಫೀಲ್ ಗುಡ್' !
- ದುಡ್ಡು ನುಂಗುವ ದೇಶಭಕ್ತರು
- ಚುನಾವಣೆ 2004 : ಟೀಕೆ-ಟಿಪ್ಪಣಿ
- ಸಿಪಿಐ(ಎಂ) ಪ್ರಣಾಳಿಕೆ ಬಿಡುಗಡೆ

ಪೋಸ್ಟರ್ 'ವಿದ್ಯುತ್'

ದುಡ್ಡು ನುಂಗುವ ದೇಶಭಕ್ತರು

ಕರ್ನಾಟಕದಲ್ಲಿ ಬಿಜೆಪಿಯೆಂದರೆ ಎ.ಕೆ.ಸುಬ್ಬಯ್ಯ ಎನ್ನುವ ಕಾಲವಿತ್ತು. ರಾಜ್ಯದಲ್ಲಿ ಸಂಘ ಪರಿವಾರದ ಬೀಜಗಳಿಗೆ ನೆಲ ಹದ ಮಾಡಿ ಬಿತ್ತಿದ ಸುಬ್ಬಯ್ಯಯನವರು ಮೊಳಕೆಯೊಡೆದ ಬೀಜಗಳು ವಿಷ ವೃಕ್ಷವಾಗಿ ಬೆಳೆಯುತ್ತಿರುವುದನ್ನು ಕಣ್ಣಾರೆ ಕಂಡು, ಉಂಡು ಬೆಚ್ಚಿದವರು. ಈ ವಿಷ ವೃಕ್ಷಗಳ ಮೂಲವನ್ನೇ ಹುಡುಕಿ, ಅವುಗಳನ್ನು ಕಿತ್ತಸೆಯಲು ನಿಂತು ತಮ್ಮ ಅನುಭವಗಳನ್ನು ಇಲ್ಲಿ ಹೇಳಿದ್ದಾರೆ.

ಅದೇ ದಿವಸ ಬೆಳಿಗ್ಗೆ ಅಂದರೆ ನನ್ನಿಂದ 10 ಸಾವಿರ ರೂಪಾಯಿ ಪಡೆದ ಮೇಲೆ ಶ್ರೀ ಹೆಗಡೆಯುವರಿಂದ 15 ಸಾವಿರ ರೂಪಾಯಿ, ಹಾಗೂ ಸಿಂಧ್ಯಾರವರಿಂದ 10 ಸಾವಿರ ರೂಪಾಯಿ ಪಡೆದ ವಿವರ ನೀಡಿದರು. ನನಗೆ ತುಂಬಾ ನಾಚಿಕೆಯಾಗಿ ಹೋಯಿತು. ಶ್ರೀ ಸಿಂಧ್ಯಾ ಅದುವರೆಗೆ ಆರ್. ಎಸ್. ಎಸ್. ನವರಿಗೆ ಒದಗಿಸಿದ ಹಣ ಮತ್ತು ವಾಹನಗಳ ವಿವರ ಕೇಳಿದಾಗ ಒಂದು ಕಾರು ಮತ್ತು ಒಟ್ಟು 80 ಸಾವಿರ ರೂಪಾಯಿ ಕೊಡಲಾಗಿದೆಯೆಂದು ತಿಳಿಸಿದರು. ಇದು ಕೇವಲ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರಕ್ಕೆ ಮಾತ್ರ. ಉಳಿದ ಕ್ಷೇತ್ರಗಳಿಗೆ ಬೇರೆ, ಅಂದರೆ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರ ಒಂದಕ್ಕೆ ಒಟ್ಟು 90 ಸಾವಿರ ರೂಪಾಯಿ ಮತ್ತು ಒಂದು ಕಾರನ್ನು ಆರ್. ಎಸ್. ಎಸ್. ನವರು ಪಡೆದಂತಾಯಿತು. ನಾನು ದಿಗ್ಭ್ರಾಂತನಾಗಿ ಆರ್.ಎಸ್.ಎಸ್.ನವರು ಶುದ್ಧ ಚಂಡಾಲರೆಂದು ಶಪಿಸುತ್ತಾ, ಮುಂದಿನ ಕೆಲಸ ಪ್ರಾರಂಭಿಸಿದೆ. ಅದೇ ದಿವಸ ರಾತ್ರಿ ನನಗೆ ಶ್ರೀ ರಘುಪತಿ ಶಾಸ್ತ್ರಿಯವರಿಂದ ಫೋನು ಕರೆ ಬಂತು. ನಾನು ಏನೆಂದು ವಿಚಾರಿಸಿದಾಗ ಆರ್. ಎಸ್. ಎಸ್. ನವರು ನನ್ನ ಭರವಸೆ ಮೇಲೆ ಕೆಲಸ ಪ್ರಾರಂಭಿಸಿರುವುದಾಗಿಯೂ ಆಗಲೇ 5 ಕಾರುಗಳನ್ನು ತಂದಿರುವುದಾಗಿಯೂ ತಿಳಿಸಿ ನಾನು ಕೊಡುತ್ತೇನೆಂದು ಹೇಳಿದ್ದ 5 ಸಾವಿರ ರೂಪಾಯಿ ಒಡನೇ ಕೊಡಬೇಕೆಂದು ಹೇಳಿದರು. ನನಗೆ ಪಿತ್ತ ನೆತ್ತಿಗೇರಿತು. ಆತನನ್ನು ತರಾಟೆಗೆ ತೆಗೆದುಕೊಂಡೆ. ಶ್ರೀ ರಾಮಕೃಷ್ಣ ಹೆಗಡೆ ಹಾಗೂ ಸಿಂಧ್ಯಾರವರು ನನಗೆ ಕೊಟ್ಟ ವಿವರದ ಬಗ್ಗೆ ತಿಳಿಸುತ್ತಿದ್ದಂತೆಯೇ ಈ ಆರ್. ಎಸ್. ಎಸ್. ಪ್ರಚಾರಕ ಫೋನು ಕೆಳಗಿಟ್ಟು ಪರಾರಿಯಾದ. ಆರ್. ಎಸ್. ಎಸ್. ನವರು ಹೀಗೆ ಒಂದು ಕ್ಷೇತ್ರದಲ್ಲಿ ಪಡೆದಿದ್ದ ಒಟ್ಟು 90 ಸಾವಿರ ರೂಪಾಯಿಯಲ್ಲಿ ಒಂಬತ್ತು ನೂರು ರೂಪಾಯಿ ಕೂಡ ಆ ಚುನಾವಣೆಯಲ್ಲಿ ಖರ್ಚು ಮಾಡಿಲ್ಲವೆಂದು ನಾನು ಧೃಡವಾಗಿ ಹೇಳಬಲ್ಲೆ ಆ ಸಂದರ್ಭದಲ್ಲಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲೂ ಆರ್. ಎಸ್. ಎಸ್. ನವರು ಇದೇ ರೀತಿ ವರ್ತಿಸಿದ್ದಾರೆಂದು ನನಗೆ ಆ ಮೇಲೆ ವಿಶ್ವಾಸಾರ್ಹ ಮೂಲಗಳಿಂದ ತಿಳಿಯಿತು. ಆಶ್ಚರ್ಯದ ಸಂಗತಿಯೆಂದರೆ ಈ ಎಲ್ಲಾ ವಿಷಯಗಳನ್ನು ಬೆಂಗಳೂರಿನ ಆರ್. ಎಸ್. ಎಸ್. ಕೇಂದ್ರದ ಪ್ರಮುಖರಿಗೆ ತಿಳಿಸಿದರೂ ಅವರು ಯಾವುದೇ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸದೇ ಅನಂತರ ಚಿಕ್ಕಮಗಳೂರಿನ ಆರ್. ಎಸ್. ಎಸ್. ಪ್ರಚಾರಕನಿಗೆ ಸಂಸ್ಥೆಯಲ್ಲಿ ಇನ್ನೂ ಹೆಚ್ಚಿನ ಜವಾಬ್ದಾರಿ ವಹಿಸಿಕೊಡಲಾಯಿತು. ಇನ್ನೂ ಒಂದು ಮಾತು ಹೇಳಬೇಕೆಂದರೆ ಚಿಕ್ಕಮಗಳೂರು ಲೋಕಸಭಾ ಉಪಚುನಾವಣೆಯ ಸಂದರ್ಭದಲ್ಲಿ ಕಡೇ ಘಳಿಗೆಯಲ್ಲಿ ಅವಶ್ಯವಿದ್ದಷ್ಟು ಹಣ ಒದಗಿಸಲಾಯಿತು. ಕಡೇ ಘಳಿಗೆಯ ವೆಚ್ಚಕ್ಕೋಸ್ಕರ ನಾನು ಜವಾಬ್ದಾರಿ ವಹಿಸಿಕೊಂಡಿದ್ದ ಕ್ಷೇತ್ರಕ್ಕೆ ಆಗತ್ಯವಿದ್ದಷ್ಟು ಹಣವನ್ನು ನಾನು ಮತ್ತು ನಂತರ ಶಾಸಕರಾದ ಶ್ರೀ ನಾರಾಯಣ ಗೌಡ ಸಹ ಜೊತೆಯಾಗಿ ಪಡೆದವು. ಚುನಾವಣೆ ಮುಗಿದಮೇಲೆ ನನ್ನಲ್ಲಿ ಸುಮರು 21 ಸಾವಿರ ರೂಪಾಯಿ ಉಳಿದಿತ್ತು. ಅದನ್ನು ಲೆಕ್ಕಪತ್ರ ಸಮೇತ ಬೆಂಗಳೂರು ಜನತಾಪಾರ್ಟಿಯ ಕಛೇರಿಗೆ ಕೊಟ್ಟ ಮುಠ್ಠಾಳ ನಾನೊಬ್ಬನೇ ಎಂದು ತೋರುತ್ತದೆ. ಇನ್ನು ಕೆಲವರು ಇದ್ದರು ಇರಬಹುದು. ಆದರೆ ಮೂಡಿಗೆರೆ ಕ್ಷೇತ್ರದ ಜವಾಬ್ದಾರಿ ಜವಹಿಸಿಕೊಂಡಿದ್ದ ಆರ್. ಎಸ್. ಎಸ್. ಪ್ರಮುಖ ದಿವಂಗತ ಬಾಪೂರಾವ್ ದೇಶಪಾಂಡೆಯವರು ಮಾತ್ರ ಕಡೇ ಘಳಿಗೆಯ



ವೆಚ್ಚಕ್ಕೆಂದು ಕಚ್ಚಾಡಿ ಪಡೆದ ಹಣವನ್ನೆಲ್ಲಾ ಗಂಟು ಕಟ್ಟಿ ಹುಬ್ಬಳ್ಳಿಗೆ ಸಾಗಿಸಿ ನಂತರ ಒಂದು ಮುದ್ರಣಾಲಯ ಸ್ಥಾಪಿಸಿದ ಸಂಗತಿ ಕೆಲವರಿಗೆ ಮಾತ್ರ ತಿಳಿದಿರುವಂತಹದ್ದಾಗಿದೆ.

ಇನ್ನೊಂದು ಘಟನೆಯನ್ನು ಸಹ ಇಲ್ಲಿ ಉಲ್ಲೇಖಿಸುತ್ತೇನೆ. ತುರ್ತು ಪರಿಸ್ಥಿತಿಯಲ್ಲಿ ಬೆಂಗಳೂರಿನಲ್ಲಿ ವ್ಯಾಪಾರಿಯೊಬ್ಬರ ಅಂಗಡಿಗೆ ಕೇಂದ್ರೀಯ ಅಬಕಾರಿ ಇಲಾಖೆಯವರು ದಾಳೀ ಮಾಡಿ ಅಲ್ಲಿದ್ದ ಅಕ್ರಮ ಚಿನ್ನವನ್ನು ವಶಪಡಿಸಿಕೊಂಡರು. ಆಮೇಲೆ ಇಲಾಖೆಯರು ವಶಪಡಿಸಿಕೊಂಡಿದ್ದ ಚಿನ್ನವನ್ನು ಮುಟ್ಟುಗೋಲು ಹಾಕಿ ಜೊತೆಗೊಂದು ಲಕ್ಷ ರೂಪಾಯಿ ದಂಡ ವಿಧಿಸಲಾಯಿತು. ಈ ಆಜ್ಞೆಯ ವಿರುದ್ಧ ಆಪಾದಿತರು ಮೇಲ್ಮನವಿ ಸಲ್ಲಿಸಿದರು. ಆಗ ಕೇಂದ್ರದಲ್ಲಿ ಜನತಾ ಪಾರ್ಟಿ ಆಡಳಿತದಲ್ಲಿತ್ತು. ಆರ್. ಎಸ್. ಎಸ್. ಸಂಬಂಧಿ ಶ್ರೀ ಸತೀಶ್ ಚಂದ್ರ ಅಗರ್‌ವಾಲಾರವರು ಕೇಂದ್ರದಲ್ಲಿ ರಾಜ್ಯ ಆರ್ಥಿಕ ಮಂತ್ರಿಗಳಾಗಿದ್ದರು. ಇವರು ಸಹಾಯ ಪಡೆದು ಮೇಲ್ಮನವಿಯಲ್ಲಿ ಜಯಿಸಲು ಆಪಾದಿತ ತಮ್ಮ ಒಬ್ಬ ಏಜೆಂಟರ ಮೂಲಕ ತುಮಕೂರಿನ ಇಬ್ಬರು ಆರ್. ಎಸ್. ಎಸ್. ಸಂಬಂಧಿ ಶಾಸಕರುಗಳಾದ ಶ್ರೀ ಮಲ್ಲಿಕಾರ್ಜುನಯ್ಯ, ಶ್ರೀ ಶಿವನಂಜಪ್ಪ ಮತ್ತು ಆರ್. ಎಸ್. ಎಸ್. ಪ್ರಮುಖ ರಾಜಾಚಾರ್ (ಇವರು ಬೆಜೆಪಿ ರಾಜ್ಯ ಕಛೇರಿಯಲ್ಲಿ ವ್ಯಸ್ಥಾಪಕರಾಗಿದ್ದಾರೆ), ಈ ಮೂವರ ಮೊರೆಹೊಕ್ಕರು. ಈ ಮೂವರು ಒಟ್ಟಾಗಿ ಶ್ರೀ ಸತೀಶ್ ಚಂದ್ರ ಅಗರ್ ವಾಲಾರವರಿಗೆ ದಿವಂಗತ ಬಾಪೂರಾವ್ ದೇಶಪಾಂಡೆ (ಮಾಜಿ ಶಾಸಕರು ಮತ್ತು ಆರ್. ಎಸ್. ಎಸ್. ನ ಪ್ರಮುಖರು)ಯವರಿಂದ ಪತ್ರ ತೆಗೆದುಕೊಂಡು ದಿಲ್ಲಿಗೆ ಮೂರು ಬಾರಿ ವಿಮಾನದಲ್ಲಿ ಸತೀಶ್ ಚಂದ್ರ ಅಗರ್‌ವಾಲಾರನ್ನು ಸಂಪರ್ಕಿಸಿರುವುದಾಗಿಯೂ ಅವರಿಂದ ಭರವಸೆ ದೊರೆತಿರುವುದಾಗಿಯೂ, ಚಿನ್ನದ ವ್ಯಾಪಾರಿಗೆ ಭರವಸೆ ಕೊಟ್ಟು ಅವರಿಂದ 30 ಸಾವಿರ ರೂಪಾಯಿ ಪಡೆದು ಮೂವರು ಹಂಚಿಕೊಂಡರು. ಆದರೆ ಮೇಲ್ಮನವಿಯ ತೀರ್ಪು ಮಾತ್ರ ಹೊರಬೀಳಲಿಲ್ಲ. ತಿಂಗಳುಗಟ್ಟಲೆ ತೀರ್ಪು ಹೊರಬೀಳದಿದ್ದಾಗ ವ್ಯಾಪಾರಿ ಹಣ ಪಡೆದ ಮೇಲ್ಮಾಣಿಸಿದ ಆರ್. ಎಸ್. ಎಸ್. ಮಂದಿಯನ್ನು ವಿಚಾರಿಸತೊಡಗಿದರು. ಅದಕ್ಕವರು ಭರವಸೆ ಕೊಡುತ್ತಲೇ ಬಂದರು, ಆದರೆ ಕಡೆಗೆ ಮೇಲ್ಮನವಿಯ ತೀರ್ಪು ಹೊರಬಿದ್ದಾಗ ಅದು ವ್ಯಾಪಾರಿಗೆ ವಿರೋಧವಾಗಿತ್ತು. ತಬ್ಬಿಬ್ಬಾದ ಆಪಾದಿತರು ದಿಲ್ಲಿಗೆ ಮೂರು ಬಾರಿ ಮೂವರು ವಿಮಾನದಲ್ಲಿ ಹೋಗಿ ಪಂಚತಾರಾ ಹೋಟೆಲಿನಲ್ಲಿ ದೌಲತ್ತು ಮಾಡಿ ಬಂದ ಖರ್ಚು ಹೋಗಲಿ, ಪಡೆದ ನಗದು ಹಣ 30 ಸಾವಿರ ರೂಪಾಯಿಗಳನ್ನಾದರೂ ಹಿಂತಿರುಗಿಸಿ ಎಂದು ಕಾಡಿಸತೊಡಗಿದರು. ಹೀಗೆ ಕಾಡಿಸಿದಾಗ, ಒಬ್ಬ ಶಾಸಕರಾದ ಶ್ರೀ ಶಿವನಂಜಪ್ಪನವರು (ಇವರು ನಂತರ ಆರ್. ಎಸ್. ಎಸ್. ಸಂಪರ್ಕ ಕಡಿದುಕೊಂಡು ಜನತಾ ಬಿಟ್ಟು ಕಾಂಗ್ರೆ ಸೇರಿಕೊಂಡರು) ತಮಗೆ ದಕ್ಕಿದ್ದ 10 ಸಾವಿರ ರೂಪಾಯಿಗಳನ್ನು ತಿಂಗಳಿಗೆ 2 ಸಾವಿರದಂತೆ ಚೆಕ್ಕು ಮೂಲಕ ಹಿಂತಿರುಗಿಸಿ ತಮ್ಮ ಯೋಗ್ಯತೆಯನ್ನು ಕಾಪಾಡಿಕೊಂಡರು. ಉಳಿದ ಇಬ್ಬರು ಹಿಂತಿರುಗಿಸದೇ ಸತಾಯಿಸುತ್ತಲೇ ಬಂದಾಗ ನನ್ನವರೆಗೆ ದೂರು ಬಂತು. ನಾನು ಆಗ ಬಿಜೆಪಿ ಅಧ್ಯಕ್ಷನಾಗಿದ್ದೆ. ದೂರು ತಂದವರಿಗೆ ನಾನು ನನ್ನ ನಿಸ್ಸಹಾಯಕತೆಯನ್ನು ವಿವರಿಸಿದಾಗ ಆತ ಇದನ್ನು ಬಹಿರಂಗ ಪಡಿಸಿ ಬಿಜೆಪಿಗೆ ಕಳಂಕ ಹಚ್ಚುತ್ತೇನೆಂದು ಬೆದರಿಸಿದ. ನೀವದನ್ನು ಬಹಿರಂಗಪಡಿಸಿದರೆ ನಾನು ಆ ಇಬ್ಬರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ, ಹಣ ವಸೂಲಿ ಮಾಡಿಕೊಡಲು ಈಗ ನನ್ನಿಂದ ಸಾಧ್ಯವಿಲ್ಲ ಎಂದು ಹೇಳಿದೆ. ಮುಂದೇನಾಯಿತೋ ತಿಳಿಯದು. ಆತ ಅದನ್ನಂತೂ ಬಹಹಿರಂಗಪಡಿಸಲಿಲ್ಲ. ಆದರೆ ಒಂದು ದಿವಸ ನಾನು ಮತ್ತು ಶ್ರೀ ಮಲ್ಲಿಕಾರ್ಜುನಯ್ಯನವರು ಒಟ್ಟಿಗೆ ಕಾರಿನಲ್ಲಿ ಹೋಗುತ್ತಿದ್ದಾಗ ಈ ಬಗ್ಗೆ ಪ್ರಸ್ತಾಪಿಸಿದೆ. ಆಗ ಅವರು ಪ್ರಕರಣವನ್ನು ಅಲ್ಲಗಳೆಯಲಿಲ್ಲ. ಬದಲಾಗಿ 'ನಾನು ರೈಲಿನಲ್ಲಿ ಬರುತ್ತೇನೆಂದರೂ ವಿಮಾನದಲ್ಲಿ ಕರೆದುಕೊಂಡು ಹೋಗಿ, ಅಷ್ಟು ಖರ್ಚು ಇಷ್ಟು ಖರ್ಚು ಎಂದು ಹೇಳಿದರೆ, ನಾನು ಹೇಗೆ ವಾಪಾಸು ಕೊಡಲಿ !' ಎಂದು ಉದ್ಗರಿಸಿದರು. ನಾನು ಮುಂದೇನೂ ಮಾತನಾಡಲಿಲ್ಲ.

ಮಾಜಿ ಶಾಸಕ ಶ್ರೀ ಮಳ್ಳೂರು ಆನಂದರಾಯರು ಒಬ್ಬ ಕಟ್ಟಾ ಆರ್. ಎಸ್. ಎಸ್. ಮನುಷ್ಯ. ಆರ್‌ಎಸ್‌ಎಸ್ ನ ಪೂರ್ಣ ಸಮಯದ ಪ್ರಚಾರಕರಾಗಿಯೂ ಇವರು ಕೆಲಸ ಮಾಡಿರುವುದಲ್ಲದೇ ಇನ್ನೂ ಹಲವಾರು ರೀಯಲ್ಲಿ ಆರ್ ಎಸ್‌ಎಸ್ ಗಾಗಿ ದುಡಿದವರು, ಇವರು ಹಿಂದೆ ವಿಧಾನಸಭೆಯ ಸದಸ್ಯರಾಗಿದ್ದಾಗ ನಿಸ್ಸಾಹಾಯಕ ವೃದ್ಧ ವಿಧವೆಯೊಬ್ಬಳು, ತನಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾಗಿದ್ದ ನಿವೇಶನಕ್ಕೆ ಸಂಬಂಧಿಸಿದ ಸಮಸ್ಯೆಯ ಪರಿಹಾರಕ್ಕೋಸ್ಕರ ಹೋದಳು. ನಿಸ್ಸಹಾಯಕ ಹಾಗೂ ತಿಳುವಳಿಕೆಯಿಲ್ಲದ ಆ ಮಹಿಳೆಯ ಸಮಸ್ಯೆಯನ್ನು ಅರ್ಥಮಾಡಿಕೊಂಡು ಆಕೆಗೆ ನೆರವು ನೀಡುವುದು ಜನತಾ ಪ್ರತಿನಿಧಿಯಾದ ಈ ಶಾಸಕರ ಕರ್ತವ್ಯವಾಗಿತ್ತು. ಆದರೆ ಪದೇ ಪದೇ ಪ್ರಾಮಾಣಿಕತನದ ಬಗ್ಗೆ ಪ್ರತಿಪಾದನೆ ಮಾಡುವ ಆರ್. ಎಸ್. ಎಸ್. ನ ಅಧ್ವರ್ಯುರಾದ ಶ್ರೀ ಮಳ್ಳೂರು ಆನಂದರಾಯರು, ಆ ಮುದುಕಿಗೆ ಸಹಾಯ ಮಾಡುವ ಬದಲು ಆಕೆಯನ್ನು ವಂಚಿಸಿದರು. ಆಕೆಗೆ ಸಹಾಯ ಮಾಡುವುದಾಗಿ ನಂಬಿಸಿ ಆಕೆಯ ಅಜ್ಞಾನದ ದುರ್ಲಾಭ ಪಡೆದು ಆಕೆಗೆ ಮಂಜೂರಾಗಿದ್ದ ನಿವೇಶನವನ್ನೇ ಅಪಹರಿಸಿಬಿಟ್ಟರು. ತುಂಬಾ ಹೇಯವಾದ ವಂಚನೆಯ ಪ್ರಕರಣಕ್ಕೆ ಅಗತ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು ದಾಖಲೆಗಳಲ್ಲಿ ದೊರೆಯುತ್ತವೆ. ಹೀಗೆ ಆರ್. ಎಸ್. ಎಸ್. ತರಬೇತಿ ಪಡೆದವರ ಅಪ್ರಾಮಾಣಿಕ ಭಂಡ ನಡವಳಿಕೆಗೆ ಉದಾಹರಣೆಗಳು ಎಷ್ಟು ಬೇಕಾದರೂ ದೊರೆಯುತ್ತವೆ. ಒಟ್ಟಿನಲ್ಲಿ ಆರ್. ಎಸ್. ಎಸ್. ನವರ ಮಾತಿಗೂ ಕೃತಿಗೂ ಯಾವ ತಾಳಮೇಳವು ಇಲ್ಲವೆನ್ನುವುದು ಸ್ಪಷ್ಟ.

ಅಸಹ್ಯ ನಡುವಳಿಕೆಯನ್ನು ಪ್ರತ್ಯಕ್ಷದಲ್ಲಿ ಆಚರಿಸುವ ಈ ಜನ ತಮ್ಮ ನಿಜರೂಪವನ್ನು ಅಡಗಿಸಿಟ್ಟುಕೊಳ್ಳುವುದಕ್ಕೆ ಅನೇಕ ಹೊದಿಕೆಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಕೆನರಾ ಬ್ಯಾಂಕಿನಲ್ಲಿ ಅಧಿಕಾರಿಯೊಬ್ಬರಿದ್ದರು. ಅವರ ಹೆಸರು ರಾಘವೇಂದ್ರ ರಾವ್ ಎಂದು. ಇವರು ಆರ್. ಎಸ್. ಎಸ್. ಗಣ್ಯರಲ್ಲಿ ಪ್ರಮುಖರು. ಈ ವ್ಯಕ್ತಿ ಕೆನರಾ ಬ್ಯಾಂಕಿನಲ್ಲಿ ಸುಮಾರು 16 ಲಕ್ಷ ರೂಪಾಯಿ ವಂಚನೆಯ ಘಟನೆಯೊಂದರಲ್ಲಿ ಆಪಾದಿತರಾದರು. ಇದಾದ ನಂತರ ಇವರು ಆರ್. ಎಸ್. ಎಸ್. ನಲ್ಲಿ ಇನ್ನಷ್ಟು ಪ್ರಭಾವವುಳ್ಳವರಾದರು. ಹೀಗೆ ಬ್ಯಾಂಕಿಗೆ ಕನ್ನ ಹಾಕಿ ಪಡೆದ ಹಣದಿಂದ ಬೆಂಗಳೂರು-ಮೈಸೂರು ರಸ್ತೆಯಲ್ಲಿದ್ದ ಮೆಟ್ರೋ ಮೇಲಿಯಬಲ್ ಎಂಬ ಕಾರ್ಖಾನೆಯನ್ನು ಕೆಲವು ಜನ ಆರ್. ಎಸ್. ಎಸ್. ಪ್ರಮುಖರು (ಉನ್ನತ ಮಟ್ಟದ ಪ್ರಚಾರಕರು) ಸೇರಿ ಸುಮಾರು 8 ಲಕ್ಷ ರೂಪಾಯಿ ಬೆಲೆಗೆ ಖರೀದಿಸಿದರು. ನಂತರ ಆ ಕಾರ್ಖಾನೆಯನ್ನು ಮುಚ್ಚಿ, ಅಲ್ಲಿದ್ದ ಕಾರ್ಮಿಕರನ್ನು ವಂಚಿಸಿ, ಅಲ್ಲಿದ್ದ ಆಸ್ತಿ ಪಾಸ್ತಿಯನ್ನೆಲ್ಲಾ ಮಾರಾಟ ಮಾಡಲಾಯಿತು. ಹಾಗೆಯೇ ಬೆಂಗಳೂರಿನ ಮಿಥಿಕ್ ಸೊಸೈಟಿಯೆನ್ನುವ ಅಮೂಲ್ಯವಾದ ಸಂಸ್ಥೆಯೊಂದನ್ನು ಕುತಂತ್ರದಿಂದ ಆರ್. ಎಸ್. ಎಸ್. ನವರು ವಶಪಡಿಸಿಕೊಂಡು ಅದರ ಆಸ್ತಿ ಪಾಸ್ತಿಗಳನ್ನು ಕಬಳಿಸಿ, ಸಾರ್ವಜನಿಕರಿಗೆ ಹಾಗೂ ಸರಕಾರಕ್ಕೆ ಮಾಡಿರುವ ವಂಚನೆಯ ಬಗ್ಗೆ ಆಮೂಲಾಗ್ರ ತನಿಖೆ ನಡೆಸಿದರೆ ಅನೇಕ ಆರ್. ಎಸ್. ಎಸ್. ಪ್ರಮುಖರು ಜೈಲಿಗೆ ಹೋಗಬೇಕಾದೀತು.


ಗುರುದಕ್ಷಿಣೆಯೆನ್ನುವ ಹಬ್ಬವೊಂದನ್ನು ಆರ್‌ಎಸ್‌ಎಸ್ ಪ್ರತಿ ವರ್ಷ ಆಚರಿಸಿ ಅಭಿಮಾನಿಗಳಿಂದ ಧನ ಸಂಗ್ರಹ ಮಾಡುವುದು ಇವರ ಕಾರ್ಯತಂತ್ರದಲ್ಲಿ ಒಂದು. ಈ ಮುಖಾಂತರ ಇವರು ದೇಶದಾದ್ಯಂತ ಕೋಟ್ಯಾಂತರ ರೂಪಾಯಿ ಸಂಗ್ರಹಿಸುತ್ತಾರೆ. ಕಾನೂನು ರೀತಿ ಈ ಹಣಕ್ಕೆ ಆರ್. ಎಸ್. ಎಸ್. ನವರು ಆದಾಯ ತೆರಿಗೆ ಕೊಡಬೇಕಾಗಿದ್ದರೂ ನಾನಾ ರೀತಿಯ ವಂಚನೆಯ ಜಾಲವನ್ನು ಒಡ್ಡಿ ತೆರಿಗೆ ಮೋಸ ಮಾಡಿ ಕಳ್ಳತನ ವ್ಯಾಪಾರಗಳನ್ನು ಅನುಸರಿಸುತ್ತಿರುವುದು ಗೊತ್ತಾದಾಗ ತುಂಬಾ ಸೋಜಿಗವೆನಿಸಿತು. ಆರ್. ಎಸ್. ಎಸ್. ನ ಸರ್ವೋಚ್ಚ ಮುಖಂಡ ಶ್ರೀ ಬಾಳಾಸಾಬ್ ದೇವರಸ್ ರವರೇ ನ್ಯಾಯಾಲಯದ ಮುಂದೆ ತೆರಿಗೆ

ಪುಟ 11 ಕ್ಕೆ

ರೈತವಿರೋಧಿ ಪಕ್ಷಗಳನ್ನು ಪರಾಭವಗೊಳಿಸಲು ಕರೆ

ಭಾರತ ಕೃಷಿ ರಂಗ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳನ್ನು ವಿಶ್ಲೇಷಿಸಿ ಪರ್ಯಾಯ ಕೃಷಿ ನೀತಿಯನ್ನ ದೇಶದಾದ್ಯಂತ ಜನರ ನಡುವೆ ಕೊಂಡೊಯ್ಯುವ ಭಾಗವಾಗಿ ಕರ್ನಾಟಕ ಪ್ರಾಂತ ರೈತ ಸಂಘ(ಎಪಿಕೆಎಸ್) ಮತ್ತು ಪ್ರಾಂತ ಕೃಷಿಕೂಲಿಕಾರರ ಸಂಘಟನೆಗಳು ಕಮಲಾಪುರದ ವಿಧಾನಸಭಾ ಕ್ಷೇತ್ರದಲ್ಲಿ ಎರಡು ಸಮಾವೇಶಗಳನ್ನು ಸಂಘಟಿಸಿದ್ದವು. ಮುಂಬರುವ ಚುನಾವಣೆಗಳಲ್ಲಿ ರೈತ, ಕೂಲಿಕಾರ ಜನಸಾಮಾನ್ಯರು ಕೈಗೊಳ್ಳಬೇಕಾದ ರಾಜಕೀಯ ತೀರ್ಮಾನಗಳನ್ನು ಇಲ್ಲಿ ಗುರುತಿಸಲಾಯಿತು.

ಮಾತನಾಡುತ್ತಿರುವವರು ಕಿಸಾನ್ ಸಭಾದ ರಾಷ್ಟ್ರಾಧ್ಯಕ್ಷರಾದ ಎಸ್.ರಾಮಚಂದ್ರ ಪಿಳ್ಳೆ ವೇದಿಕೆಯಲ್ಲಿ ಮೇಘರಾಜ ಕಠಾರೆ, ಮಾರುತಿ ಮಾನ್ಪಡೆ, ಜಿ.ಎನ್. ಹಾಗೂ ಬಸವರಾಜ ಮರಡಿ, ಅನುವಾದ ಎಸ್.ವೈ.ಜಿ.



ರೈತ ವಿರೋಧಿ ನೀತಿಗಳನ್ನು ಅನುಸರಿಸುತ್ತಾ ರೈತರು ಸಾಲುಸಾಲಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವಾದ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳನ್ನು ಮುಂಬರುವ ಚುನಾವಣೆಗಳಲ್ಲಿ ಪರಾಭವಗೊಳಿಸಬೇಕೆಂದು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರು ಹಾಗೂ ರಾಜ್ಯ ಸಭಾ ಸದಸ್ಯರೂ ಆಗಿರುವ ಕಾಮ್ರೇಡ್ ರಾಮಚಂದ್ರನ್ ಪಿಳ್ಳೈ ಕರೆನೀಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಗುಲ್ಬರ್ಗಾ ಜಿಲ್ಲಾಸಮಿತಿಯು ಕಮಲಾಪುರದಲ್ಲಿ ಹಮ್ಮಿಕೊಂಡಿದ್ದ ರೈತ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ವಾಜಪೇಯಿ ಸರ್ಕಾರದ ಉದಾರೀಕರಣ, ಖಾಸಗೀಕರಣ ನೀತಿಗಳಿಂದ ದೇಶದಲ್ಲಿ ಬಡತನ, ನಿರುದ್ಯೋಗ ಬೆಳೆಯುವಂತಾಗಿದೆಯೇ ಹೊರತು ದೇಶ ಬೆಳಗುತ್ತಿಲ್ಲ; 'ಭಾರತ ಪ್ರಕಾಶಿಸುತ್ತದೆ' ಎಂದು ಎನ್.ಡಿ.ಎ.ಸರ್ಕಾರದ ವಕ್ತಾರರು ಹೇಳಿಕೊಳ್ಳುವುದರಲ್ಲಿ ಅರ್ಥವೇ ಇಲ್ಲ ಎಂದು ಅವರು ಹೇಳಿದರು.

ವಿಶ್ವಸಂಸ್ಥೆಯ ಒಂದು ವರದಿಯ ಪ್ರಕಾರ ಭಾರತದಲ್ಲಿ ಶೇಕಡಾ 72ರಷ್ಟು ಜನಗಳಿಗೆ ಕನಿಷ್ಠ ನೈರ್ಮಲ್ಯ ವಾತಾವರಣ ಲಭ್ಯವಿಲ್ಲ; ಶೇಕಡಾ 64 ರಷ್ಟು ಜನಗಳಿಗೆ ಶೌಚಾಲಯದ ಸೌಲಭ್ಯವಿಲ್ಲ; ಶೇಕಡ 0.5 ರಷ್ಟು ಜನಗಳಿಗೆ ಮಾತ್ರ ಜೀವ ಉಳಿಸುವ ಔಷಧಿಗಳನ್ನು ಖರೀದಿಸುವ ಶಕ್ತಿಯಿದೆ. ಸ್ವಾತಂತ್ರ್ಯ ಸಿಕ್ಕು 5 ದಶಕಗಳು ಕಳೆದರೂ ದೇಶದಲ್ಲಿ ಸಾಕ್ಷರತಾ ಶೇಕಡ 60 ರಷ್ಟಾಗಿಲ್ಲ. ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಭಾರತ ಪ್ರಕಾಶಿಸುತ್ತದೆ ಎಂದು ಹೇಳುವುದು ಹಾಸ್ಯಾಸ್ಪದವಾಗಿದೆ ಎಂದರು.

ಬಿ.ಜೆ.ಪಿ. ನೇತೃತ್ವದ ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಗಳಿಗಿಂತ ರಾಜ್ಯ ಕಾಂಗ್ರೆಸ್ ಸರ್ಕಾರದ ನೀತಿಗಳು ಭಿನ್ನವಾಗಿಲ್ಲ ಎಂದು ತಿಳಿಸಿದ ಕಾಮ್ರೇಡ್ ಪಿಳ್ಳೈ ಪರ್ಯಾಯ ಕೃಷಿ ನೀತಿಗಳನ್ನು ಜಾರಿಗೊಳಿಸಿದಾಗ ಮಾತ್ರ ರೈತ ಸಮುದಾಯ ಬದುಕುಳಿಯಲು ಸಾಧ್ಯ ಎಂದು ಹೇಳಿದರು.

ಕ್ರಾಂತಿಕಾರಿ ಭೂಸುಧಾರಣೆಗಳನ್ನು ಜಾರಿಗೆ ತಂದು ಹೆಚ್ಚುವರಿ ಭೂಮಿಯನ್ನು ಹಾಗೂ ಸರ್ಕಾರಿ ಭೂಮಿಯನ್ನು ಕೃಷಿ ಕೂಲಿಕಾರರಿಗೆ ಮತ್ತು ಬಡರೈತರಿಗೆ ಹಂಚಬೇಕು. ಇದರಿಂದ ದೇಶದಲ್ಲಿ ಕೃಷಿ ಉತ್ಪನ್ನ ಹೆಚ್ಚುತ್ತದೆ ಮಾತ್ರವಲ್ಲ ಕೃಷಿ ಕೂಲಿಕಾರರಿಗೆ ಕೆಲಸ ಸಿಗುವಂತಾಗುತ್ತದೆ ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೃಷಿ ಕೂಲಿಕಾರರಿಗೆ ಕನಿಷ್ಠ ವೇತನ ಹಾಗೂ ಸಾಮಾಜಿಕ ಭದ್ರತೆ ಒದಗಿಸುವಲ್ಲಿ ಸಂಪೂರ್ಣ ವಿಫಲವಾಗಿವೆ ಎಂದು ಆರೋಪಿಸಿದ ಎಸ್.ಆರ್.ಪಿ ಅವರು ಸರ್ಕಾರಗಳು ರೈತರ ಭೂಮಿಗೆ ಅಗತ್ಯವಾದ ನೀರಾವರಿಯನ್ನು ಒದಗಿಸಬೇಕು, ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಿ ರೈತರಿಗೆ ಅಗ್ಗದ ದರಗಳಲ್ಲಿ ಸಮರ್ಪಕ ವಿದ್ಯುತ್ ನೀಡಬೇಕು, ಕಡಿಮೆ ಬಡ್ಡಿದರದಲ್ಲಿ ಸಾಲಸೌಲಭ್ಯ ಕಲ್ಪಿಸಬೇಕು, ಸಮಗ್ರ ಬೆಳೆ ವಿಮಾಯೋಜನೆಯನ್ನು ಜಾರಿಗೊಳಿಸಬೇಕು, ಹೊರ ದೇಶಗಳಿಂದ ಆಮದಾಗುತ್ತಿರುವ ಕೃಷಿ ಉತ್ಪನ್ನಗಳ ಮೇಲೆ ಗರಿಷ್ಠ ಸುಂಕವನ್ನು ಹಾಕಿ ಸ್ಥಳೀಯ ರೈತರ ಉತ್ಪನ್ನಗಳಿಗೆ ಸರಿಯಾದ ಬೆಲೆ ದೊರೆಯುವಂತೆ ಮಾಡಬೇಕು ಎಂದರು.

ದೇಶದಲ್ಲಿ ಎಡಪಕ್ಷಗಳು ಮಾತ್ರ ರೈತರ, ಕೃಷಿ ಕೂಲಿಕಾರರ ಮತ್ತು ಸಮಸ್ತ ದುಡಿಯುವ ಜನವಿಭಾಗಗಳ ಹಿತರಕ್ಷಣೆಗೆ ಬದ್ಧವಾಗಿವೆ ಎಂದು ಹೇಳಿದ ಅವರು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ 27 ವರ್ಷಗಳ ಸಾಧನೆಗಳನ್ನು ನೆನಪಿಸಿಕೊಂಡರು. ಒಂದು ವೇಳೆ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಚುನಾವಣೆಗಳಲ್ಲಿ ಗೆದ್ದರೆ ಸಧ್ಯಕ್ಕೆ ಅನುಸರಿಸುತ್ತಿರುವ ಜನವಿರೋಧಿ, ರೈತ ವಿರೋಧಿ ನೀತಿಗಳನ್ನೇ ಮುಂದುವರೆಸಲಿವೆ ಎಂದು ಎಚ್ಚರಿಸಿದರು.

ಸಮಾವೇಶದಲ್ಲಿ ಭಾಗವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಅವರು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ತಪ್ಪು ಕೃಷಿ ನೀತಿಯಿಂದ ಸಾಲದ ಹೊರೆ ತಾಳಲಾರದೆ ದೇಶದಲ್ಲಿ 6 ಸಾವಿರಕ್ಕೂ ಹೆಚ್ಚು ರೈತರು ಈ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಮತ್ತು ಈ ಪೈಕಿ ರಾಜ್ಯದ 650 ಕ್ಕೂ ಹೆಚ್ಚು ಮಂದಿ ಇದ್ದಾರೆ ಎಂದು ಹೇಳಿದರು.

ರೈತರ ಸಾಲಗಳನ್ನು ಮನ್ನಾ ಮಾಡಲು ಒಪ್ಪದ ಎಸ್.ಎಂ.ಕೃಷ್ಣ ಸರ್ಕಾರವು ದೊಡ್ಡ ದೊಡ್ಡ ಉದ್ದಿಮೆದಾರರ ಸಾಲಗಳನ್ನು ಮನ್ನಾ ಮಾಡುತ್ತಿದೆ ಎಂದು ಆರೋಪಿಸಿದ ಅವರು ಬಡವರಿಗೆ ನೀಡಲಾಗಿದ್ದ 65 ಲಕ್ಷ ಹಸಿರು ಪಡಿತರ ಕಾರ್ಡುಗಳನ್ನು ಕೇಂದ್ರ ಸರ್ಕಾರದ ಆದೇಶದ ಮೇರೆಗೆ 38 ಲಕ್ಷಕ್ಕೆ ಇಳಿಸಿದೆ ಎಂದರು.

ರಾಜ್ಯದಲ್ಲಿ ಬಡತನದ ರೇಖೆಗಿಂತ ಕೆಳಗಿರುವ ಎಲ್ಲಾ ಬಡವರಿಗೂ ಅಂತ್ಯೋದಯ ಯೋಜನೆಯನ್ನು ಜಾರಿಗೊಳಿಸಬೇಕು ಎಂದು ಆಗ್ರಹಿಸಿದ ಅವರು ಇದಕ್ಕಾಗಿ ಸಂಘಟಿತ ಹೋರಾಟದ ಅಗತ್ಯವಿದೆ ಎಂದರು.

ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ ಅವರು ಮಾತನಾಡಿ ಕೇಂದ್ರದಲ್ಲಿ ಬಿ.ಜೆ.ಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ರೈತರ ಬವಣೆ ಮಿತಿಮೀರಿದೆ. ಹಾಲಿಗಿಂತ ನೀರಿನ ಬೆಲೆ ಹೆಚ್ಚಾಗಿದೆ. ರೈತರಿಗೆ ಸಾಲ ನೀಡಬೇಕಾದರೆ ಹಲವಾರು ದಾಖಲೆಗಳನ್ನು ಒದಗಿಸಲು ಸತಾಯಿಸುವ ಬ್ಯಾಂಕುಗಳು ಶ್ರೀಮಂತರಿಗೆ ಅನಾಯಾಸವಾಗಿ ಸಾಲಗಳನ್ನು ನೀಡುತ್ತಿವೆ. ಸಾಲ ವಸೂಲಾತಿಯಲ್ಲಿಯೂ ತಾರತಮ್ಯ ವಿಸಗಲಾಗುತ್ತಿದೆ ಎಂದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಎಸ್.ವೈ.ಗುರುಶಾಂತ್, ಪ್ರಾಂತ ರೈತ ಸಂಘದ ಜಿಲ್ಲಾ ಮುಖಂಡರಾದ ವೀರಣ್ಣಗೌಡ ಪಾಟೀಲ್, ವಕೀಲರಾದ ಬಸವರಾಜ ಮರಡಿ, ಆದಿನಾಥ ಹಿರಾ, ಮೇಘರಾಜ ಕಠಾರೆ ಮೊದಲಾದ ಮುಖಂಡರು ಉಪಸ್ಥಿತರಿದ್ದರು.

ವಿಶ್ವ ಬ್ಯಾಂಕ್ ನಿರ್ದೇಶಿತ ಕೃಷಿ ನೀತಿಯನ್ನು ವಿರೋಧಿಸಿ, ಪರ್ಯಾಯ ಕೃಷಿ ನೀತಿ ಜಾರಿಗಾಗಿ ಒತ್ತಾಯಿಸಿ ಆಳಂದದಲ್ಲಿ ನಡೆದ ರೈತರ ಇನ್ನೊಂದು ಸಮಾವೇಶದಲ್ಲಿಯೂ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾದ ಎಸ್.ಆರ್.ಪಿಳ್ಳೈ ಭಾಗವಹಿಸಿ ಮಾತನಾಡಿದರು. ಮೇಲೆ ಹೆಸರಿಸಿದ ಮುಖಂಡರುಗಳಲ್ಲದೆ ಚನ್ನಪ್ಪ ಆನೆಗುಂದಿ, ಪ್ರೊ.ಆರ್.ಕೆ.ಹುಡುಗಿ, ಭೀಮಶೇಟಿ ಎಂಪಳಿ, ಸುಧಾಮ ಧನ್ನಿ, ವೀರಭದ್ರಪ್ಪ ಕಲುಬುರ್ಗಿ, ಶ್ರೀಮಂತರಾವ್ ಪಾಟೀಲ್ ಮೊದಲಾದವರು ಭಾಗವಹಿಸಿದ್ದರು.



ಐಕ್ಯರಂಗ

4 ದಶಕಗಳ ಹಿಂದೆ

ಗುಲ್ಬರ್ಗದಲ್ಲಿ ಹಸಿದ ಜನರ ಪ್ರದರ್ಶನ

ಗುಲ್ಬರ್ಗಾದಲ್ಲಿ ತಾ. 8 ರಂದು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಗಂಡಸರು, ಹೆಂಗಸರು ಮತ್ತು ಮಕ್ಕಳನ್ನೊಳಗೊಂಡು ಸುಮಾರು ಒಂದು ಸಾವಿರ ಜನರು ಆಹಾರ ಧಾನ್ಯಗಳ ಬೆಲೆಯೇರಿಕೆ ಮತ್ತು ಅವ್ಯವಸ್ಥೆಯ ವಿತರಣಾ ಕ್ರಮಗಳನ್ನು ಪ್ರತಿಭಟಿಸಿ ಒಂದು ಪ್ರದರ್ಶನ ನಡೆಸಿದರು.

★

'ಗಡಿ ಬಂದ್' ನಿಜಲಿಂಗಪ್ಪನವರ ಮನವಿ!

ವರ್ತಕ ವರ್ಗಕ್ಕೆ ಕೈಮುಗಿದು ಮನವಿ ಮಾಡಿಕೊಂಡು ಮುನ್ಸೂಚನೆ ನೀಡುವುದಲ್ಲಿ ಮೈಸೂರಿನ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಎತ್ತಿದ ಕೈ.

ಇಂದಿಗೆ ಶ್ರೀ ನಿಜಲಿಂಗಪ್ಪನವರು ವರ್ತಕ [illegible] ಒಂದು ಮುನ್ಸೂಚನೆಯನ್ನೂ ನೀಡಿದ್ದಾರೆ.

'ನನ್ನ ಹಿತೋಕ್ತಿ' ಆಲಿಸಿ, ಇರುವ ಧಾನ್ಯವನ್ನು ಮಾರಿಬಿಡಿ. ಅತಿ ಶೀಘ್ರದಲ್ಲಿಯೇ ಧಾನ್ಯ ಸಾಗಾಣಿಕೆಗೆ(ಅಕ್ಕಿ) ರಾಜ್ಯಗಡಿಗಳನ್ನು ಬಂದ್ ಮಾಡಲಾಗುವುದು. ಧಾನ್ಯ ಕೊಳ್ಳುವ ಬೆಲೆಯನ್ನು ಗೊತ್ತು ಮಾಡಲಾಗುವುದು. 'ಗಡಿ ಬಂದಾಗಿ, ಬೆಲೆ ಗೊತ್ತಾಗುವುದಕ್ಕೆ ಮುಂಚೆ ವರ್ತಕರು ತಮ್ಮ ಹಿತದೃಷ್ಟಿಯಿಂದಲೇ ತಮ್ಮಲ್ಲಿರುವ ದಾಸ್ತಾನನ್ನು ಮಾರಬೇಕೆಂದು ಸಲಹೆ ಮಾಡುತ್ತೇನೆ' ಎಂದಿದ್ದಾರೆ ಶ್ರೀ ನಿಜಲಿಂಗಪ್ಪನವರು. ಅ.ಭಾ. ತಯಾರಕರ ಸಂಘದ ಕೇಂದ್ರ ಸಮಿತಿಯ ಸಭೆಯನ್ನು ಬೆಂಗಳೂರಿನಲ್ಲಿ ಉದ್ಘಾಟಿಸುತ್ತಾ, ಹೇಳಿದ ಶ್ರೀ ನಿಜಲಿಂಗಪ್ಪನವರ ಈ ಮನವಿ, ಸಲಹೆ, ಹಿತೋಕ್ತಿ, ಎಚ್ಚರಿಕೆಗಳು ವ್ಯಾಪಾರೀ ವರ್ಗಕ್ಕೊಂದು ಮುನ್ಸೂಚನೆಗಳಂತಿವೆ. ಸರ್ಕಾರ ಮುಂದೆ ಕೈಗೊಳ್ಳಲಿರುವ ಕ್ರಮಗಳನ್ನು ಉಲ್ಲಂಘಿಸಿ ತಮ್ಮ ಅಕ್ರಮ ವ್ಯವಹಾರಗಳನ್ನು ಯಥಾ ಸಾಂಗವಾಗಿ ಸಾಗಿಸಲು ವ್ಯಾಪಾರೀ ವರ್ಗದವರಿಗೆ ಸಾಕಷ್ಟು ಅವಕಾಶವನ್ನು ಈ ಮುನ್ಸೂಚನೆಗಳು ನೀಡುತ್ತವೆ. ಇಂದಿನ ಆಹಾರ ಪರಿಸ್ಥಿತಿಯೇ ಇದಕ್ಕೊಂದು ನಿದರ್ಶನವಾಗಿದೆ!

★

ಮಂತ್ರಿಗಳೆದುರು ಕರಿಬಾವುಟ ಪ್ರದರ್ಶನ

ಮೈಸೂರಿನ ಆರೋಗ್ಯ ಮಂತ್ರಿ ಡಾ. ನಾಗಪ್ಪ ಆಳ್ವರವು ತಾ. 4 ರಂದು ಬಂಟ್ವಾಳಕ್ಕೆ ಭೇಟಿಯಿತ್ತಾಗ ಸರ್ಕಾರದ ಆಹಾರ ನೀತಿಯನ್ನು ಪ್ರತಿಭಟಿಸುವ ಸಲುವಾಗಿ ಕಮ್ಯುನಿಸ್ಟ್ ಪಾರ್ಟಿಯ ಸದಸ್ಯರು ಮತ್ತು ಹಿತೈಷಿಗಳು ಕರಿಬಾವುಟ ಪ್ರದರ್ಶನವನ್ನು ನಡೆಸಿದರು. ಪಾರ್ಟಿಯ ತಾಲ್ಲೂಕೂ ಸಮಿತಿ ಕಾರ್ಯದರ್ಶಿ ಕಾಂ. ವೈ.ನಾರಾಯಣ ಭಟ್ಟರು ಮುಂದಾಳತ್ವ ವಹಿಸಿದ್ದರು. ಪ್ರದರ್ಶನ ವೀಕ್ಷಿಸಲು ಕಿಕ್ಕಿರಿದು ಜನಸಂದಣಿ ಸೇರಿತ್ತು.

ಕುಂದಾಪುರದಲ್ಲಿಯೂ ತಾ. 2 ರಂದು ಡಾ. ನಾಗಪ್ಪ ಆಳ್ವರಿಗೆದುರಾಗಿ ಇಂತಹುದೇ ಒಂದು ಪ್ರದರ್ಶನ ಜರುಗಿತು.

★

ಸೋವಿಯತ್ ಜನತಾ ವಿಜ್ಞಾನದ ಮಹತ್ಸಾಧನೆ

ಪ್ರಥಮ ವ್ಯೋಮ ನೌಕೆ ಗಗನಕ್ಕೇರಿ ಇಳಿಯಿತು

ಮೂರು ಮಂದಿ ವಿಜ್ಞಾನಿಗಳನ್ನೊಳಗೊಂಡ ಪ್ರಥಮ ಸೋವಿಯತ್ ವ್ಯೋಮ ನೌಕೆಯೊಂದು ಅಕ್ಟೋಬರ್ 12 ರಂದು ಗಗನಕ್ಕೇರಿ, 24 ಗಂಟೆಗಳ ಕಾಲ ಕಕ್ಷಾಪಥದಲ್ಲಿ ವ್ಯೋಮ ಯಾತ್ರೆಗೈದು ದಿನಾಂಕ 13 ರಂದು ರಶ್ಯಾದಭೂಮಿಯ ಮೇಲೆ ಸುರಕ್ಷಿತವಾಗಿ ಇಳಿದ ವಾರ್ತೆ ಸಮಾಜವಾದಿ ಲೋಕಕ್ಕೆ ಅತ್ಯಂತ ಹರ್ಷದಾಯಕವಾಗಿದೆ.

'ವೋಸ್ ಖೋಡ್' (ಉದಯರವಿ) 'ಎಂಬ ಈ ಪ್ರಥಮ ಆಕಾಶ ನೌಕೆಯ ಚಾಲಕರಾಗಿ 37 ವರ್ಷ ಪ್ರಾಯದ ಇಂಜಿನಿಯರ್ ಕರ್ನಲ್ ವ್ಲಾಡಿಮಿರ್ ಕೋಮರವ್, ಕಾರ್ಯ ನಿರ್ವಹಿಸಿದ್ದರು.

38 ವರ್ಷ ಪ್ರಾಯದ ವಿಜ್ಞಾನಿ ಕೊನ್‌ಸ್ಟೆಂಟಿನ್ ಫಿಯೋಕ್ತಿಸ್ತೋವ್ ಮತ್ತು 27 ವರ್ಷದ ಸಿವಿಲ್ ಡಾಕ್ಟರ್ ಲೆಫ್ಟಿನೆಂಟ್ ಬೋರಿಸ್ ಯುಗೋರೋವ್ ಇವರು ಈ ಪ್ರಥಮ ವ್ಯೋಮ ನೌಕೆಯ ಪ್ರಥಮ ಗಗನ ಪ್ರವಾಸಿಗಳಾಗಿದ್ದರು. ವ್ಯೋಮ ಯಾತ್ರೆಯ ವೇಳೆ ಒದಗಬಹುದಾದಂಥಾ ಪ್ರತಿಕ್ರಿಯೆ ತೊಡಕುಗಳ ಕುರಿತು ವೈಜ್ಞಾನಿಕ ಸಂಶೋಧನೆ ನಡೆಸುವ ಉದ್ದೇಶದಿಂದ ಈ ವಿಜ್ಞಾನಿ ಮತ್ತು ಡಾಕ್ಟರರು ವ್ಯೋಯಮ ಯಾತ್ರೆ ಕೈಗೊಂಡಿದ್ದು, ಅವರು ನಡೆಸಿದ ವೈಜ್ಞಾನಿಕ ಸಂಶೋಧನೆಯ ಸಂಪೂರ್ಣ ಯಶಸ್ವಿಯಾಗಿದೆ. ಅವರು ಪಡೆದ ಅಮೂಲ್ಯ ವೈಜ್ಞಾನಿಕ ವಿವರಗಳ ಪರಿಶೀಲನೆ ನಡೆಸಲಾಗುತ್ತಿದ್ದು, ಮುಂದೆ ವ್ಯೋಮ ಪ್ರವಾಸಕ್ಕೆ ಅದರಿಂದ ಹೆಚ್ಚಿನ ಪ್ರಯೋಜನವಾಗುವುದು.

1961 ರಲ್ಲಿ ಪ್ರಥಮ ಗಗನ ಯಾತ್ರೆ ನಡೆಸಿದ ಯೂರಿ ಗಗಾರಿನ್ ನಂತರ ಸೋವಿಯತ್ ಒಕ್ಕೂಟವು ವ್ಯೋಮ ಯಾನ ಕ್ಷೇತ್ರದಲ್ಲಿ ಒಂದೊಂದೇ ಹೆಜ್ಜೆ ಮುಂದಿಡುತ್ತಾ ಬರುತ್ತಿರುವುದನ್ನು ಸಮಾಜವಾದೀ ಲೋಕದ ಜನತೆ ಮತ್ತು ವಿಶ್ವದ ಪುರೋಗಾಮಿ ಜನ ವರ್ಗಗಳೆಲ್ಲವೂ ಕುತೂಹಲ ಮಿಶ್ರಿತ ಹರ್ಷದಿಂದ ಸ್ವಾಗತಿಸುತ್ತಿವೆ.

ಪ್ರತಿಷ್ಠಿತ ವಿಜ್ಞಾನ ಸಂಸ್ಥೆಯಲ್ಲಿ ಜಾತ್ಯತೀತ-ಪ್ರಗತಿಪರ ಶಕ್ತಿಗಳ ಮಹತ್ವದ ವಿಜಯ

'ಪ್ರಸ್ತುತ' ಎಂಬ ಹೆಸರಿನ ಮುಖವಾಡ ಧರಿಸಿದ ಪ್ರತಿಷ್ಠಿತ ವಿಜ್ಞಾನ ಮಂದಿರದ ಆವರಣದಲ್ಲಿ ಫ್ಯಾಸಿಸ್ಟ್ ವಿಷ ವೈರಸ್ ಹಬ್ಬಿಸಿ ಬೆಳವ ಚೇತನಗಳನ್ನು ವಿಕೃತ ಮುಷ್ಟಿಯಲ್ಲಿಡಲು ಯತ್ನಿಸಿತು. ಆದರೆ ಪ್ರಗತಿಪರ-ಧರ್ಮನಿರಪೇಕ್ಷಿತ, ದೇಶಪ್ರೇಮಿ ಶಕ್ತಿಗಳು ಆ ಹುನ್ನಾರಗಳಿಗೆ ಮಣ್ಣು ಮುಕ್ಕಿಸಿದವು. ಈಗಲೂ ಆ ಸಮರ ನಡೆದಿದೆ. ಓದಿ...

ತಮ್ಮ ನಿಜವಾದ ವಿಕೃತ ಮುಖದೊಂದಿಗೆ IISC ಯಲ್ಲಿ ಕೆಲಸ ಮಾಡುವುದು ಕಷ್ಟಸಾಧ್ಯ ಎಂದು ಮನಗಂಡಿರುವ ಕೋಮುವಾದಿ ಕಳೆದ ಶೈಕ್ಷಣಿಕ ವರ್ಷದಲ್ಲಿ 'ಪ್ರಸ್ತುತ' ಎಂಬ ವೇದಿಕೆಯೊಂದನ್ನು ರಚಿಸಿಕೊಂಡು ನಡೆಸಿದ ದುಷ್ಟ ಪ್ರಯತ್ನಗಳು ಹಲವು. ಸಾವರ್‌ಕರ್‌ನ್ನು ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಎಂದು ಸಾಧಿಸಲು ಹೆಣಗುವುದು ಅದಕ್ಕೆ ಪೂರಕವಾಗಿ ಚಲನಚಿತ್ರ ಏರ್ಪಡಿಸುವುದು " ಶಹೀದ್ ಭಗತ್‌ಸಿಂಗ್ - ಕಮ್ಯುನಿಸ್ಟರನ್ನು ಖಂಡಿಸಿ ವಿರೋಧಿಸಿದ್ದರು ಎಂದು ಸಾಧಿಸಲು ಹೆಣಗುವುದು - ಆರ್‌ಎಸ್‌ಎಸ್ ಪ್ರೇರಿತ ಹಲವು 'ಬುದ್ಧಿಜೀವಿ'ಗಳನ್ನು ಕರೆಸಿ ಉಪನ್ಯಾಸಗಳ ಮೇಲೆ ಉಪನ್ಯಾಸಗಳನ್ನು ಏರ್ಪಡಿಸುವುದು. 'ಹಿಂದುತ್ವ'ವನ್ನು ಬಿಂಬಿಸುವ ಪೋಸ್ಟರ ಪ್ರಚಾರ ನಡೆಸುವುದು ಇತ್ಯಾದಿ... ಇತ್ಯಾದಿ....

'ಪ್ರಸ್ತುತ' ಎಂಬ ವೇದಿಕೆಯು ಹಿಂದಿನ ಎಬಿವಿಪಿ ಮುಖಂಡ, ಕರ್ನಾಟಕವನ್ನು ಗುಜರಾತ್ ಮಾಡುವುದಾಗಿ ಚೀರುತ್ತಿರುವ ಬಿಜೆಪಿ ಮುಖಂಡ ಅನಂತಕುಮಾರ್‌ನ ಕೃಪಾಪೋಷಿತ ನಾಟಕ ಮಂಡಳಿ ಎಂಬುದನ್ನು ಬಲ್ಲ IISC ನ ಪ್ರಗತಿಪರ - ಜಾತ್ಯತೀತ ವಿದ್ಯಾರ್ಥಿಗಳ ತಂಡ ಕೋಮುವಾದಿಗಳ ಸವಾಲನ್ನು ಎದುರಿಸುವ ಸಮರ್ಥ ಕಾರ್ಯಯೋಜನೆಯೊಂದಿಗೆ ಶ್ರಮಿಸುತ್ತಿದೆ. ಕೋಮುವಾದದ ವಿರುದ್ಧ ಪ್ರತಿಹಂತದಲ್ಲಿ ಪ್ರತಿರೋಧ ಒಡ್ಡಿದ ಈ ಗುಂಪು ಕೋಮುವಾದಿಗಳ ವಿಕೃತ ಮುಖವನ್ನು ಸಮರ್ಥವಾಗಿ ಬಯಲಿಗೆಳೆಯಿತು.

ಇದೇ ಪ್ರಕ್ರಿಯೆಯಲ್ಲಿ ಈ ತಂಡ ಫೋರಂ ಫಾರ್ ಇಂಡಿಯಾ(FPI- Forum for India) ಎಂಬ ವೇದಿಕೆಯನ್ನು ರೂಪಿಸಿ ಹಲವು ಹಂತದ ಪ್ರಚಾರಾಂದೋಲನ ನಡೆಸಿತು.

ವಿದ್ಯಾರ್ಥಿ ಸಂಘದ ಚುನಾವಣೆ - ಜಾತ್ಯತೀತ ಶಕ್ತಿಗಳ ದಿಗ್ವಿಜಯ

ಈ ಎಲ್ಲಾ ಬೆಳವಣಿಗೆಗಳ ನಡುವೆ ವಿದ್ಯಾರ್ಥಿ ಸಂಘದ ಚುನಾವಣೆ ನವೆಂಬರ್ ತಿಂಗಳಿನಲ್ಲಿ ನಡೆಯಿತು. ಫೋರಂ ಫಾರ್ ಇಂಡಿಯಾ ಕೋಮುವಾದದ ಅಪಾಯವನ್ನೇ ಚುನಾವಣೆಯ ಪ್ರಮುಖ ವಿಚಾರವನ್ನಾಗಿ ಮಾಡಿ, ಜಾತ್ಯತೀತ ಪರವಾದ ವ್ಯವಸ್ಥಿತ-ಸೈದ್ಧಾಂತಿಕ ಪ್ರಚಾರಾಂದೋಲನದ ಮೂಲಕ ಮಹತ್ವದ ವಿಜಯ ದಾಖಲಿಸಿತು.

ವಿದ್ಯಾರ್ಥಿ ಸಂಘದ ಅಧ್ಯಕ್ಷ ಸ್ಥಾನದ ಸ್ಪರ್ಧಿ ಪಂಕಜ್‌ವಹಿ ಒಟ್ಟಾರೆ 620 ಮತ ಪಡೆದು 'ಪ್ರಸ್ತುತ' ಗುಂಪಿನ ಅಭ್ಯರ್ಥಿಯನ್ನು 51 ಮತಗಳಿಂದ ಸೋಲಿಸಿದರೆ, ಕಾರ್ಯದರ್ಶಿ ಸ್ಥಾನದ ಅಭ್ಯರ್ಥಿ ಪ್ರೀತೀಶ್ ಒಟ್ಟು 506 ಮತಗಳನ್ನು ಪಡೆದು 180 ಮತಗಳ ಅಂತರದಿಂದ 'ಪ್ರಸ್ತುತ' ಅಭ್ಯರ್ಥಿಯನ್ನು ಸೋಲಿಸಿದ್ದಾರೆ.

ಚುನಾವಣೆ ಗೆಲ್ಲಲು 'ಪ್ರಸ್ತುತ' ನಡೆಸಿದ ಕುತಂತ್ರಗಳು ಹಲವು. ಭಾಷೆ - ಧರ್ಮ - ಪ್ರದೇಶ ಇತ್ಯಾದಿಗಳ ಆಧಾರದ ಮೇಲೆ ಅಂಧಾಭಿಮಾನವನ್ನು ಪ್ರಚೋದಿಸಿ ಲಾಭ ಗಳಿಸಲು ಯತ್ನಿಸಲಾಯಿತು. ನೀರಿನಂತೆ ಹಣ ಚೆಲ್ಲಿ ಮತಗಳನ್ನು ಕೊಂಡುಕೊಳ್ಳುವ ಪ್ರಯತ್ನವೂ ನಡೆಯಿತು. ಆದರೆ ಕಳೆದ ವರ್ಷದಂತೆ ಈ ವರ್ಷ ಸಹ ಮತ್ತೊಂದು ಸೋಲು ಅವರಿಗೆ ಕಾದಿತ್ತು. ಪ್ರತಿಯಾಗಿ FPI ತನ್ನ ಸೈದ್ಧಾಂತಿಕ ತಿಳುವಳಿಕೆಗೆ ಪೂರಕವಾಗಿ ದೇಶದ ಸಾಂಸ್ಕೃತಿಕ ವೈವಿಧ್ಯ ಮತ್ತು ಐಕ್ಯತೆಯ ಪರವಾಗಿ ಜಾತ್ಯತೀತತೆಯ - ವೈಚಾರಿಕ - ವೈಜ್ಞಾನಿಕ ವಿಚಾರಧಾರೆಯ ಪರವಾಗಿ ಮತ ಯಾಚಿಸಿತು.

ಮುಂದುವರೆದ ಸಮರ

ಚುನಾವಣೆಯ ನಂತರವೂ ಕೋಮುವಾದದ ವಿರುದ್ಧ ಸಮರ ಮುಂದುವರೆದಿದೆ. ಕೋಮುವಾದದ ವಿರುದ್ಧ ಈಗಾಗಲೇ ವಿದ್ಯಾರ್ಥಿ ಸಂಘದಿಂದ ಕೋಮುಸೌಹಾರ್ದತೆ ಸಾರುವ ಉತ್ತಮ ಚಲನಚಿತ್ರಗಳ ಪ್ರದರ್ಶನಗಳು ನಡೆದಿವೆ. ಪೋಸ್ಟರ್ ಪ್ರಚಾರಾಂದೋಲನ ನಡೆದಿದೆ. ಪ್ರಸ್ತುತ ಸಾಮಾಜಿಕ-ವೈಜ್ಞಾನಿಕ ವಿಚಾರಗಳ ಕುರಿತು ಚರ್ಚೆ ನಡೆದಿದೆ. ಕೋಮು ಸೌಹಾರ್ದತೆ ಸಾರುವ 'ಸಮುದಾಯ' ತಂಡದ ಬೀದಿ ನಾಟಕವನ್ನು IISC ನಡೆಸಲು ಯೋಜಿಸಲಾಗಿದೆ. ಹಲವು ವಿಚಾರಸಂಕಿರಣ - ಸಂವಾದ ಚರ್ಚೆಗಳನ್ನು ಯೋಜಿಸಲಾಗಿದೆ.

ವಿಜ್ಞಾನ-ತಂತ್ರಜ್ಞಾನದ ಸಾಧನೆಗಳನ್ನು ನುಂಗಿ ನೊಣೆದ ತನ್ನ ಫ್ಯಾಸಿಸ್ಟ್ ತಂತ್ರಗಳಿಗೆ ಪ್ರಗತಿಪರ-ಜಾತ್ಯತೀತ ಶಕ್ತಿಗಳು ಸಮರ್ಥ ಪ್ರತ್ಯುತ್ತರ ನೀಡಿದ್ದಾರೆ. IISC ಯಲ್ಲಿ ಪ್ರಗತಿಪರ ವಿಚಾರಧಾರೆಯ ಸುತ್ತ ವಿದ್ಯಾರ್ಥಿಗಳನ್ನು ಅಣಿನೆರೆಸುವ-ಕೋಮುವಾದದ ವಿರುದ್ಧ ಸೆಣೆಸುವ ಕೆಲಸದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (SFI) ನ ಕಾರ್ಯಕರ್ತರು ಮಹತ್ವದ ಪಾತ್ರ ವಹಿಸುತ್ತಿದ್ದಾರೆ.

- ಆರ್.ರಾಮಕೃಷ್ಣ

ಕರ್ನಾಟಕ ರಾಜ್ಯದ ಕರಾಳ ರೂಪದ, ಕಾರ್ಮಿಕ ವಿರೋಧಿ "ಕೈಗಾರಿಕಾ ವಿಧೇಯಕ"

ಇದೀಗಷ್ಟೆ ಮುಕ್ತಾಯಗೊಂಡ ಅಧಿವೇಶನದಲ್ಲಿ ರಾಜ್ಯ ಸರ್ಕಾರವು "ಕರ್ನಾಟಕ ಕೈಗಾರಿಕಾ (ಸಹಕಾರ) ವಿಧೇಯಕ 2002" ನ್ನು ಮಂಡಿಸಿ ಎರಡೂ ಸದನಗಳಲ್ಲಿ ಕಾಂಗ್ರೆಸ್ ಪಕ್ಷವೇ ಬಹುಮತ ಹೊಂದಿರುವುದರಿಂದ, ಈ ಕಾರ್ಮಿಕ ವಿರೋಧಿ ವಿಧೇಯಕವನ್ನು ಅಂಗೀಕರಿಸಿದೆ. ಈ ತರಹದ್ದೊಂದು ವಿಧೇಯಕವಿಲ್ಲದಿರುವುದರಿಂದಲೇ, ರಾಜ್ಯದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಕೈಗಾರಿಕಾ ಬೆಳವಣಿಗೆ ಆಗುತ್ತಿಲ್ಲವೆಂದು, ಆದಷ್ಟು ಶೀಘ್ರಗತಿಯಲ್ಲಿ ಈ ವಿಧೇಯಕವನ್ನು ಜಾರಿಗೊಳಿಸಲು ರಾಜ್ಯಸರ್ಕಾರದ ಮೇಲೆ ಕೈಗಾರಿಕೋದ್ಯಮಿಗಳೆಲ್ಲ ಒತ್ತಡ ತಂದಿದ್ದರು. ಈ ಒತ್ತಡ ತಂದಿದ್ದವರು ದೊಡ್ಡ ಮತ್ತು ಮಧ್ಯಮ ಕೈಗಾರಿಕೋದ್ಯಮಿಗಳ ಸಂಘವಾದ ಎಫ್‌ಕೆಸಿಸಿಐ ಮತ್ತು ಸಣ್ಣ ಕೈಗಾರಿಕೋದ್ಯಮಿಗಳ ಸಂಘವಾದ ಕೆಎಸ್‌ಎಸ್‌ಐಎ ಹಾಗೂ ಬಹುರಾಷ್ಟ್ರೀಯ ಕಂಪನಿಗಳವರು ಎಂದ ಮೇಲೆ ರಾಜ್ಯ ಸರ್ಕಾರ ಕಾರ್ಮಿಕವರ್ಗದ ಹಿತಾಸಕ್ತಿಗಳನ್ನು ಗಾಳಿಗೆ ತೂರುವ ಈ ವಿಧೇಯಕವನ್ನು ಅಂಗೀಕರಿಸಿ ಕೈಗಾರಿಕೋದ್ಯಮಿ ವರ್ಗಕ್ಕೆ ಮಣಿದಿದ್ದರಲ್ಲಿ ಆಶ್ಚರ್ಯವಿಲ್ಲ.

ಈ ವಿಧೇಯಕವನ್ನು ಜಾರಿಗೆ ತರಲು ಮಂತ್ರಿ ಮಹೋದಯರಾದಿಯಾಗಿ ಆಳುವ ವರ್ಗದವರೆಲ್ಲರೂ ನೀಡುವ ಕಾರಣವಾದರೂ ಇಷ್ಟೆ. ಈಗಿರುವ ಆಡಳಿತ ವ್ಯವಸ್ಥೆಯಲ್ಲಿ ಒಬ್ಬ ಉದ್ಯಮಿ ಒಂದು ಉದ್ದಿಮೆಯನ್ನು ಸ್ಥಾಪಿಸಬೇಕಾದರೆ 20 ಕ್ಕೂ ಹೆಚ್ಚು ಸರ್ಕಾರಿ ಇಲಾಖೆಗಳಿಂದ ಅನುಮತಿ ಪಡೆಯಬೇಕಾಗಿರುತ್ತದೆ ಮತ್ತು ಇದರಿಂದಾಗಿ ಈ ಸರ್ಕಾರಿ ಇಲಾಖಾಧಿಕಾರಿಗಳು ತಪಾಸಣಾ ಕಾರ್ಯ ನಡೆಸುವುದರಿಂದ ಉದ್ಯಮಿಯು ಇಂದಿನ ಸ್ಪರ್ಧಾ ಮಾರುಕಟ್ಟೆಯತ್ತ ಹೆಚ್ಚು ಗಮನಹರಿಸಲಾಗದೆ ಈ ತಪಾಸಣೆಗಳಿಂದ ಅನವಶ್ಯಕವಾಗಿ ಹೆಚ್ಚು ಹೆಚ್ಚು ಕಿರಿಕಿರಿ ಅನುಭವಿಸುತ್ತಾನೆ ಎಂಬುದು. ಆದರೆ ಈ ತಪಾಸಣೆ ನಡೆಸುವ ಸರ್ಕಾರಿ ಇಲಾಖೆಗಳಲ್ಲಿ 10 ಕ್ಕೂ ಹೆಚ್ಚಿನವು ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಕಾಪಾಡುವಂತಹ ಜವಾಬ್ದಾರಿ ಹೊಂದಿರುವಂತಹವುಗಳಾಗಿವೆ. ಉದಾಹರಣೆಗೆ, ಇಎಸ್‌ಐ ಇಲಾಖೆ, ಪಿ.ಎಫ್ ಇಲಾಖೆ, ಇನ್ಸ್‌ಪೆಕ್ಟರ್ ಆಫ್ ಫ್ಯಾಕ್ಟರೀಸ್, ಬಾಯ್ಲರ್ ಇನ್ಸ್‌ಪೆಕ್ಟರ್ ಲೇಬರ್ ಇನ್ಸ್‌ಪೆಕ್ಟರ್, ಪರಿಸರ ಮಾಲಿನ್ಯ ಮಂಡಳಿ, ಇತ್ಯಾದಿ



ಈ 'ಕರ್ನಾಟಕ ಕೈಗಾರಿಕಾ (ಸಹಕಾರ) ವಿಧೇಯಕ 2002' ದಲ್ಲಿರುವ ಕೆಲವು ಕಾರ್ಮಿಕ -ವಿರೋಧಿ ಮತ್ತು ರಾಜ್ಯವಿರೋಧಿ ಅಂಶಗಳನ್ನು ಗಮನಿಸೋಣ. ಈ ವಿಧೇಯಕದ ಸೆಕ್ಷನ್ 15 ರ ಪ್ರಕಾರ, ಉದ್ದಿಮೆ ಸ್ಥಾಪಿಸುವ ಸಂದರ್ಭದಲ್ಲಿ ತಾನು ಚಾಲ್ತಿಯಲ್ಲಿರುವ ಎಲ್ಲಾ ಕೈಗಾರಿಕಾ ಸಂಬಂಧಿತ ಕಾನೂನುಗಳಿಗೆ ವಿಧೇಯನಾಗಿರುತ್ತೇನೆಂದು 'ಸ್ವ ಪ್ರಮಾಣಪತ್ರ'ವನ್ನು ಉದ್ದಿಮೆದಾರನು ಕ್ರೋಢೀಕೃತ ಅರ್ಜಿಯೊಡನೆ ಸಲ್ಲಿಸಿದರೆ ಸಾಕು, ಅದನ್ನು ನಂಬಿ ಹೆಚ್ಚು ತಪಾಸಣೆಗೆ ಗುರಿಪಡಿಸದೆ ಅನುಮತಿ ನೀಡಬೇಕಂತೆ.

ಇದೇ ವಿಧೇಯಕದ ಸೆಕ್ಷನ್ 16 ರ ಪ್ರಕಾರ, ನಡೆಯುತ್ತಿರುವ ಕೈಗಾರಿಕೆಗಳಿಗೆ ಇಲಾಖಾಧಿಕಾರಿಗಳು ಹಿಂದೆಲ್ಲಾ ಇದ್ದಂತೆ ಕಡ್ಡಾಯ ತಪಾಸಣೆ ಮಾಡಬೇಕಾಗಿಲ್ಲ. ಕೆಲವೇ ಕೆಲವು ಕೈಗಾರಿಕೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು, ತಪಾಸಣೆ ಮಾಡುವ ಮೊದಲೇ ಕೈಗಾರಿಕೆಗಳಿಗೆ ತಪಾಸಣಾ ದಿನಾಂಕವನ್ನು ತಿಳಿಸಿರಬೇಕು. ಇದರಿಂದ ಕೈಗಾರಿಕೋದ್ಯಮಿಗಳಿಗಿರುವ ಲಾಭವೆಂದರೆ ರಾಜ್ಯದ ಸಂಪತ್ತನ್ನೂ ಮತ್ತು ಕಾರ್ಮಿಕವರ್ಗವನ್ನೂ ಹಿಗ್ಗಾಮುಗ್ಗಾ ಲೂಟಿ ಮಾಡಿ, ಮೊದಲೇ ತಿಳಿದಿರುವ ತಪಾಸಣಾ ದಿನದಂದು ತಪಾಸಣಾಧಿಕಾರಿಗಳಿಗೆ ಬೇರೆಯೇ ಚಿತ್ರಣ ನೀಡಿ ನಿಭಾಯಿಸಿಬಿಡಬಹುದು.

ಇನ್ನು ಸೆಕ್ಷನ್ 17 ರ ಪ್ರಕಾರ, ಯಾವುದೇ ಸರ್ಕಾರಿ ಇಲಾಖೆ 35 ದಿನಗಳೊಳಗಾಗಿ ಕೈಗಾರಿಕೆಗಳಿಗೆ ಅನುಮತಿ ಕೊಡದಿದ್ದರೆ, ಅದು ಅನುಮತಿ ಕೊಟ್ಟಿದೆಯೇಂದೇ ತಿಳಿಯಬೇಕಂತೆ ಕೈಗಾರಿಕೋದ್ಯಮಿಗಳೇ ಯಾವುದಾದರೊಂದು ವಿವರಣೆ ನೀಡುವಲ್ಲಿ ವಿಳಂಬವಾದರೂ ಅದರ ಬಗ್ಗೆ ಯೋಚಿಸಬೇಕಿಲ್ಲವೆಂದೇ ಇದರ ಅರ್ಥ.

ಕೈಗಾರಿಕೆಗಳನ್ನು ಶೀಘ್ರಗತಿಯಲ್ಲಿ ಅಭಿವೃದ್ಧಿಪಡಿಸಿ ರಾಜ್ಯದ ಉನ್ನತಿ ಸಾಧಿಸಬೇಕೆನ್ನುವುದನ್ನು ಯಾರು ತಾನೇ ಬೇಡವೆಂದಾರು. ಆದರೆ ಕೈಗಾರಿಕಾಭಿವೃದ್ಧಿಗೆ ಈಗಿರುವ ಆಡಳಿತ ವ್ಯವಸ್ಥೆಯು ಅಡಚಣೆಯಾಗಿವೆಯೆಂಬ ನೆಪವೊಡ್ಡಿ ಕಾರ್ಮಿಕವರ್ಗಗಳ ಹಿತಾಸಕ್ತಿಗಳನ್ನು ಕಾಪಾಡುವ ಇಲಾಖೆಗಳ ಅಧಿಕಾರ ವ್ಯಾಪ್ತಿಯನ್ನು ಮತ್ತು ರಾಜ್ಯದ ನೈಸರ್ಗಿಕ ಸಂಪನ್ಮೂಲಗಳಾದ ನೆಲ, ಜಲ, ಗಾಳಿ ಮುಂತಾದವುಗಳನ್ನು ಕಾಪಾಡುತ್ತಿರುವ ಇಲಾಖೆಗಳ ಅಧಿಕಾರಕ್ಕೆ ತಿಲಾಂಜಲಿ ನೀಡುವುದು ಬಂಡವಾಳಶಾಹಿ ರಾಜ್ಯಾಧಿಕಾರದಲ್ಲಿ ಹಿಡಿತ ಸಾಧಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ. ನೂರಾರು ವರ್ಷಗಳ ಸತತ ಹೋರಾಟದಿಂದ ಕಾರ್ಮಿಕ ವರ್ಗವು ಶೋಷಣೆಯಿಂದ ರಕ್ಷಿಸಿಕೊಳ್ಳಲು ಪಡೆದಿರುವ ಸ್ವಲ್ಪವೇ ಹಕ್ಕುಗಳನ್ನು ಸಹ ಜಾಗತೀಕರಣ ಕ್ರಿಯೆಯ ಭಾಗವೋ ಎಂಬಂತೆ ಕಿತ್ತುಕೊಳ್ಳುತ್ತಿರುವುದು ಅಪಾಯದ ಗಂಟೆಯೇ ಸರಿ. ಈ ವಿಧೇಯಕಕ್ಕೆ ರಾಷ್ಟ್ರಪತಿಯವರು ಒಪ್ಪಿಗೆ ನೀಡುವುದಕ್ಕೆ ಮೊದಲು, ಕೆಲವು ತಿದ್ದುಪಡಿಗಳನ್ನು ಸೂಚಿಸಿದ್ದು, ಆ ತಿದ್ದುಪಡಿಗಳನ್ನು ಸೇರಿಸಲಾಗಿದೆ. ಆದರೆ ಈ ತಿದ್ದುಪಡಿಗೆ [illegible] ಕರಾಳ ರೂಪ[illegible]ದಿತ್ತು ಎನ್ನುವುದು [illegible]


[illegible] 'ಜಯ', ಮಂ

ನಿವೃತ್ತ ನೌಕರ

ಎಪ್ಪತ್ತೈದು ವಸಂತ ದಾಟಿದರೆ ಮತ್ತೆ
ನಿವೃತ್ತಿ ವೇತನವ ಕೊಡರಂತೆ ಗೊತ್ತ?
ಈ ರೀತಿ ಕಾನೂನು ತರುತಿಹರು ಈಗ
ವಿಷ ಕುಡಿವೆನೆಂದರೂ ಕಾಸಿರದು ಆಗ.

\- ವಿಡಂಬಾರಿ

ಭಾರತದ ಪ್ರಬುದ್ಧ ಮತದಾರರು ಮುಂಬರುವ ಚುನಾವಣೆಗಳಲ್ಲಿ ಇನ್ನೂ ಮತ ನೀಡಬೇಕಾಗಿದೆ. ಆದರೆ ಪತ್ರಿಕೆ, ಟಿ.ವಿ. ಗಳ ಮಾಧ್ಯಮದ ಆಳಲೆಕಾಯಿ ಪಂಡಿತರು ಬಿಜೆಪಿ-ಎನ್‌ಡಿಎಯನ್ನು 'ಗೆಲ್ಲಿಸಿ' ಬಿಟ್ಟಿದ್ದಾರೆ. ಇಂತಹ ತಳಬುಡವಿಲ್ಲದ, ತರ್ಕಹೀನ ಪ್ರಚಾರದ ಹಿಂದೆ ಅಡಗಿರುವ ನಿಜವಾದ ಹಿತಾಸಕ್ತಿಗಳೇನು? ದೇಶದಲ್ಲಿನ ವಾಸ್ತವವೇನು? ಒಂದು ವಿಶ್ಲೇಷಣಾತ್ಮಕ ಲೇಖನದಲ್ಲಿ ಸಿಪಿಐ(ಎಂ) ನ ಪ್ರಧಾನ ಕಾರ್ಯದರ್ಶಿಯವರಿಂದ



ಬಿಜೆಪಿ ಮತ್ತು ಮಾಧ್ಯಮಗಳು: ಅಬ್ಬರವೆಷ್ಟು, ವಾಸ್ತವವೆಷ್ಟು?

ಹರ್ಕಿಶನ್ ಸಿಂಗ್ ಸುರ್ಜಿತ್

ಈ ದಿನಗಳಲ್ಲಿ ಮಾಧ್ಯಮಗಳು ಮತ್ತೆ ತಮ್ಮ ಆಟ ಆರಂಭಿಸಿವೆ - ಬಿಜೆಪಿ ನೇತೃತ್ವದ ಎನ್‌ಡಿಎ ಅಧಿಕಾರಕ್ಕೆ ಮರಳುವುದು ಖಂಡಿತ ಎಂದು ಬಿಂಬಿಸುವ ಆಟ. ಒಂದು ಪತ್ರಿಕೆಯಂತೂ ಮುಂಬರುವ ಲೋಕಸಭಾ ಚುನಾಣೆ ಅನಗತ್ಯ ಎಂದು ಹೇಳಿಯೇ ಬಿಟ್ಟಿದೆ. ಏಕೆಂದರೆ ಅದರ ಫಲಿತಾಂಶ ಎಲ್ಲರಿಗೂ ಗೊತ್ತಂತೆ. ಆದರೆ ಯೋಗೇಂದ್ರ ಯಾದವ್ (ಪ್ರಖ್ಯಾತ ರಾಜಕೀಯ ಶಾಸ್ತ್ರಜ್ಞ) ಇದನ್ನು ಒಪ್ಪುವುದಿಲ್ಲ. 'ಮಾಧ್ಯಮಗಳು ಚುನಾವಣೆಗಳನ್ನು ನಿರ್ಧರಿಸುವಂತಿದ್ದರೆ 14ನೇ ಲೋಕಸಭಾ ಚುನಾವಣೆ ಒಂದು ನಿರರ್ಥಕ ಕಸರತ್ತು' ಎನ್ನುವ ಅವರು 'ಬಹಳ ವರ್ಷಗಳಿಂದ ಚುನಾವಣೆಗಳನ್ನು ಪರಿಶೀಲಿಸುತ್ತಿರುವ ನನಗೆ ರಾಜಕೀಯ ಸಾಮಾನ್ಯ ಜ್ಞಾನದ ಬೆಲೆ ಎಷ್ಟು ಎಂಬುದು ಮನದಟ್ಟಾಗಿದೆ, ಅದು ನನಗೆ ಅಬ್ಬರದ ಮಾತುಗಳನ್ನು ನಿರ್ಲಕ್ಷಿಸಲು ಕಲಿಸಿದೆ' ಎನ್ನುತ್ತಾರೆ (ದಿ ಹಿಂದೂ, ಮಾರ್ಚ್ 15)

ನಿಜ ಸಂಗತಿಯೆಂದರೆ ಮಾಧ್ಯಮದ ಒಂದು ದೊಡ್ಡಭಾಗ ದೇಶವು 14ನೇ ಲೋಕಸಭಾ ಚುನಾವಣೆಗೆ ಸಿದ್ಧವಾಗುತ್ತಿರುವಾಗ ಇಂತಹುದೇ ಅಬ್ಬರವನ್ನು ಸೃಷ್ಟಿಸುವಲ್ಲಿ ತೊಡಗಿದೆ. ಇದರಲ್ಲಿ ಹೊಸದೇನಿಲ್ಲ. ಕಳೆದ ಹಲವು ವರ್ಷಗಳಲ್ಲಿ, ಚುನಾವಣೆ ಬಂತೆಂದರೆ ಬಿಜೆಪಿ ಹೂವೆತ್ತಿದಂತೆ ಚುನಾವಣೆ ಗೆದ್ದು ಬಿಡುತ್ತದೆ ಎಂದು ಜನಗಳನ್ನು ನಂಬಿಸಲು ಈ ಮಾಧ್ಯಮಪಂಡಿತರು ಸರ್ವಪ್ರಯತ್ನ ನಡೆಸುತ್ತಲೇ ಬಂದಿದ್ದಾರೆ. 1991 ರಲ್ಲಿ, 1996 ರಲ್ಲಿ ನಂತರದ ಕೆಲವು ಚುನಾವಣೆಗಳಲ್ಲಿ ಅವರು ಅದನ್ನೇ ಮಾಡಿದ್ದು. 1998 ರಲ್ಲಿ ಬಿಜೆಪಿ ಭಾರಿ ವಿಜಯ ಸಾಧಿಸುತ್ತದೆ ಎಂದು ಅವರು ಭವಿಷ್ಯ ನುಡಿದರೂ ಬಿಜೆಪಿಗೆ ಸರ್ಕಾರ ರಚಿಸಲು ಸಾಧ್ಯಾವಾದದ್ದು ಚುನಾವಣೆಯ ನಂತರ ಆತುರಾತುರವಾಗಿ ಒಂದು ಕೂಟವನ್ನು ಕಟ್ಟಿಕೊಂಡ ನಂತರವೇ. 1999 ರಲ್ಲಿ ಬಿಜೆಪಿಯ ಒಂದೇ ಒಂದು ಸ್ಥಾನ ಹೆಚ್ಚಾಗಲಿಲ್ಲ. ಅದರ ಮಿತ್ರರಷ್ಟೇ ಗಮನಾರ್ಹ ಹೆಚ್ಚಳ ಸಾಧಿಸಿದರು.



ಸ್ವಲ್ಪ ಇತಿಹಾಸವನ್ನು ನೆನಪಿಸಿಕೊಳ್ಳೋಣ. 1996 ರಲ್ಲಿ, 1998 ರಲ್ಲಿ ಬಿಜೆಪಿ ಗಮನಾರ್ಹ ಸಂಖ್ಯೆಯಲ್ಲಿ ಸ್ಥಾನಗಳನ್ನು ಪಡೆಯಲು 1991-96 ರ ಅವಧಿಯ ಕಾಂಗ್ರೆಸ್ ಆಡಳಿತದ ಬಗ್ಗೆ ಹಾಗೂ 1996-98 ರಲ್ಲಿ ಕಾಂಗ್ರೆಸ್ ನಡೆಸಿದ ಅತಿ ಹೀನ ರಾಜಕೀಯದಿಂದ ಜನರಲ್ಲಿ ಜುಗುಪ್ಸೆ ಬೆಳೆದದ್ದರಿಂದಷ್ಟೇ ಸಾಧ್ಯಾವಾಗಿತ್ತು. 1999 ರಲ್ಲಿ ಕಾರ್ಗಿಲ್ ಘಟನೆಯಿಂದ ಜನಗಳ ಭಾವನೆಗಳನ್ನು ಬಳಸಿಕೊಳ್ಳಲು ಅವರಿಗೆ ಅವಕಾಶವಾಯಿತು. ವ್ಯಂಗ್ಯವೆಂದರೆ ಬಿಜೆಪಿ ನೇತೃತ್ವದ ಸರ್ಕಾರದ ನಿರ್ಲಕ್ಷ್ಯದಿಂದಲೇ ಆ ಪ್ರದೇಶದಲ್ಲಿ ಭಯೋತ್ಪಾದಕರು ನುಗ್ಗಿ ಬಂದಿದ್ದರು.

ಒಂದಂತೂ ಖಂಡಿತ. ಎರಡು ಡಝನ್ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡಿರದಿದ್ದರೆ, ಕಾರ್ಗಿಲ್ ಘಟನೆ ನಡೆದಿರದಿದ್ದರೆ 1999 ರಲ್ಲಿ ಆ ಪಕ್ಷ ತೊಂದರೆಗೊಳಗಾಗಬೇಕಿತ್ತು.

ವರ್ಗ ಹಿತಾಸಕ್ತಿ

ಆದರೆ ನಮ್ಮ ಮಾಧ್ಯಮ ಪಂಡಿತರು ಇವನ್ನೆಲ್ಲಾ ಸುಲಭವಾಗಿ ಉಪೇಕ್ಷಿಸುತ್ತಾರೆ. ಆದ್ದರಿಂದ ಕಳೆದ ಒಂದು ದಶಕದಲ್ಲಿ ಅವರ ಭವಿಷ್ಯವಾಣಿಗಳೆಲ್ಲಾ ಒಂದಾದ ಮೇಲೊಂದರಂತೆ ಶೋಚನೀಯ ರೀತಿಯಲ್ಲಿ ಹುಸಿಯಾಗಿವೆ. ನಿಜ, ಅವರ ಕೆಲವು ಚುನಾವಣಾ ಪೂರ್ವ ಸಮೀಕ್ಷೆಗಳು, ಎಕ್ಸಿಟ್ ಪೋಲ್‌ಗಳು ವಾಸ್ತವತೆಯ ಸಮೀಪ ಬಂದಿವೆ. ಆದರೆ ಇವು ಕೇವಲ ಕಾಕತಾಳಿಯವಷ್ಟೆ.

ಇನ್ನೊಂದು ವಿಷಯವನ್ನು ಇಲ್ಲಿ ಉಪೇಕ್ಷಿಸಬಾರದು. ಜನಗಳಿಗೆ ನೆನಪು ಬಹಳ ದಿನ ಇರುವುದಿಲ್ಲ ಎನ್ನಲಾಗುತ್ತದೆ. ಬಹಳಷ್ಟು ಮಾಧ್ಯಮ ಪಂಡಿತರ ನೆನಪಿನ ಶಕ್ತಿಯೇನೂ ಉತ್ತಮವಾಗಿಲ್ಲ. ಆದರೆ ಒಂದು ಮುಖ್ಯ ವ್ಯತ್ಯಾಸವಿದೆ. ಜನಗಳ ಸ್ಮರಣ ಶಕ್ತಿಗೆ ಅವರ ದೈನಂದಿನ ಕೆಲಸದ ಹೊರೆಗಳು ಮತ್ತು ಬದುಕಿನ ಹೋರಾಟಗಳಿಂದ ಅಡ್ಡಿ ಬಂದಿದ್ದರೆ ಮಾಧ್ಯಮ ಪಂಡಿತರ ಸ್ಮರಣ ಶಕ್ತಿ ಕುಂದುವುದು ಅವರ ಸ್ವಂತ ಬಯಕೆಯಿಂದಾಗಿಯೇ. ಅವರಿಗೆ ಭಾರಿ ಸಂಬಳ-ಸಾರಿಗೆ ಕೊಡುವವರ ಹಿತವನ್ನು ಈಡೇರಿಸಬೇಕು ತಾನೆ?

ವಿಷಯವೀಗ ಸ್ಪಷ್ಟ. ದೊಡ್ಡ ಭಾರತೀಯ ಬಂಡವಾಳಿಗರಿಗೆ ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಬಿಜೆಪಿ ಅಥವಾ ಬಿಜೆಪಿ ನೇತೃತ್ವದ ಎನ್‌ಡಿಎಯೇ ತಮ್ಮ ವರ್ಗ ಹಿತಾಸಕ್ತಿಗಳನ್ನು ಕಾಪಾಡಲು ಉತ್ತಮ ಎಂದು ಅವು ಸ್ಪಷ್ಟವಾಗಿಯೇ ಸೂಚಿಸಿವೆ. ಕಾಂಗ್ರೆಸ್ ಚುನಾವಣಾ ಪ್ರಚಾರಕ್ಕೆ ಕೇವಲ 4 ಹೆಲಿಕಾಪ್ಟರುಗಳನ್ನು ಬಾಡಿಗೆಗೆ ಪಡೆದಿದ್ದರೆ ಬಿಜೆಪಿ 20 ಹೆಲಿಕಾಪ್ಟರುಗಳನ್ನು ಬಾಡಿಗೆಗೆ ಪಡೆದಿದೆಯಂತೆ. ದೇಶೀ ಮತ್ತು ವಿದೇಶಿ ಬಂಡವಾಳಶಾಹಿಗಳ ಉದಾರದಾನದಿಂದ ಅತಿ ಹೆಚ್ಚು ಪ್ರಯೋಜನ ಪಡೆದಿರುವವರು ಬಿಜೆಪಿಯವರು ಎಂಬ ಜನಗಳಲ್ಲಿರುವ ಭಾವನೆಗೆ ಇದು ಇನ್ನಷ್ಟು ಕುಮ್ಮಕ್ಕು ನೀಡಿದೆ. ಏಕೆಂದರೆ ಬಿಜೆಪಿ ಅಧಿಕಾರಕ್ಕೆ ಮರಳಿದರೆ ತಾವು ದಾನವಾಗಿ ಕೊಟ್ಟದ್ದರ ಹಲವು ಪಾಲು ಹೆಚ್ಚು ಕಿತ್ತುಕೊಳ್ಳಬೇಕು ಎಂಬುದೂ ಈ ಬಂಡವಾಳಿಗರಿಗೆ ಗೊತ್ತು.

ಲೋಕಸಭೆ ವಿಸರ್ಜನೆಯ ಶಿಫಾರಸು ಮಾಡುವ ಮೊದಲು ವಾಜಪೇಯಿ ಸರ್ಕಾರ ಶ್ರೀಮಂತರಿಗೆ ಭಾರಿ ರಿಯಾಯ್ತಿಗಳನ್ನು ಕೊಟ್ಟಿತು: ಉಳಿದ ವಿಭಾಗಗಳಿಗೆ ಪರಿಹಾರ ನೀಡಿದ್ದೇನೆ ಎಂದು ಹೇಳಿಕೊಂಡಿತು. ಹೀಗಿರುವಾಗ ಪರದೆಯ ಹಿಂದಿನ ತಮ್ಮ ನಿಜವಾದ ಪೋಷಕರಿಗೆ ಅದು ಎಷ್ಟರಮಟ್ಟಿಗೆ ಪ್ರತ್ಯುಪಕಾರ ಮಾಡುತ್ತದೆ ಎನ್ನುವುದನ್ನು ಊಹಿಸಿಕೊಳ್ಳಬಹುದು.

ರಾಜಕೀಯ ಕುದುರೆ ಜೂಜು

ಖಾಸಗಿಯವರಿಗೆ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಅತ್ಯಂತ ಅಗ್ಗದ ಬೆಲೆಗಳಲ್ಲಿ ಮಾರಿರುವುದು ಇದಕ್ಕೆ ಒಂದು ಉದಾಹರಣೆಯಷ್ಟೆ. ಬಾಲ್ಕೊ, ಸೆಂಟಾರ್ ಹೋಟೆಲ್‌ಗಳಂತಹ ಈ ನಾಚಿಕೆಗೇಡಿ ವಿಶ್ವಾಸಘಾತದ ಹಲವು ಪ್ರಕರಣಗಳಿಗೆ ಎರಡು ಉದಾಹರಣೆಗಳು. ಇಲ್ಲ, ಒಬ್ಬ ಮಂತ್ರಿಯಂತೂ ದೇಶದ ಮಹಾಲೆಕ್ಕ ಪರಿಶೋಧಕರು ಒಂದು ಸಾರ್ವಜನಿಕ ವಲಯದ ಉದ್ದಿಮೆಯ ಮಾರಾಟದಲ್ಲಿ ಅನಿಯಮಿತತೆಯನ್ನು ಸೂಚಿಸಿದಾಗ ಆ ಸಾಂವಿಧಾನಿಕ ಅಧಿಕಾರಿಯನ್ನೇ ತೆಗಳುವ ಭಂಡತನವನ್ನು ಪ್ರದರ್ಶಿಸಿದರು.

ಒಟ್ಟಿನಲ್ಲಿ ಭಾರತೀಯ ಮತ್ತು ವಿದೇಶಿ ಬಂಡವಾಳಶಾಹಿಗಳಿಗೆ ಯಾವ ಕುದುರೆಯ ಮೇಲೆ ಜೂಜು ಕಟ್ಟಬೇಕು ಎಂದು ಚೆನ್ನಾಗಿ ಗೊತ್ತಿದೆ. ರೇಸ್ ವೀಕ್ಷಿಸುವುದನ್ನು ವೃತ್ತಿ ಮಾಡಿಕೊಂಡವರಂತೆ ಅವರು ತಾವು ಬೆಟ್ ಕಟ್ಟಿದ ಕುದುರೆಯ ಪರವಾಗಿ ಬೊಬ್ಬೆ ಹೊಡೆಯುತ್ತಲೇ ಇರುತ್ತಾರೆ.

ಆದರೆ ರಾಜಕೀಯ ಏಕ್‌ದಂ ಕುದುರೆ ಜೂಜಿನಂತೆ ಅಲ್ಲ ಎಂಬುದನ್ನು ಮರೆಯಬಾರದು. ಕುದುರೆ ರೇಸಿನಲ್ಲಿ ಜೂಜು ಕಟ್ಟುವವರು ಯಾವ ಕುದುರೆ ಗೆಲ್ಲಬಹುದೆಂದು ಅಂದಾಜು ಮಾಡಿದರೂ, ಕೇವಲ ಬೊಬ್ಬೆ ಹೊಡೆದ ಮಾತ್ರಕ್ಕೆ ಅವರದೇ ಕುದುರೆ ಗೆಲ್ಲುತ್ತದೆಂದಲ್ಲ. ಆದರೆ ರಾಜಕೀಯದಲ್ಲಿ ಬಂಡವಾಳಶಾಹಿಗಳು ಮತ್ತು ಇತರ ಶೋಷಕ ವರ್ಗಗಳು ಬಿಜೆಪಿಯ ಮೇಲೆ ಜೂಜು ಕಟ್ಟುವ ಮಾತ್ರವಲ್ಲ, ತಮ್ಮ [illegible] ರಾಜಕೀಯ ಕುದುರೆ ಗೆಲ್ಲಬೇಕೆಂದೂ ಪ್ರಯತ್ನಿಸುತ್ತಿದ್ದಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಬಂಡವಾಳಶಾಹಿ ಹತೋಟಿಯ ಮಾಧ್ಯಮಗಳಲ್ಲಿ ಬರುವ 'ತಜ್ಞ ವಿಶ್ಲೇಷಣೆ' ಗಳೆಂಬುದು, ಚುನಾವಣಾ ವಿಶ್ಲೇಷಣೆ ಎಂಬ ಕಸರತ್ತುಗಳು ಜನಗಳ ಭಾವನೆಗಳನ್ನು ಅಂದಾಜು ಮಾಡಲಿಕ್ಕಷ್ಟೇಲ್ಲ, ನಿಜವಾಗಿ ಅವು ಜನಗಳ ಭಾವನೆಯನ್ನು ತಮಗೆ ಬೇಕಾದ ದಿಕ್ಕಿನಲ್ಲಿ ರೂಪಿಸುವ, ಪ್ರಭಾವಿಸುವ ಪ್ರಯತ್ನಗಳು. ಒಂದು ನಿರ್ದಿಷ್ಟ ಫಲಿತಾಂಶ ಬರಲಿದೆ ಎಂದು ಅದಕ್ಕೆ ಯಾವುದೇ ಆಧಾರ ಇಲ್ಲದಿದ್ದರೂ ಮತ್ತೆ-ಮತ್ತೆ ಹೇಳಿ ಈ ನಿರ್ದಿಷ್ಟ ಫಲಿತಾಂಶ ಬರುವಂತೆ ಮಾಡುವ ಲೆಕ್ಕಾಚಾರದ ಪ್ರಯತ್ನಗಳಿವು.

ನಿಜ, ಈ ಎಲ್ಲಾ ಮಾಧ್ಯಮಗಳ ಅಬ್ಬರದಿಂದ ಪ್ರಭಾವಿತರಾಗದ ಜನಗಳೂ ಇದ್ದಾರೆ. ಮೇಲೆ ಹೇಳಿದ ಯೋಗೇಂದ್ರ ಯಾದವ್‌ರವರು ಬೇರೆ ವಿರೋಧ ಪಕ್ಷಗಳಿಗಿಂತ ಎನಡಿಎ ತುಸು ಉತ್ತಮ ಸ್ಥಿತಿಯಲ್ಲಿದೆ ಎಂದು ಒಪ್ಪಿಕೊಂಡರೂ 'ಆದರೆ ಇಷ್ಟರಿಂದಲೇ ಎನ್‌ಡಿಎ ಖಂಡಿತಾ ಮತ್ತೆ ಅಧಿಕಾರಕ್ಕೆ ಬರುತ್ತದೆ ಎಂಬ ತೀರ್ಮಾನಕ್ಕೆ ಬರಲು ಆಗುವುದಿಲ್ಲ. ಅದು ನಿಜವಾಗಬೇಕೆಂದರೆ, ಎನ್‌ಡಿಎಯ ವಿರುದ್ಧ ಅಧಿಕಾರಸ್ಥ-ವಿರೋಧಿ ಭಾವನೆಯಿಲ್ಲ ಮಾತ್ರವಲ್ಲ, ದೇಶಾದ್ಯಂತ ಒಂದು 'ಹಿತಾನುಭವ'ದ ಅಂಶ ಇದೆ ಎಂಬುದಕ್ಕೆ ಪುರಾವೆ ನೀಡಬೇಕಾಗುತ್ತದೆ' ಎನ್ನುತ್ತಾರೆ. "ಮಾಧ್ಯಮಗಳನ್ನು, ಅಭಿಪ್ರಾಯ ಸಂಗ್ರಹಗಳನ್ನು ನಂಬುವುದಾದರೆ ಬಿಜೆಪಿಯ ಗೆಲುವು ಈಗಾಗಲೇ ಶತಸ್ಸಿದ್ಧ. ಆದರೆ ಅದು ನಿಜವಲ್ಲ" ಎನ್ನುತ್ತಾರೆ ಅವರು.

ಇಲ್ಲಿರುವ ಪ್ರಶ್ನೆ - ಯಾರನ್ನು ನಂಬುವುದು? ಎನ್‌ಡಿಎ ಗೆಲ್ಲುತ್ತದೆ ಎನ್ನುವವರನ್ನೇ, ಅಥವಾ ಅದನ್ನು ಒಪ್ಪಲು ಸಿದ್ಧರಿಲ್ಲದವರನ್ನೊ? ಎನ್‌ಡಿಎ ಗೆಲ್ಲುತ್ತದೆ ಎನ್ನುವವರು ಭಾರತೀಯ ಸಮಾಜವೆಂಬುದರ ಬಹಳ ಕ್ಲಿಷ್ಟವಾದ ಸ್ವರೂಪವನ್ನು ಉಪೇಕ್ಷಿಸಬಯಸುತ್ತಾರೆ ಎಂಬುದನ್ನು ಗಮನಿಸಿದರೆ ಇದಕ್ಕೆ ಉತ್ತರ ಸ್ವಯಂವೇದ್ಯ. ಹಿಂದೂ ಕೋಮು ಕೂಡಾ ದೇಶಾದ್ಯಂತ ಏಕಸ್ವರೂಪದ ಗುಂಪಲ್ಲ. ಉದಾ: ತಮಿಳುನಾಡಿನ ಹಿಂದೂಗಳು ಈಶಾನ್ಯ ಭಾಗದ ಹಿಂದೂಗಳಿಗಿಂತ ತುಂಬಾ ಭಿನ್ನರಾಗಿದ್ದಾರೆ. ಅವರು ಜಮ್ಮು-ಕಾಶ್ಮೀರದವರಿಗಿಂತ ಅಷ್ಟೇ ಭಿನ್ನವಾಗಿದ್ದಾರೆ. ಈ ಭಿನ್ನತೆಗಳು ಮತದಾನದ ಸ್ವರೂಪದಲ್ಲೂ ಬಿಂಬಿತವಾಗುತ್ತದೆ? ಹಿಂದುತ್ವದ ಬಗ್ಗೆ ಎಷ್ಟೇ ವಾಗಾಡಂಬರ ಪ್ರದರ್ಶಿಸಿದರೂ ಈ ಭಿನ್ನತೆಗಳನ್ನು ಅಳಿಸಲಾಗುವುದಿಲ್ಲ. ಮಾಧ್ಯಮ ಪಂಡಿತರು ಇಡೀ ದೇಶ ಒಂದೇ ಸ್ವರೂಪದ್ದು ಎಂಬ ಆಧಾರದಲ್ಲಿ ವಿಶ್ಲೇಷಣೆ ಮಾಡುವುದನ್ನು ನಂಬಲಾಗದು, ಭಿನ್ನತೆಗಳನ್ನು ಗಮನದಲ್ಲಿಡಲೇಬೇಕು ಎಂದು ಕೆಲವರು ಹೇಳುತ್ತಾರೆ. ಯೋಗೇಂದ್ರ ಯಾದವ್ ಸರಿಯಾಗಿ ಹೀಗೆ ಹೇಳುತ್ತಾರೆ - "1996 ರಿಂದಲೂ ಲೋಕಸಭಾ ಚುನಾವಣೆಗಳು ಒಂದು

ಪುಟ 10 ಕ್ಕೆ

ಪರ್ಯಾಯ ಸರ್ಕಾರಕ್ಕೊಂದು ಪಯ

ಇಡೀ ವಿಶ್ವವನ್ನೇ ಲೂಟಿ ಮಾಡುವ ಸಾಧನಗಳಾಗಿ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಸೃಷ್ಟಿಸುವ ಐಎಂಎಫ್ ವಿಶ್ವಬ್ಯಾಂಕ್ ಮತ್ತು ವಿಶ್ವ ವ್ಯಾಪಾರ ಸಂಘಟನೆಗಳೆಂಬ ಮೂವರು ವಿಷಕನ್ನೆಯರು ಭಾರತ ಸರ್ಕಾರವನ್ನು ಮೋಡಿ ಮಾಡಿ ರೂಪಿಸಿರುವ ಕೃಷಿ ನೀತಿ ನಮ್ಮ ಕೃಷಿ ಹಾಗೂ ಕೃಷಿಕರನ್ನು ಬಲಿತೆಗೆದುಕೊಳ್ಳುತ್ತಿರುವಾಗ ಪರ್ಯಾಯ ನೀತಿಗಾಗಿ ಹೋರಾಡುವ ಮೂಲಕವಷ್ಟೇ ನಾವು ನಮ್ಮ ಕೃಷಿ ರಂಗವನ್ನು ಉಳಿಸಲು ಸಾಧ್ಯ. ಆದರೆ ಈ ವಿಷಕನ್ನೆಯರ ವಶವಾಗಿರುವ ಬಿಜೆಪಿ ನೇತೃತ್ವದ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದರೆ ಮತ್ತೆ ಅದೇ ನೀತಿಗಳು ಜಾರಿಗಾಯುವುದು ಖಚಿತ. ಆದ್ದರಿಂದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದನ್ನು ತಡೆಯುವುದು ಮುಖ್ಯ. ಚುನಾವಣೆಯ ನಂತರ ಅಧಿಕಾರಕ್ಕೆ ಬರುವ ಸರ್ಕಾರದ ಮುಂದಿಡಬೇಕಾದ ಪರ್ಯಾಯ ಕೃಷಿ ನೀತಿಯ ಮುಖ್ಯಾಂಶಗಳು ಇಲ್ಲಿವೆ

ಅಮೇರಿಕದಂತಹ ಸಾಮ್ರಾಜ್ಯಶಾಹಿ ದೇಶಗಳ ಹಿಡಿತದಲ್ಲಿರುವ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಮತ್ತು ವಿಶ್ವಬ್ಯಾಂಕ್ ಎಂಬ ಹಣಕಾಸು ಸಂಸ್ಥೆಗಳ ಆದೇಶಗಳಿಗೆ ಮಣಿದು ಅಂದಿನ ಕೇಂದ್ರ ಕಾಂಗ್ರೆಸ್ ಸರ್ಕಾರವು 1991 ರಲ್ಲಿ ಹೊಸ ಆರ್ಥಿಕ ನೀತಿಗಳನ್ನು ಜಾರಿಗೆ ತಂದಿತ್ತು. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಈ ನೀತಿಗಳ ಆಧಾರದಲ್ಲಿ 1993 ರಲ್ಲಿ ಒಂದು ಹೊಸ ಕೃಷಿ ನೀತಿಯನ್ನೂ ಜಾರಿಗೆ ತರಲಾಯಿತು. ಅಂದು ವಿರೋಧ ಪಕ್ಷದಲ್ಲಿದ್ದ ಬಿ.ಜೆ.ಪಿಯು ಈ ನೀತಿಗಳನ್ನು ಹೃತ್ಪೂರ್ವಕವಾಗಿ ಬೆಂಬಲಿಸಿತು. ಆದರೆ ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಗಳು ಈ ನೀತಿಗಳನ್ನು ದೃಢವಾಗಿ ವಿರೋಧಿಸಿ, ಪರ್ಯಾಯ ನೀತಿಗಳನ್ನು ಪ್ರತಿಪಾದಿಸಿದ ಪ್ರಪ್ರಥಮ ಗ್ರಾಮೀಣ ಸಂಘಟನೆಗಳಾಗಿದ್ದವು.

ಕಾಂಗ್ರೆಸ್ ಸರ್ಕಾರದ ಈ ದಿವಾಳಿಕೋರ ನೀತಿಗಳ ಒಳಹುನ್ನಾರವನ್ನು ಬಯಲಿಗೆಳೆಯಲು ಮತ್ತು ಅವುಗಳ ವಿರುದ್ಧ ದೇಶದ ವಿವಿಧ ರೈತಾಪಿ ವಿಭಾಗಗಳನು ಅಣಿನೆರೆಸಲು 1993 ರಲಿ ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಗಳು ಜಂಟಿಯಾಗಿ "ಪರ್ಯಾಯ ಕೃಷಿ ನೀತಿ" ಎಂಬ ದಸ್ತಾವೇಜನ್ನು ಅಂಗೀಕರಿಸಿದವು. ಅಂದಿನಿಂದ ದೇಶಾದ್ಯಂತ ಈ ಪರ್ಯಾಯ ನೀತಿಯನ್ನು ಪ್ರಚಾರ ಮಾಡುತ್ತಾ ರೈತರನ್ನು ಮತ್ತು ಕೃಷಿ ಕೂಲಿಕಾರರನ್ನು ಸಂಘಟಿಸುವ ಪ್ರಯತ್ನ ಮುಂದುವರೆದಿದೆ.

ಪರ್ಯಾಯ ಕೃಷಿ ನೀತಿಯ ದಸ್ತಾವೇಜನ್ನು ಅಂಗೀಕರಿಸಿ ಈಗಾಗಲೇ 10 ವರ್ಷಗಳಾಗಿವೆ. ಈ ಅವಧಿಯಲ್ಲಿ ಭಾರತದ ಕೃಷಿರಂಗದ ಮೇಲೆ ಪರಿಣಾಮ ಬೀರುವ ಅನೇಕ ಬೆಳವಣಿಗೆಗಳು ಸಂಭವಿಸಿವೆ.



ಜನತೆಯ ವ್ಯಾಪಕ ಪ್ರತಿರೋಧದ ನಡುವೆಯೂ 1994 ರಲ್ಲಿ ಕಾಂಗ್ರೆಸ್ ಸರ್ಕಾರ ಗ್ಯಾಟ್ ಒಪ್ಪಂದಕ್ಕೆ ಸಹಿಹಾಕಿತು ಮಾತ್ರವಲ್ಲ ಕೃಷಿ ವಲಯವನ್ನೂ ಗ್ಯಾಟ್ ಒಪ್ಪಂದದ ವ್ಯಾಪ್ತಿಗೆ ಒಳಪಡಿಸಲು ಒಪ್ಪಿಗೆ ನೀಡಿತು. ಇದರಿಂದಾಗಿ 1995 ರಲ್ಲಿ ಸ್ಥಾಪನೆಯಾದ ವಿಶ್ವ ವ್ಯಾಪಾರ ಸಂಘಟನೆಯ ತಾರತಮ್ಯದ ಷರತ್ತುಗಳಿಗೆ ಭಾರತದ ಕೃಷಿ ವಲಯವೂ ಸಿಕ್ಕಿಹಾಕಿಕೊಳ್ಳುವಂತಾಯಿತು. 1998 ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಸರ್ಕಾರವು ಇದೇ ಆರ್ಥಿಕ ನೀತಿಗಳನ್ನು ಇನ್ನೂ ಹೆಚ್ಚು ರಭಸದಿಂದ ಜಾರಿಗೊಳಿಸುತ್ತಲ್ಲದೆ 2000 ಇಸ್ವಿಯಲ್ಲಿ 'ರಾಷ್ಟ್ರೀಯ ಕೃಷಿ ನೀತಿ' ಎಂಬ ದಿವಾಳಿಕೋರ ನೀತಿಯನ್ನು ಅಂಗೀಕರಿಸಿತು. 1970 ರ ಪೇಟೆಂಟ್ ಕಾಯ್ದೆಯನ್ನು ತಿದ್ದುಪಡಿ ಮಾಡಿ ದೇಶದ ಪಾರಂಪರಿತ ತಳಿಗಳ ಮತ್ತು ಬೀಜಗಳ ಮೇಲೆ ಬಹುರಾಷ್ಟ್ರೀಯ ಕಂಪನಿಗಳಿಗೆ ಪೇಟೆಂಟ್ ಹಕ್ಕುಗಳನ್ನು ನೀಡಲಾಯಿತು. ರೈತರಿಗೆ ಬೇಕಾದ ಬೀಜ, ಗೊಬ್ಬರ, ಕ್ರಿಮಿನಾಶಕ, ವಿದ್ಯುತ್, ನೀರಾವರಿ ಮೊದಲಾದವುಗಳಿಗಾಗಿ ನೀಡಲಾಗುತ್ತಿದ್ದ ಸಬ್ಸಿಡಿಗಳನ್ನು ಕಡಿತ ಮಾಡಲಾಯಿತು. 852 ಕೃಷಿ ಉತ್ಪನ್ನಗಳೂ ಸೇರಿದಂತೆ ಒಟ್ಟು 1429 ಉತ್ಪನ್ನಗಳ ಆಮದಿನ ಮೇಲಿನ ಪ್ರಮಾಣಾತ್ಮಕ ನಿರ್ಬಂಧಗಳನ್ನು ಅವಧಿಗೆ ಮೊದಲೇ ತೆಗೆದುಹಾಕಲಾಯಿತು. ಇದರ ಪರಿಣಾಮವಾಗಿ ಅಗ್ಗದ ವಿದೇಶಿ ಕೃಷಿ ಉತ್ಪನ್ನಗಳ ಬೆಲೆಗಳು ಶೇ.25 ರಿಂದ ಶೇಕಡಾ 75ರವರೆಗೂ ಇಳಿಯುವಂತಾಗಿ ರೈತರು ದಿವಾಳಿಯಾಗತೊಡಗಿದರು. ರೈತರ ಫಸಲಿಗೆ ಬೆಂಬಲ ಬೆಲೆ ಘೋಷಿಸಿ ಮಾರುಕಟ್ಟೆಗೆ ಪ್ರವೇಶ ಮಾಡುವುದನ್ನೂ ಸರ್ಕಾರ ಕೈಬಿಟ್ಟಿತು. ರೈತರಿಗೆ ಸರ್ಕಾರಿ ಸಾಲ ಸಿಗದಂತಾಯಿತು. ಖಾಸಗಿ ಸಾಲದ ಬಾಧೆಯನ್ನು ತಾಳಲಾಗದೆ ರೈತರು ಸಾಲು ಸಾಲಾಗಿ ಆತ್ಮಹತ್ಯೆ ಮಾಡಿಕೊಂಡರು.

ರಫ್ತು, ಆಧಾರಿತ ವಾಣಿಜ್ಯ ಬೆಳೆಗಳಿಗೆ ಒತ್ತು ನೀಡಲಾಗಿ ಆಹಾರ ಧಾನ್ಯಗಳ ಉತ್ಪಾದನೆ ಗಣನೀಯವಾಗಿ ಇಳಿಮುಖವಾಯಿತು. ಇದರ ಜೊತೆಯಲ್ಲಿ ರೇಷನ್ ಪದ್ಧತಿಗೆ ನೀಡಲಾಗುತ್ತಿದ್ದ ಸಬ್ಸಿಡಿಗಳನ್ನು ಹಿಂತೆಗೆದುಕೊಂಡು ರೇಷನ್ ದರಗಳನ್ನು ಹೆಚ್ಚಿಸಲಾಯಿತು. ಬಡವರ ರೇಷನ್ ಕಾರ್ಡುಗಳನ್ನು ಕಡಿತ ಮಾಡಲಾಯಿತು. ಆಹಾರ ಲಭ್ಯತೆಯ ಸಮಸ್ಯೆ ಗಂಭೀರವಾಯಿತು. ಹಸಿವಿನ ಸಾವುಗಳು ಸಂಭವಿಸತೊಡಗಿದವು.

ಕಾರ್ಷಿಕ ವಲಯವನ್ನು ಆವರಿಸಿದ ಬಿಕ್ಕಟ್ಟಿನಿಂದ ಕೃಷಿ ಕೂಲಿಕಾರರು ಅತಿ ಹೆಚ್ಚು ಸಂಕಷ್ಟಕ್ಕೆ ಒಳಗಾಗುವಂತಾಯಿತು. ದಿವಾಳಿಯಾದ ರೈತರು ಭೂಮಿಯನ್ನು ಕಳೆದುಕೊಂಡು ಕೂಲಿಕಾರರಾಗುತ್ತಿದ್ದಂತೆ ಕೃಷಿ ಕೂಲಿಕಾರರಿಗೆ ಕೆಲಸ ಸಿಗುವುದು ಕಡಿಮೆಯಾಯಿತು. ಕೃಷಿ ಕೆಲಸಗಳಲ್ಲಿ ಯಂತ್ರಗಳ ಬಳಕೆ ಹೆಚ್ಚಾಗುತ್ತಾ ಕೂಲಿಕಾರರಿಗೆ ಕೆಲಸದ ಅವಕಾಶಗಳು ಮತ್ತಷ್ಟು ಕಡಿಮೆಯಾದವು. ಕೆಲಸ ಹುಡುಕಿಕೊಂಡು ಊರೂರು ಅಲೆಯುವಂತಾಯಿತು. ವಲಸೆ ಹೋದಲ್ಲಿಯೂ ಮೋಸ ವಂಚನೆಗೆ ಗುರಿಯಾಗಿ ನರಕಯಾತನೆ ಅನುಭವಿಸುವಂತಾಯಿತು. ವರ್ಷವಿಡಿ ಕೆಲಸವಿಲ್ಲದೆ, ಕೆಲಸಕ್ಕೆ ಸರಿಯಾಗಿ ಕೂಲಿ ಸಿಗದ, ಸಾಮಾಜಿಕ ಸಂರಕ್ಷಣೆಯ ಯಾವ ಕಾನೂನು ಇಲ್ಲದ ನರಳುವಂತಾಯಿತು.

ಹಿಂದೆಂದೂ ಕಂಡರಿಯದ ಬಿಕ್ಕಟ್ಟೊಂದು ಭಾರತದ ಕಾರ್ಷಿಕ ವಲಯವನ್ನು ಆವರಿಸುತ್ತಿರುವ ಹಿನ್ನೆಲೆಯಲ್ಲಿ ಜವಾಬ್ದಾರಿಯುತ ಸಂಘಟನೆಗಳಾದ ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಗಳ ಅಖಿಲಭಾರತ ಮಟ್ಟದ ಮಂಡಳಿಗಳು ಕಳೆದ ಡಿಸೆಂಬರ್ ತಿಂಗಳಲ್ಲಿ ಕೇರಳದ ತಿರುವನಂತಪುರದಲ್ಲಿ ಸಭೆ ಸೇರಿ 1993ರಲ್ಲಿ ಅಂಗೀಕರಿಸಲಾಗಿದ್ದ 'ಪರ್ಯಾಯ ಕೃಷಿ ನೀತಿ'ಯನ್ನು ಸಮಕಾಲೀನಗೊಳಿಸಿದವು. ಸಮಕಾಲೀನಗೊಳಿಸಲಾದ ಈ ನೀತಿ ನಿರೂಪಣೆಯ ದೇಶದ ಕೃಷಿಯನ್ನು ವಿನಾಶದಿಂದ ಪಾರುಮಾಡುವಲ್ಲಿ ಹೋರಾಟನಿರತ ರೈತರಿಗ ಮತ್ತು ಕೃಷಿ ಕೂಲಿಕಾರರಿಗೆ ಒಂದು ಪ್ರಭಲವಾದ ಅಸ್ತ್ರವಾಗಲಿದೆ.

ಅದರ ಮುಖ್ಯಾಂಶಗಳು ಈ ಕೆಳಗಿನಂತಿವೆ.

ಪ್ರಭುತ್ವ ಪ್ರಾಯೋಜಿತ ಬಂಡವಾಳಶಾಹಿ ಬೆಳವಣಿಗೆಯ ಘಟ್ಟ.

ಸ್ವಾತಂತ್ರ್ಯನಂತರ, ಕ್ರಾಂತಿಕಾರಿ ಭೂಸುಧಾರಣೆಗಳನ್ನು ಜಾರಿಗೆ ತಂದು ಪ್ರತಿಗಾಮಿಯಾದ ಭೂಮಾಲಕ ಪದ್ಧತಿಯನ್ನು ನಾಶಮಾಡುವ ಬದಲು ಕಾಂಗ್ರೆಸ್ ಸರ್ಕಾರಗಳು ಕೃಷಿಯಲ್ಲಿ ಬಂಡವಾಳಶಾಹಿ ಬೆಳವಣಿಗೆಯನ್ನು ಸಾಧಿಸುವ ಕೃಷಿ ನೀತಿಗಳನ್ನು ಅಂಗೀಕರಿಸಿದವು. ಭೂಮಿತಿ ಕಾಯ್ದೆಗಳಲ್ಲಿನ ಲೋಪದೋಷಗಳಿಂದಾಗಿ ಭೂಮಾಲಕರಿಗೆ ದೊಡ್ಡ ದೊಡ್ಡ ಭೂಹಿಡುವಳಿಗಳನ್ನು ತಮ್ಮ ಒಡೆತನದಲ್ಲಿ ಉಳಿಸಿಕೊಳ್ಳುವುದು ಸಾಧ್ಯವಾಯಿತು. ಸರ್ಕಾರದ ನೀತಿಗಳನ್ನೇ ಬಳಸಿಕೊಂಡು ಭೂಮಾಲಕರು ಮತ್ತು ಶ್ರೀಮಂತ ರೈತರು ನೀರಾವರಿ; ವಿದ್ಯುತ್ ಸೌಲಭ್ಯ, ಸಬ್ಸಿಡಿಗಳು, ಸಾಂಸ್ಥಿಕ ಸಾಲಸೌಲಭ್ಯಗಳು, ಕೃಷಿ ಉಪಕರಣಗಳು, ಅಧಿಕ ಇಳುವರಿಯ ಬೀಜಗಳು, ಗೊಬ್ಬರಗಳು, ಕ್ರಿಮಿನಾಶಕಗಳು ಕೊಳವೆಭಾವಿಗಳು, ಪಂಪ್‌ಸೆಟ್‌ಗಳು ಮತ್ತಿತರ ಸೌಕರ್ಯಗಳನ್ನು ಕಬಳಿಸಿದರು. ಹಸಿರು ಕ್ರಾಂತಿ ಎಂದು ಬಣ್ಣಿಸಲಾದ ಈ ಕ್ರಮಗಳಿಂದ ಕೃಷಿ ಕ್ಷೇತ್ರದ ಬೆಳವಣಿಗೆಯ ಜೊತೆಯಲ್ಲಿ ವರ್ಗಗಳ ನಡುವಿನ ಹಾಗೂ ಪ್ರಾದೇಶಿಕ ಅಸಮಾನತೆಗಳು ತೀವ್ರಗೊಂಡವು. ಅಸ್ಪೃಶ್ಯತೆ ಮತ್ತು ಜಾತಿದಮನ ಮುಂದುವರೆಯಿತು. ಮಹಿಳೆಯರ, ದಲಿತರ, ಆದಿವಾಸಿಗಳ ಹಾಗೂ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಾ ಹೋದವು.

ಈ ಎಲ್ಲಾ ಗಂಭೀರ ಇತಿಮಿತಿಗಳ ನಡುವೆಯೂ ಪ್ರಭುತ್ವ ಪ್ರಾಯೋಜಿತ ಬಂಡವಾಳಶಾಹಿ ಬೆಳವಣಿಗೆಯ ಈ ಘಟಕ್ಕೆ ಕೆಲವು ಸಕಾರಾತ್ಮಕ ಲಕ್ಷಣಗಳಿದ್ದವು. ಉದಾಹರಣೆಗೆ ಸರ್ಕಾರ ನೀರಾವರಿ, ವಿದ್ಯುತ್, ಕೃಷಿ ಸಂಶೋಧನೆ ಮೊದಲಾದ ರಂಗಗಳಲ್ಲಿ ಸರ್ಕಾರ ಸಾರ್ವಜನಿಕ ಹೂಡಿಕೆಗೆ ಮುಂದಾಗುತ್ತಿತ್ತು. ಈ ಎಲ್ಲ ಕ್ರಮಗಳು ಬಹುದೊಡ್ಡ ಭಾಗವು ಗ್ರಾಮೀಣ ಶ್ರೀಮಂತರ ಪಾಲಾಗುತ್ತಿದ್ದರೂ ಕಾರ್ಷಿಕ ಕ್ಷೇತ್ರದಲ್ಲಿ ಒಂದು ಹಂತದ ಬೆಳವಣಿಗೆಯನ್ನು ಸಾಧಿಸಲು ಸಾಧ್ಯವಾಯಿತು.

ಬಂಡವಾಳಶಾಹಿ ಬೆಳವಣಿಗೆಯಲ್ಲಿ



ಉದಾರೀಕರಣದ ಘಟ್ಟ

1947 ರಿಂದ 1990 ರವರೆಗೆ ಕೃಷಿಯಲ್ಲಿ ಪ್ರಭುತ್ವ ಪ್ರಾಯೋಜಿತ ಬಂಡವಾಳಶಾಹಿ ಬೆಳವಣಿಗೆಯ ದಾರಿಯನ್ನು ಅನುಸರಿಸಲಾಯಿತು. ಮುಂದೆ ಸಾಮ್ರಾಜ್ಯಶಾಹಿ ಒತ್ತಡಗಳಿಗೆ ಮಣಿದು ಭಾರತದ ಪ್ರಭುತ್ವವು ಆರ್ಥಿಕ ಮಧ್ಯಪ್ರವೇಶದ ನೀತಿಯನ್ನು ಕೈಬಿಟ್ಟು ಬಂಡವಾಳಶಾಹಿ ಮಾರುಕಟ್ಟೆಗೆ ಶರಣಾಯಿತು.

ಪ್ರಭುತ್ವವು ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ನೀತಿಗಳನ್ನು ಅಪ್ಪಿಕೊಳುವಂತಾಗಲು 2 ಮುಖ್ಯ ಕಾರಣಗಳಿವೆ. ಒಂದು ಪ್ರಭುತ್ವ ಪ್ರಾಯೋಜಿತ ಬಂಡವಾಳಶಾಹಿ ಬೆಳವಣಿಗೆಯ ಅವಧಿಯಲ್ಲಿ ಲಾಭಗಳಿಸಿದ ಗುತ್ತೆದಾರಿ ಬಂಡವಾಳಿಗರು, ಭೂಮಾಲಕರು ಮತ್ತು ಇತರ ಶ್ರೀಮಂತ ವರ್ಗಗಳು ಉದಾರೀಕೃತ ಆಳ್ವಿಕೆಯ ಅಡಿಯಲ್ಲಿ ಇನ್ನಷ್ಟು ಹೆಚ್ಚು ಲಾಭಗಳಿಸಲು ಆತುರರಾಗಿದ್ದರು.

ಎರಡು : ಸೋವಿಯತ್ ಯೂನಿಯನ್ ಮತ್ತು ಪೂರ್ವ ಯುರೋಪಿನ ದೇಶಗಳಲ್ಲಿ ಸಮಾಜವಾದಕ್ಕೆ ಉಂಟಾದ ಹಿನ್ನಡೆಯ ನಂತರ ವಿಶ್ವದ ಮೇಲೆ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಲು ಸಾಮ್ರಾಜ್ಯಶಾಹಿ ರಾಷ್ಟ್ರಗಳು ತೀವ್ರಗೊಳಿಸಿದ ಪ್ರಯತ್ನ. ಸಾಮ್ರಾಜ್ಯಶಾಹಿ ರಾಷ್ಟ್ರಗಳು ಮತ್ತು ಅವುಗಳ ಬಹುರಾಷ್ಟ್ರೀಯ ಕಂಪನಿಗಳು ಐ.ಎಂ.ಎಫ್., ವಿಶ್ವಬ್ಯಾಂಕ್ ಮತ್ತು 1994 ರ ನಂತರ ವಿಶ್ವವ್ಯಾಪಾರ ಸಂಘಟನೆಯಂತಹ ವಿಶ್ವ ಹಣಕಾಸು ಸಂಘಟನೆಗಳನ್ನು ಬಳಸಿಕೊಂಡು ವಿಶ್ವದ ಇತರ ರಾಷ್ಟ್ರಗಳು, ಮುಖ್ಯವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಉದಾರೀಕರಣದ ನೀತಿಗಳನ್ನು ಅಂಗೀಕರಿಸುವಂತೆ ಒತ್ತಡ ಹಾಕಿದವು.

ಕೃಷಿಯಲ್ಲಿ ಉದಾರೀಕರಣದ ನೀತಿಗಳ ಪರಿಣಾಮವಾಗಿ ಭೂಸುಧಾರಣೆ ಮತ್ತು ಭೂಮಿತಿ ಕಾಯ್ದೆಗಳನ್ನು ಸಡಿಲುಗೊಳಿಸಿ ದೊಡ್ಡ ಬಂಡವಾಳಿಗರಿಗೆ ಹಾಗೂ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರೀ ಪ್ರಮಾಣದಲ್ಲಿ ಭೂಮಿಯನ್ನು ನೀಡಲಾಯಿತು. ಬೀಜ, ಗೊಬ್ಬರ, ನೀರಾವರಿ, ವಿದ್ಯುತ್ ಮೊದಲಾದವುಗಳಿಗಾಗಿ ನೀಡಲಾಗುತ್ತಿದ್ದ ಸಬ್ಸಿಡಿಗಳನ್ನು ಕಡಿತಮಾಡಲಾಯಿತು. ಇದರಿಂದಾಗಿ ಕೃಷಿ ಉತ್ಪಾದನಾ ವೆಚ್ಚ ಏರತೊಡಗಿತು. ಕೃಷಿ ಉತ್ಪನ್ನಗಳ ಆಮದುಗಳ ಮೇಲಿನ ಪ್ರಮಾಣಾತ್ಮಕ

...ಯ ಕೃಷಿ ನೀತಿ

...ಂಧಗಳನ್ನು ತೆಗೆದುಹಾಕಲಾಯಿತು. ಭಾರೀ ...ಡಿ ಪಡೆದ ವಿದೇಶಿ ಕೃಷಿ ಉತ್ಪನ್ನಗಳು ನಮ್ಮ ...ಾರುಕಟ್ಟೆಗೆ ನುಗ್ಗುತ್ತಿದ್ದಂತೆ ದೇಶೀಯ ಕೃಷಿ ...ತ್ಪನ್ನಗಳ ಬೆಲೆಗಳು ಕುಸಿಯಲಾರಂಭಿಸಿದವು.

ಕೃಷಿ, ನೀರಾವರಿ, ವಿದ್ಯುತ್, ಗ್ರಾಮೀಣ ...ಭಿವೃದ್ಧಿ, ಸಂಶೋಧನೆ ಮೊದಲಾದ ರಂಗಗಳಲ್ಲಿ ...ರ್ವಜನಿಕ ಹೂಡಿಕೆ ಕಡಿತ ಮಾಡಲಾಯಿತು. ...ದ್ಯುತ್, ನೀರಾವರಿಯಂತಹ ಪ್ರಮುಖ ...ತ್ರಗಳನ್ನು ಖಾಸಗೀಕರಣಗೊಳಿಸಿ ಅವುಗಳನ್ನು ...ಜಾರಿಗೊಳಿಸಲಾಯಿತು. ಗ್ರಾಮೀಣ ಸಾಂಸ್ಥಿಕ ...ಲ ಸೌಲಭ್ಯಗಳ ಕಡಿತದಿಂದ ರೈತರು ಮತ್ತು ...ಷಿ ಕೂಲಿಕಾರರು ಖಾಸಗೀ ಲೇವಾದೇವಿಗಾರರನ್ನು ...ವಲಂಭಿಸುವಂತಾಯಿತು, ಆಹಾರ ಸಬ್ಸಿಡಿಗಳ ...ಡಿತ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ...ಚಿಹಾಕುವ ಕ್ರಮಗಳಿಂದಾಗಿ ಬಡವರಿಗೆ ಆಹಾರ ...ಂರಕ್ಷಣೆಯೇ ಇಲ್ಲದಂತಾಯಿತು. ಕೃಷಿ ...ತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಘೋಷಿಸುವ ...ುತ್ತು ರೈತರಿಂದ ಖರೀದಿ ಮಾಡುವ ಕ್ರಮಗಳನ್ನು ...ಬಿಡಲಾಯಿತು: ರಫ್ತು ಆಧಾರಿತ ಕೃಷಿಗೆ ಆದ್ಯತೆ ...ೀಡುವ ಮೂಲಕ ಆಹಾರಧಾನ್ಯಗಳ ಬದಲಾಗಿ ...ಾಣಿಜ್ಯ ಬೆಳೆಗಳಿಗೆ ಪ್ರೋತ್ಸಾಹ ...ೊರಕುವಂತಾಯಿತು. ಕೃಷಿಯಲ್ಲಿ ಯಾಂತ್ರೀಕರಣ ...ಚ್ಚುತ್ತಿದ್ದರೆ ಕೂಲಿಕಾರರಿಗೆ ಸಿಗುವ ಕೆಲಸ ಮತ್ತು ...ಜ ಕೂಲಿ ಗಣನೀಯವಾಗಿ ಕಡಿಮೆಯಾಯಿತು. ...್ರಾಮೀಣ ಅಭಿವೃದ್ಧಿ, ಬಡತನ ನಿವಾರಣಾ ...ಮಗಳು, ಸಾರ್ವಜನಿಕ ಶಿಕ್ಷಣ, ಸಾರ್ವಜನಿಕ ...ರೋಗ್ಯ ಮೊದಲಾದ ಸಾಮಾಜಿಕ ಕ್ಷೇತ್ರಗಳ ...ಧ್ಯತೆಯನ್ನು ಕಡೆಗಣಿಸಲಾಯಿತು. ಎಲ್ಲಕ್ಕೂ ...ುಖ್ಯವಾಗಿ ಕಾರ್ಷಿಕ ರಂಗದ ವಿವಿಧ ವಲಯಗಳು ...ಹುರಾಷ್ಟ್ರೀಯ ಕಂಪನಿಗಳ ಆಕ್ರಮಣಕ್ಕೆ ...ಳಗಾಗುವಂತಾಯಿತು. ಹೊಸ ಪೇಟೆಂಟ್ ...ಕ್ಷೆಯ ಅಡಿಯಲ್ಲಿ ಬೀಜ, ತಳಿ ಉತ್ಪಾದನೆಯಲ್ಲಿ ...ನಮ್ಮ ಪರಂಪರಾಗತ ಜ್ಞಾನವನ್ನು ...ಪಹರಿಸುವಂತಾಯಿತು.

ನಮ್ಮ ರೈತರ ಹಾಗೂ ಕೃಷಿ ಕೂಲಿಕಾರರ ಮೇಲೆ ಈ ಉದಾರೀಕರಣ, ಖಾಸಗೀಕರಣ, ...ಜಾಗತೀಕರಣ ನೀತಿಗಳ ಪರಿಣಾಮ ...ಆಘಾತಕಾರಿಯಾಗಿವೆ. ಸ್ವಾತಂತ್ರ್ಯ ...ಂತರ ಮೊತ್ತ ಮೊದಲ ಭಾರಿಗೆ ಸಾವಿರಾರು ...ರೈತರು ಮತ್ತು ಕೃಷಿ ಕೂಲಿಕಾರರು ಸಾಲದ ಭಾದೆಗೆ ...ಸಿಕ್ಕುತ್ತಾಗಿ ಆತ್ಮಹತ್ಯೆ ಮಾಡಿಕೊಳ್ಳುವ ವಿಧ್ಯಮಾನ ...ಕಾಣುವಂತಾಗಿದೆ. ಆಂಧ್ರ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ಮತ್ತು ಕೇರಳ ಹಾಗೂ ಪಂಜಾಬ್ ರಾಜ್ಯಗಳಲ್ಲಿಯೂ ರೈತರ ಆತ್ಮಹತ್ಯೆಗಳು ಸಂಭವಿಸಿವೆ. ಪೌಷ್ಟಿಕ ಆಹಾರದ ತೀವ್ರ ಕೊರತೆ ಹಾಗೂ ಸಾವಿರಾರು ಹಸಿವಿನ ಸಾವು ಪ್ರಕರಣಗಳು ಸಹ ದೇಶದ ವಿವಿಧ ಭಾಗಗಳಿಂದ ವರದಿಯಾಗಿವೆ.

ಬಡತನ ಹೊಸ ಹೊಸ ವಿಭಾಗಗಳಿಗೆ ವಿಸ್ತರಿಸುತ್ತಿದೆ. ನಿರುದ್ಯೋಗ ಸಿಕ್ಕಾಪಟ್ಟೆ ಬೆಳೆಯುತ್ತಿದೆ. ಗ್ರಾಮೀಣ ಪ್ರದೇಶಗಳಿಂದ ನಗರಪ್ರದೇಶಗಳಿಗೆ ಕೃಷಿ ಕೂಲಿಕಾರರ ಮತ್ತು ರೈತರ ವಲಸೆ ಗಂಭೀರವಾದ ಹೊಸ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಹುಟ್ಟುಹಾಕುತ್ತಿದೆ.

ಕೃಷಿ ಉತ್ಪನ್ನಗಳ ಬೆಲೆ ಕುಸಿತ ಮತ್ತು ಕೃಷಿ ಖರ್ಚು ವೆಚ್ಚಗಳ ಏರಿಕೆ ರೈತರ ನಡುವಿನ ಎಲ್ಲಾ ವಿಭಾಗಗಳ ಹಿತಕ್ಕೂ ಧಕ್ಕೆಯನ್ನುಂಟುಮಾಡಿದೆ. ಗ್ರಾಮೀಣ ಸಾಲದ ಏರಿಕೆಯು ಪ್ರಮಾಣ ಆತಂಕವನ್ನುಂಟುಮಾಡುತ್ತಿದೆ. ಬಡ ಮತ್ತು ಮಧ್ಯಮ ರೈತರು ಗಣನೀಯವಾಗಿ ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಕೃಷಿಯಲ್ಲಿನ ಉತ್ಪಾದಕತ್ವ ಮತ್ತು ಉತ್ಪಾದನೆಯ ಬೆಳವಣಿಗೆಯು ದರ ಕುಸಿಯುತ್ತಿದೆ. ಆಹಾರದ ತಲಾ ಲಭ್ಯತೆ ಗಣನೀಯವಾಗಿ ಇಳಿಮುಖವಾಗುತ್ತಿದ್ದು ಆಹಾರಕ್ಕಾಗಿ ದೇಶದ ಜನತೆ ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಗ್ರಾಮೀಣ ವೈರುಧ್ಯಗಳು

ಭಾರತದ ಕೃಷಿ ಕ್ಷೇತ್ರದಲ್ಲಿ ಬಿಕ್ಕಟ್ಟು ಆಳವಾಗುತ್ತಿದ್ದಂತೆ ಗ್ರಾಮೀಣ ಭಾರತದಲ್ಲಿ ಎರಡು ಪ್ರಮುಖ ವೈರುದ್ಯಗಳು ತಲೆ ಎತ್ತುತ್ತಿವೆ. ಮೊದಲನೆಯದು : ಭೂಮಾಲಕರು, ದೊಡ್ಡ ಬಂಡವಾಳಶಾಹಿ ರೈತರು, ದೊಡ್ಡ ವ್ಯಾಪಾರಸ್ಥರು, ಲೇವಾದೇವಿಗಾರರನ್ನು ಒಳಗೊಂಡ ಗ್ರಾಮೀಣ ಶ್ರೀಮಂತರ ಹಾಗೂ ಕೃಷಿ ಕೂಲಿಕಾರರು, ಬಡ ಮತ್ತು ಮಧ್ಯಮ ರೈತರು ಹಾಗೂ ಗ್ರಾಮೀಣ ಕುಶಲಕರ್ಮಿಗಳನ್ನು ಒಳಗೊಂಡ ರೈತಾಪಿ ವಿಭಾಗಗಳ ನಡುವೆ ತೀವ್ರಗೊಳ್ಳುತ್ತಿರುವ ವೈರುಧ್ಯ. ಎರಡನೆಯದು ಸಾಮ್ರಾಜ್ಯಶಾಹಿಪ್ರೇರಿತ ಉದಾರೀಕರಣ ನೀತಿಗಳಿಗೆ ಕೇವಲ ವಿವಿಧ ರೈತಾಪಿ ವಿಭಾಗಗಳಿಂದ ಮಾತ್ರವಲ್ಲ ಗ್ರಾಮೀಣ ಶ್ರೀಮಂತರ ಕೆಲವು ವಿಭಾಗಗಳಿಂದಲೂ ಹೆಚ್ಚುತ್ತಿರುವ ಪ್ರತಿರೋಧ.

ಈ ಎರಡೂ ವೈರುದ್ಯಗಳನ್ನು ಗಣನೆಗೆ ತೆಗೆದುಕೊಂಡು ಒಂದು ಬಲಿಷ್ಠವಾದ ಕಾರ್ಷಿಕ ಆಂದೋಲನವನ್ನು ಕಟ್ಟಲು ಸಾಧ್ಯವಾಗಬೇಕಾಗಿದೆ. ಅಂತಹ ಆಂದೋಲನವು ಒಂದು ಪರ್ಯಾಯ ಕೃಷಿ ನೀತಿಯನ್ನು ಆಧಾರವಾಗಿಟ್ಟುಕೊಳ್ಳಬೇಕಾಗಿದೆ. ಅಂತಹ ಪರ್ಯಾಯ ಕೃಷಿ ನೀತಿಯಲ್ಲಿ ಉದಾರೀಕರಣದ ನೀತಿಗಳಿಂದ ಅತಿ ಹೆಚ್ಚು ಹಾನಿಯನ್ನು ಅನುಭವಿಸುತ್ತಿರುವ ಮತ್ತು ರೈತಾಪಿ ವಿಭಾಗಗಳಲ್ಲಿ ಬಹು ಸಂಖ್ಯಾತರಾಗಿರುವ ಕೃಷಿ ಕೂಲಿಕಾರರ ಮತ್ತು ಬಡ ರೈತರ ಹಿತಗಳ ಕೇಂದ್ರೀಕೃತವಾಗಿರಬೇಕು. ಪರ್ಯಾಯ ಕೃಷಿ ನೀತಿಯು ಮಧ್ಯಮ ಹಾಗೂ ಶ್ರೀಮಂತ ರೈತರ ನೈಜ ಹಿತಗಳನ್ನೂ ಒಳಗೊಂಡಂತೆ ಇಡೀ ಕಾರ್ಷಿಕ ರಂಗದ ಹಿತಗಳನ್ನು ಒಳಗೊಂಡಿರಬೇಕು. ಕೃಷಿ ಕೂಲಿಕಾರರು ಮತ್ತು ಬಡರೈತರ ಸುತ್ತ ರೈತಾಪಿ ವಿಭಾಗಗಳ ಐಕ್ಯತೆಯನ್ನು ಕಟ್ಟುವುದು ನಮ್ಮ ಕಾರ್ಯವ್ಯೂಹವಾಗಿರಬೇಕು. ಮಧ್ಯಮ ರೈತರನ್ನು ನಂಬಿಗಸ್ಥಮಿತ್ರರಾಗಿ ಅಣಿನೆರೆಸಲು ಮತ್ತು ಶ್ರೀಮಂತ ರೈತರ ವಿಶ್ವಾಸಗಳಿಸಲು ಸಾಧ್ಯವಾಗಬೇಕು.

ಕಾರ್ಷಿಕ ಆಂದೋಲನವು ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ನೀತಿಗಳನ್ನು ವಿರೋಧಿಸುವ ಎಲ್ಲರನ್ನು ಒಳಗೊಳ್ಳಲು ಸಾಧ್ಯವಾಗಬೇಕು. ಎಲ್ಲಾ ರೈತಾಪಿ ವಿಭಾಗಗಳ ಮೇಲೆ ಇರುವ ಭೂಮಾಲಕರ ಮತ್ತು ಶ್ರೀಮಂತ ವಿಭಾಗಗಳ ಸೈದ್ಧಾಂತಿಕ ಪ್ರಭಾವವನ್ನು ಅಳಿಸಿಹಾಕದೆ ಕಾರ್ಷಿಕ ಆಂದೋಲನ ಬಲಿಷ್ಠವಾಗಲಾರದು.

ಈ ಹಿನ್ನೆಲೆಯಲ್ಲಿ ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಗಳು ಪರ್ಯಾಯ ಕೃಷಿ ನೀತಿಯನ್ನು ದೇಶದ ರೈತರ ಮತ್ತು ಕೃಷಿ ಕೂಲಿಕಾರರ ಮುಂದಿಡುತ್ತದೆ.

ಪರ್ಯಾಯ ಕೃಷಿ ನೀತಿಯ ಮುಖ್ಯಾಂಶಗಳು

ಭೂಸುಧಾರಣೆಗಳು : ಕ್ರಾಂತಿಕಾರಕ ಭೂಸುಧಾರಣೆಗಳನ್ನು ಜಾರಿಗೆ ತಂದು ಹೆಚ್ಚುವರಿ ಭೂಮಿಯನ್ನು ಕೃಷಿ ಕೂಲಿಕಾರರಿಗೆ ಮತ್ತು ಬಡರೈತರಿಗೆ ಉಚಿತವಾಗಿ ವಿತರಣೆ ಮಾಡಬೇಕು. ಭೂಸುಧಾರಣಾ ಕಾಯ್ದೆಗಳನ್ನು ತಲೆಕೆಳಗೆ ಮಾಡುವ ಪ್ರಯತ್ನಗಳನ್ನು ವಿರೋಧಿಸಬೇಕು.

ಭೂಧಾನ ಭೂಮಿ, ದೇವಸ್ಥಾನಗಳ ಭೂಮಿ, ಸರ್ಕಾರಿ ಬಂಜರುಭೂಮಿ, ಮರಗಳು ಬೆಳೆಯದ ಅರಣ್ಯಭೂಮಿಯನ್ನು ಕೃಷಿ ಕೂಲಿಕಾರರಿಗೆ ಮತ್ತು ಬಡರೈತರಿಗೆ ವಿತರಣೆ ಮಾಡಬೇಕು. ಗಂಡ ಮತ್ತು ಹೆಂಡತಿಯ ಜಂಟಿ ಹೆಸರಿನಲ್ಲಿ ಪಟ್ಟಾ ವಿತರಣೆ ಮಾಡಬೇಕು. ಗೇಣಿದಾರ ಹಕ್ಕುಗಳಿಗೆ ರಕ್ಷಣೆ ನೀಡಬೇಕು. ಅರಣ್ಯ ಭೂಮಿಯಲ್ಲಿ ವಾಸ ಮಾಡುತ್ತಿರುವ ಮತ್ತು ವ್ಯವಸಾಯ ಮಾಡುತ್ತಿರುವ ಆದಿವಾಸಿಗಳ ಮತ್ತು ಇತರ ಬಡವರ ಅತಿಕ್ರಮ ಪ್ರಕರಣಗಳನ್ನು ಸಕ್ರಮಗೊಳಿಸಬೇಕು.

ಸರ್ಕಾರಿ ನಿರುಪಯುಕ್ತ ಭೂಮಿಯನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಮತ್ತು ಬಂಡವಾಳಶಾಹಿ ಮನೆತನಗಳಿಗೆ ನೀಡುವ ಬದಲು ಭೂಹೀನ ಬಡವರಿಗೆ ನೀಡಬೇಕು.

ಕೃಷಿ ಕೂಲಿಕಾರರು : ಕೇಂದ್ರ ಸರ್ಕಾರವು ಒಂದು ಸಮಗ್ರ ಕಾನೂನನ್ನು ಜಾರಿಗೆ ತರುವ ಮೂಲಕ ಕೃಷಿ ಕೂಲಿಕಾರರಿಗೆ ಉದ್ಯೋಗ, ಕನಿಷ್ಠ ವೇತನ ಮತ್ತು ಭವಿಷ್ಯನಿಧಿ, ನಿವೃತ್ತಿ ವೇತನ, ಗ್ರ್ಯಾಚುಯಿಟಿ, ರಜೆ, ಅಪಘಾತ ಪರಿಹಾರ, ನಿರುದ್ಯೋಗ ಭತ್ಯೆ ಮೊದಲಾದವುಗಳನ್ನು ಒಳಗೊಂಡ ಸಾಮಾಜಿಕ ಭದ್ರತೆಯನ್ನು ಖಚಿತಪಡಿಸಬೇಕು.

ಸರ್ಕಾರಿ ಕೆಲಸಗಳಲ್ಲಿ ಮಧ್ಯವರ್ತಿಗಳಿಲ್ಲದೆ ಕೃಷಿ ಕೂಲಿಕಾರರನ್ನು ನೇರವಾಗಿ ನೇಮಿಸಿಕೊಳ್ಳಬೇಕು. ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಎಲ್ಲ ವಿಧದ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಎಲ್ಲ ವಿಧದ ಜೀತ ಪದ್ಧತಿಯನ್ನು ನಿಷೇಧಿಸಬೇಕು ಕೃಷಿ ಕೂಲಿಕಾರರಿಗೆ, ಗ್ರಾಮೀಣ ಕುಶಲಕರ್ಮಿಗಳಿಗೆ ಮತ್ತು ಬಡ ರೈತರಿಗೆ ಮನೆ ನಿವೇಶನ ಹಾಗೂ ಮನೆಗಳನ್ನು, ರಿಯಾಯಿತಿ ದರದ ಸಾಲ ಸೌಲಭ್ಯವನ್ನು ಆದ್ಯತೆಯ ಮೇರೆಗೆ ಒದಗಿಸಬೇಕು.

ಸಾಮಾಜಿಕ ನ್ಯಾಯ: ಜಾತಿ, ಲಿಂಗ ಆಧಾರಿತ ದಮನ ದೌರ್ಜನ್ಯಗಳನ್ನು ದೃಡವಾಗಿ ಹತ್ತಿಕ್ಕಬೇಕು. ದಲಿತರ, ಆದಿವಾಸಿಗಳ, ಅಲ್ಪಸಂಖ್ಯಾತರ ಮತ್ತು ಮಹಿಳೆಯರ ಉನ್ನತಿಗಾಗಿ ಪರಿಣಾಮಕಾರಿ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ರಮಗಳನ್ನು ಜಾರಿಗೊಳಿಸಬೇಕು.



<u>ನೀರಾವರಿ:</u> ಗರಿಷ್ಠ ಪ್ರಮಾಣದ ನೀರಾವರಿ ಸೌಲಭ್ಯಗಳನ್ನು ಕನಿಷ್ಠ ಅವಧಿಯೊಳಗಾಗಿ ಪೂರ್ಣಗೊಳಿಸಬೇಕು. ಅಗತ್ಯ ಹಣವನ್ನು ಒದಗಿಸುವ ಮೂಲಕ ಪೂರ್ಣಗೊಳ್ಳದೆ ಇರುವ ಎಲ್ಲ ನೀರಾವರಿ ಯೋಜನೆಗಳನ್ನು ಸಮರೋಪಾದಿಯಲ್ಲಿ ಪೂರ್ಣಗೊಳಿಸಬೇಕು. ಚಾಲ್ತಿಯಲ್ಲಿರುವ ನೀರಾವರಿ ಯೋಜನೆಗಳ ನಿರ್ವಹಣೆಯನ್ನು ಸಮರ್ಥವಾಗಿ ಮಾಡಬೇಕು. ಜನತೆಯ ಪಾಲ್ಗೊಳ್ಳುವಿಕೆಯೊಂದಿಗೆ ಜಲ ಸಂರಕ್ಷಣಾ ಕ್ರಮಗಳನ್ನು ಕೈಗೆತ್ತಿಕೊಳ್ಳಬೇಕು. ಜಲ ಸಂಪನ್ಮೂಲಗಳ ಖಾಸಗೀಕರಣಕ್ಕೆ ಅವಕಾಶ ಇರಬಾರದು.

<u>ವಿದ್ಯುತ್:</u> ಕೃಷಿ ಕ್ಷೇತ್ರಕ್ಕೆ ಒಳ್ಳೆಯ ಗುಣಮಟ್ಟದ, ನಿರಂತರ ಮತ್ತು ರಿಯಾಯಿತಿ ದರದ ವಿದ್ಯುತ್ತನ್ನು ಒದಗಿಸಬೇಕು. ಕೃಷಿ ಕ್ಷೇತ್ರದ ಖಾಸಗೀಕರಣವನ್ನು ಮತ್ತು ವಿದ್ಯುತ್ ಕಾಯ್ದೆ-2003ಅನ್ನು ರದ್ದು ಮಾಡಬೇಕು.

ಸಾರ್ವಜನಿಕ ಹೂಡಿಕೆ: ನೀರಾವರಿ, ವಿದ್ಯುತ್, ಕೃಷಿ ಸಂಶೋಧನೆಯಂತಹ ಕ್ಷೇತ್ರಗಳಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸುವ ಮೂಲಕ ಕೃಷಿ ಉತ್ಪಾದನೆಯಲ್ಲಿ ನಿರಂತರ ಬೆಳವಣಿಗೆಯನ್ನು ಖಾತರಿಪಡಿಸಬೇಕು.

ಕೃಷಿ ಸಾಧನಗಳು (Agricultaral inputs): ಸುಧಾರಿತ ಬೀಜಗಳು, ಒಳ್ಳೆಯ ಗುಣಮಟ್ಟದ ರಸಗೊಬ್ಬರಗಳು ಮತ್ತು ಕ್ರಿಮಿನಾಶಕಗಳ ಉತ್ಪಾದನೆಗೆ ಹಾಗೂ ಕೃಷಿಯಲ್ಲಿ ಆಧುನಿಕ ತಂತ್ರಗಳ ಬಳಕೆಗೆ ಪ್ರೋತ್ಸಾಹ ನೀಡಬೇಕು. ಜೊಳ್ಳು ಬೀಜ, ಗೊಬ್ಬರ ಹಾಗೂ ಕ್ರಿಮಿನಾಶಕಗಳ ಹಾವಳಿಯನ್ನು ಕಟ್ಟುನಿಟ್ಟಾಗಿ ತಡೆಗಟ್ಟಬೇಕು.

ಗ್ರಾಮೀಣ ಸಾಲ : ರಿಯಾಯ್ತಿ ಬಡ್ಡಿದರಗಳ ಸಾಲ ಸೌಲಭ್ಯವನ್ನು ಕೃಷಿ ಕೂಲಿಕಾರರಿಗೆ, ಗ್ರಾಮೀಣ ಕುಶಲಕರ್ಮಿಗಳಿಗೆ, ಬಡ ಮತ್ತು ಮಧ್ಯಮ ರೈತರಿಗೆ ಒದಗಿಸಬೇಕು. ಖಾಸಗಿ ಲೇವಾದೇವಿಗಾರರ ಮೇಲೆ ಮತ್ತು ಅವರು ವಿಧಿಸುವ ಬಡ್ಡಿದರಗಳ ಮೇಲೆ ನಿಯಂತ್ರಣವಿರಬೇಕು.

ಸಹಕಾರಿ ಚಳುವಳಿ : ಉತ್ಪಾದನೆ, ಮಾರುಕಟ್ಟೆ, ಸಾಲನೀಡಿಕೆ ಮೊದಲಾದ ಕ್ಷೇತ್ರಗಳಲ್ಲಿ ಸಹಕಾರಿ ಸಂಘಗಳನ್ನು ಪ್ರೋತ್ಸಾಹಿಸಬೇಕು. ಭ್ರಷ್ಟಾಚಾರಕ್ಕೆ ತಡೆಹಾಕಬೇಕು.

ಕೃಷಿ ಸಬ್ಸಿಡಿಗಳು : ರೈತರಿಗೆ ಬೇಕಾಗುವ ಬೀಜ, ರಸಗೊಬ್ಬರ, ಕ್ರಿಮಿನಾಶಕ, ನೀರು ಮತ್ತು ವಿದ್ಯುತ್ತಿಗಾಗಿ ಸರ್ಕಾರದ ಸಬ್ಸಿಡಿಗಳನ್ನು ಹೆಚ್ಚಿಸಬೇಕು. ಸಾಮ್ರಾಜ್ಯಶಾಹಿ ರಾಷ್ಟ್ರಗಳು ತಮ್ಮ ಕೃಷಿ ಕ್ಷೇತ್ರಕ್ಕೆ ಸಬ್ಸಿಡಿಗಳನ್ನು ಹೆಚ್ಚಿಸುತ್ತಾ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಕೃಷಿ ಸಬ್ಸಿಡಿಗಳನ್ನು ಕಡಿಮೆ ಮಾಡಬೇಕೆಂದು ಒತ್ತಾಯಿಸುವ ಅವರ ದ್ವಿಮುಖ ನೀತಿಯನ್ನು ದೃಢವಾಗಿ ವಿರೋಧಿಸಬೇಕು.

ಬೆಂಬಲ ಬೆಲೆಗಳು ಮತ್ತು ಮಾರುಕಟ್ಟೆ

ಉತ್ಪಾದನಾ ಖರ್ಚುವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ಎಲ್ಲಾ ಕೃಷಿ ಉತ್ಪನ್ನಗಳನ್ನು ಸರಕಾರ ಖರೀದಿ ಮಾಡುವ ಪರಿಣಾಮಕಾರಿ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಪಂಚಾಯಿತ್ ಹಾಗೂ ಸಹಕಾರಿ ಸಂಘಗಳ ಮೂಲಕ ಕೃಷಿ ಉತ್ಪನ್ನಗಳ ವೈಜ್ಞಾನಿಕ ಶೇಖರಣಾ ವ್ಯವಸ್ಥೆಯನ್ನು ಖಚಿತಪಡಿಸಬೇಕು. ಮಾರುಕಟ್ಟೆ ವ್ಯವಸ್ಥೆಯಲ್ಲಿ ಸಣ್ಣ ಮತ್ತು ಮಧ್ಯಮ ರೈತರ ಹಿತಕ್ಕೆ ಧಕ್ಕೆಯಾಗುವುದನ್ನು ತಡೆಯಲು ಅಗತ್ಯ ಮಾರ್ಪಾಟುಗಳನ್ನು ಮಾಡಬೇಕು.

ಬೆಳೆ ವಿಮೆ: ಕೇಂದ್ರ ಸರ್ಕಾರವು, ಕನಿಷ್ಠ ಪ್ರಿಮಿಯಂ ದರಗಳೊಂದಿಗೆ, ಎಲ್ಲಾ ಬೆಳೆಗಳನ್ನು ಒಳಗೊಳ್ಳುವ ಸಮಗ್ರವಾದ ಬೆಳೆ ವಿಮಾ ಯೋಜನೆಯನ್ನು ಜಾರಿಗೆ ತರಬೇಕು. ಬೆಳೆ ಪರಿಹಾರ ಅಂದಾಜು ಮಾಡುವಾಗ ಪ್ರತಿಯೊಂದು ಕಂದಾಯ ಗ್ರಾಮವನ್ನು ಒಂದು ಘಟಕವಾಗಿ ಪರಿಗಣಿಸಬೇಕು.

ಸಾರ್ವಜನಿಕ ವಿತರಣಾ ವ್ಯವಸ್ಥೆ : ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಿ ಬಹುಸಂಖ್ಯಾತ ಜನರ ಕೊಳ್ಳುವ ಸಾಮರ್ಥ್ಯಕ್ಕೆ ತಕ್ಕಂತೆ ರಿಯಾಯ್ತಿ ದರಗಳಲ್ಲಿ ಅಗತ್ಯ ವಸ್ತುಗಳನ್ನು ಮತ್ತು ಆಹಾರಧಾನ್ಯಗಳನ್ನು ಸಾಕಷ್ಟು ಪ್ರಮಾಣದಲ್ಲಿ ನಿರಂತರವಾಗಿ ಒದಗಿಸಬೇಕು ಮತ್ತು ಇದಕ್ಕಾಗಿ ನ್ಯಾಯಬೆಲೆ ಅಂಗಡಿಗಳ ವ್ಯಾಪಕ ಜಾಲವನ್ನು ರಚಿಸಿ, ಅವುಗಳನ್ನು ಭ್ರಷ್ಟಾಚಾರದಿಂದ ಮುಕ್ತವಾಗಿ ನಿರ್ವಹಣೆ ಮಾಡಬೇಕು.

ಆಹಾರಧಾನ್ಯಗಳ ಸ್ವಾವಲಂಬನೆ : ಆಹಾರಧಾನ್ಯಗಳ ಉತ್ಪಾದನೆಗೆ ಆದ್ಯತೆ ನೀಡುವ ಮೂಲಕ ಆಹಾರ ಸ್ವಾವಲಂಬನೆಯನ್ನು ಖಚಿತಪಡಿಸಬೇಕು. ಆಹಾರ ಧಾನ್ಯಗಳ ಉತ್ಪಾದನೆಗೆ ವಿಶೇಷ ಪ್ರೋತ್ಸಾಹ ಯೋಜನೆಗಳನ್ನು ರೂಪಿಸಬೇಕು.

ಕೃಷಿ ಆಧಾರಿತ ಕೈಗಾರಿಕೆಗಳು : ರೈತರ ಪಾಲಿಗೆ ಒಳ್ಳೆಯ ಬೆಲೆ ಸಿಗುವಂತಾಗಲು ಕೃಷಿ ಆಧಾರಿತ

ಪುಟ 8 ಕ್ಕೆ

ಚುನಾವಣೆ-2004 ಟೀಕೆ-ಟಿಪ್ಪಣಿ

'ಅಡ್ವಾಣಿ ಯಾತ್ರಾ'ಗೆ ಕಾರಣ, ಗೂಢಚಾರ ವರದಿ

ಪ್ರಮೋದ್ ಮಹಾಜನ್ ಹೇಳುತ್ತಾರೆ 'ಅಡ್ವಾಣಿ ಯಾತ್ರಾ'ಗೆ ಮೂರು ತಿಂಗಳಿಂದ ತಯಾರಿ ನಡೆದಿತ್ತು. ಅತ್ಯಂತ ಗೋಪ್ಯವಾಗಿ ಆದರೆ ಉಳಿದ ಬಿಜೆಪಿ ನಾಯಕರು ಇದು ಚುನಾವಣಾ ಫಲಿತಾಂಶದ ಬಗ್ಗೆ ವರದಿಗಳಿಂದ ಭಯಗೊಂಡು ಗಡಿಬಿಡಿಯಲ್ಲಿ ಯೋಜಿಸಿದ ಯಾತ್ರೆ ಎನ್ನುತ್ತಾರೆ. ಬಿಜೆಪಿ ನಾಯಕತ್ವ ಕೇಂದ್ರ ಗೂಢಚಾರ ಸಂಸ್ಥೆಯ ವರದಿಯಿಂದ ಗಾಬರಿಯಾಗಿದೆಯಂತೆ. ಈ ವರದಿ ಪ್ರಕಾರ ಕಾಂಗ್ರೆಸ್‌ಗೆ 185ರಿಂದ 200 ಸೀಟು ಬರಬಹುದು. ಬಿಜೆಪಿಗೆ 150 ರಿಂದ 175 ಸೀಟು ಬರಬಹುದು.... ವರದಿ ಸೋನಿಯಾ ಗಾಂಧಿಗೆ ಉತ್ತರ ಪ್ರದೇಶ-ಹರ್ಯಾಣಗಳಲ್ಲಿ ಉತ್ತಮ ಸ್ಪಂದನ ದೊರಕಿದೆ. ಎಂದು ಹೇಳಿದೆ. ತಮಿಳು ನಾಡಿನಲ್ಲಿ ಎನ್‌ಡಿಎ ನೆಲಕಚ್ಚಬಹುದು ಎಂಬ ಗೂಢಚಾರರ ವರದಿಯ ಅಂದಾಜಿಂದಾಗಿಯೇ ಅಡ್ವಾಣಿ ತಮ್ಮ ಯಾತ್ರೆ ತಮಿಳು ನಾಡಿನಿಂದ ಆರಂಭಿಸುತ್ತಿದ್ದಾರೆ.

-ತೆಹೆಲ್ಕಾ ಮಾರ್ಚ್ 13,2004

★

'ಯಾತ್ರಾ-ರಿಮಿಕ್ಸ್'

ಇಂಡಿಯಾ ಟುಡೆ ಅಡ್ವಾಣಿ ಯಾತ್ರೆಯನ್ನು 'ಯಾತ್ರಾ-ರಿಮಿಕ್ಸ್' ಎಂದು ಕರೆದಿದೆ. ಹಿಂದೀ ಹಾಡುಗಳಲ್ಲಿ ರಿ-ಮಿಕ್ಸ್ ಎಂದರೆ ಹಳೆಯ ಹಾಡುಗಳನ್ನು ಇನ್ನೊಂದು ರೀತಿಯಲ್ಲಿ ಪುನಃ ರೆಕಾರ್ಡ್ ಮಾಡುವುದು.

- ಅದ್ವಾಣಿ 'ಯಾತ್ರೈಟಿಸ್'ನಿಂದ ಬಳಲುತ್ತಿದ್ದಾರೆ. ಅವರ ಯಾತ್ರೆ ಸರ್ಕಾರದ 'ಭಾರತ ಪ್ರಕಾಶಿಸುತ್ತಿದೆ' ಪ್ರಚಾರದ ಅವಳಿ.

-ಇಂಡಿಯಾ ಟುಡೆಯಲ್ಲಿ ಕಾಂಗ್ರೆಸ್ ವಕ್ತಾರ ಅಭಿಷೇಕ್ ಸಿಂಘವಿ ಟೀಕೆ

- ಮಾಧ್ಯಮಗಳು ಬಿಜೆಪಿ ಗೆದ್ದಿದೆ ಎಂದು ನಿರ್ಧರಿಸಲಿಟ್ಟಿದೆ. ಬಿಜೆಪಿ ಹರಿದು ಬಿಡುತ್ತಿರುವ ಚಿತ್ರಗಳು ಮಾಧ್ಯಮಗಳ ತುಂಬಾ ಕಾಂಗ್ರೆಸ್ ಸೋಲುತ್ತಿರುವ ಕುದುರೆ ಎಂದು ಬಿಂಬಿಸಲಾಗುತ್ತಿದೆ.

-ಕಾಂಗ್ರೆಸ್ ಟೀಕೆ (ಇಂಡಿಯಾ ಟುಡೇಯಲ್ಲಿ)

★

ಮಹಾಭಾರತ-2004

ಈ ಬಾರಿಯ ಚುನಾವಣೆಗಳು ಕಾಂಗ್ರೆಸ್-ಬಿಜೆಪಿ ಯ ನಡುವೆ ಆಯಾರಾಂ - ಗಯಾರಾಂ ಓಡಾಟ ಮಾತ್ರವಲ್ಲ. ರಾಜಕೀಯವಾಗಿ ಬಲಾಢ್ಯ ಕುಟುಂಬಗಳಲ್ಲಿ 'ಗೆದ್ದ ಎತ್ತು ನನ್ನದೇ' ಎನ್ನುವ ಹಾಗೆ ಎರಡೂ ಪಕ್ಷಗಳ ನಡುವೆ ಕುಟುಂಬದ ಸದಸ್ಯರನ್ನು ಹಂಚುವ ಹೊಂಚು ಕಾಣುತ್ತಿದೆ.

★

ಲಾಲ್ ಮತ್ತು ಲಾಲ್

ಓಮ್ ಪ್ರಕಾಶ್ ಚೌಟಾಳಾ ಎನ್‌ಡಿಎನಿಂದ ಹೊರ ಬಂದಿದ್ದಾರೆ. ಆದರೆ ಅತನ ಸೋದರ ರಂಜಿತ್ ಸಿಂಗ್ ಬಿಜೆಪಿ ಸೇರಿದ್ದಾರೆ.

★

ಶುಕ್ಲ ಮತ್ತು ಶುಕ್ಲ

ಛತ್ತೀಸ್‌ಗಢ್‌ನ ನಾಯಕ ವಿದ್ಯಾಚರಣ ಶುಕ್ಲ ನ್ಯಾಶನಲ್ ಕಾಂಗ್ರೆಸ್ ಪಾರ್ಟಿಯಲ್ಲಿದ್ದಾರೆ, ಆತನ ಸೋದರ ಶ್ಯಾಮಿಚರಣ ಶುಕ್ಲಾ ಕಾಂಗ್ರೆಸನಲ್ಲಿದ್ದಾರೆ.

★

ಪಾಟೀಲ್ ಮತ್ತು ಪಾಟೀಲ್

ಮಹಾರಾಷ್ಟ್ರ ಉಪಮುಖ್ಯಮಂತ್ರಿ ವಿಜಯ ಸಿಂಗ್ ಮೊಳಿತೆ ಪಾಟೀಲ್ ನ್ಯಾಶನಲ್ ಕಾಂಗ್ರೆಸ್ ಪಾರ್ಟಿಯವರು. ಸೋದರ ಪ್ರತಾಪ್ ಸೋಲಾಪುರದ ಬಿಜೆಪಿ ಎಂ.ಎಲ್.ಎ.

★

ಸಿಂಗ್-ಸಿಂಗ್

ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ದಿಗ್ವಿಜಯಸಿಂಗ್ ಕಾಂಗ್ರೆಸ್‌ನಲ್ಲಿದ್ದಾರೆ. ಸೋದರ ಲಕ್ಷ್ಮಣಸಿಂಗ್ ಬಿಜೆಪಿ ಸೇರಿದ್ದಾರೆ.

ಕಾಂಗ್ರೆಸ್ ರಕ್ಷಣಾತ್ಮಕ ಆಟ ಆಡುತ್ತಿದೆ. ಅದು ಬಿಜೆಪಿಗೆ ಚರ್ಚೆ ವಿಷಯ ಏನಿರಬೇಕೆಂಬ ಆಯ್ಕೆ ಬಿಟ್ಟು ಕೊಟ್ಟಿದೆ. ಈ ಚುನಾವಣೆ ವಾಜಪೇಯಿ - ಸೋನಿಯಾ, ನಡುವೆ ಅಮೇರಿಕ ಮಾದರಿಯ ಅಧ್ಯಕ್ಷೀಯ ಸ್ಪರ್ಧೆ ಎಂಬಂತೆ ನಡೆಸಲು ಅವಕಾಶ ಕೊಟ್ಟಿದೆ. ಗುಜರಾತ್ ಸಂದರ್ಭದಲ್ಲಿ ಬಲವಾದ ಸವಾಲು ಹಾಕಲಿಲ್ಲ. ಅದು ತನ್ನ ಜಾತ್ಯತೀತ ಸ್ವರೂಪದ ಬಗ್ಗೆ ಅಳುಕಬಾರದು.

-ಮಾಲಿನಿ ಪಾರ್ಥಸಾರಥಿ

(ಖ್ಯಾತ ಪತ್ರಕರ್ತೆ ಔಟ್‌ಲುಕ್‌ನಲ್ಲಿ.

★

ಬಿಜೆಪಿ ದೇಶದ ನಾಲ್ಕು ಮೂಲಭೂತ ನೀತಿಗಳಿಗೆ ಅಲಿಪ್ತತೆ, ಜಾತ್ಯತೀತತೆ, ಸಮಾಜವಾದ ಮತ್ತು ಪ್ರಜಾಪ್ರಭುತ್ವಗಳಿಗೆ ತಿಲಾಂಜಲಿ ಇತ್ತಿದೆ. ಆದರೆ ಒಂದು ರೀತಿಯಲ್ಲಿ ಕಾಂಗ್ರೆಸ್ ಸಹ ಶಾಮೀಲಾಗಿದೆ. ಅದರ ಲೆಕ್ಕಾಚಾರಗಳು ನೀತಿ ಬದ್ಧವೂ ಅಲ್ಲ. ಕೆಲಸಕ್ಕೆ ಬರುವಂಥದ್ದು ಅಲ್ಲ.

-ಹರ್ಷ ಮಾಂಡರ್

(ಗುಜರಾತ್ ನರಮೇಧದ ವಿರುದ್ಧ ಪ್ರತಿಭಟಿಸಿ ರಾಜೀನಾಮೆ ಕೊಟ್ಟು ಐಎಎಸ್ ಅಧಿಕಾರಿ) ಔಟ್‌ಲುಕ್‌ನಲ್ಲಿ,

● ಶರತ್‌ಚಂದ್ರ

ಲೋಡಿಂಗ್ ಮತ್ತು ಅನ್‌ಲೋಡಿಂಗ್ ತೂಕದ ಹಮಾಲರ ಸಂಘ ಉದ್ಘಾಟನೆ

ಚಿತ್ರದುರ್ಗದ ಚಳ್ಳಕೆರೆ ತಾಲ್ಲೂಕಿನ ತಳಕು ಹೋಬಳಿಯ ಕೋಡಿಹಳ್ಳಿ ಗ್ರಾಮದಲ್ಲಿ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್ ನೇತೃತ್ವದಲ್ಲಿ ಫೆಬ್ರವರಿ 6 ರಂದು ಲೋಡಿಂಗ್ ಮತ್ತು ಅನ್‌ಲೋಡಿಂಗ್ ಹಾಗೂ ತೂಕದ ಹಮಾಲರ ಸಂಘದ ಉದ್ಘಾಟನೆ ನಡೆಯಿತು.

ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ ಟಿ.ತಿಪ್ಪೇಸ್ವಾಮಿಯವರು ಈ ಸಂಘಟನೆ ಕಾರ್ಮಿಕರ ದುಡಿದು ತಿನ್ನುವುದಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಸಮಾಜದ ಬದಲಾವಣೆ ಮಾಡುವುದಕ್ಕೆ ಮುಂದಾಗಿರುತ್ತೇವೆ. ನಮ್ಮ ದೇಶದಲ್ಲಿ ಸಿ.ಐ.ಟಿ.ಯು.ವಿನ ಅಡಿಯಲ್ಲಿ ಕೋಟ್ಯಾಂತರ ಕಾರ್ಮಿಕರು ಸದಸ್ಯತ್ವ ಹೊಂದಿದ್ದು, ಸಮಾನತೆಯ ಒಂದು ಸಮಾಜವನ್ನು ತರಬೇಕೆಂಬುದು ಸಿಐಟಿಯುನ ಉದ್ದೇಶವಾಗಿದೆ ಎಂದು ತಿಳಿಸಿದರು.

ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್‌ನ ಜಿಲ್ಲಾ ಸಮಿತಿ ಅಧ್ಯಕ್ಷರಾದ ಬಿ.ನಾಗರಾಜ್‌ರವರು ಮಾತನಾಡುತ್ತಾ, ಈಗಾಗಲೇ ಜಿಲ್ಲಾದ್ಯಂತ ಹಮಾಲಿ ಸಂಘಟನೆಗಳನ್ನು ಮಾಡಿದ್ದು, ಅನೇಕ ಹೋರಾಟಗಳನ್ನು ನಾವು ಮಾಡಿರುತ್ತೇವೆ. ನಮ್ಮ ಕಾರ್ಮಿಕರಿಗಾಗಲಿ, ಕೃಷಿ ಕಾರ್ಮಿಕರಿಗಾಗಲಿ, ರೈತರಿಗಾಗಲಿ, ಎಲ್ಲೇ ಅನ್ಯಾಯ ನಡೆದರೂ, ಸಿಐಟಿಯು ಪ್ರತಿಭಟಿಸುತ್ತದೆ ಎಂದು ಸಭೆಯಲ್ಲಿ ಘೋಷಿಸಿದರು.

ಚಳ್ಳಕೆರೆಯ ಎಪಿಎಂಸಿ ತೂಕದ ಹಮಾಲರ ಸಂಘದ ಕಾರ್ಯದರ್ಶಿಯಾದ ಎಸ್.ರಾಜಣ್ಣ ಸಹ ಮಾತನಾಡಿದರು.

ಈ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಕೋಡಿಹಳ್ಳಿ ಗ್ರಾಮದ ಹಮಾಲಿ ಸಂಘದ ಅಧ್ಯಕ್ಷರಾದ ಎಂ.ಪಾಲಯ್ಯ ವಹಿಸಿದ್ದರು ಹಾಗೂ ಗ್ರಾಮದ ಮುಖಂಡರಾದ, ಗ್ರಾಮ ಪಂಚಾಯ್ತಿಯ ಮಾಜಿ ಉಪಾಧ್ಯಕ್ಷಿಣಿ ಲಕ್ಷ್ಮಿದೇವಿ ಜಿಲ್ಲಾ ಹಮಾಲಿ ಫೆಡರೇಷನ್‌ನ ಉಪಾಧ್ಯಕ್ಷರಾದ ಪಿ.ಬೊಮ್ಮಣ್ಣ, ಶಿವಮ್ಮ ತಿಪ್ಪಮ್ಮ ಹಾಗೂ ಗ್ರಾಮದ ಮುಖಂಡರಾದ 'ಓಬಯ್ಯ, ಮಲ್ಲಿಕಾರ್ಜುನಪ್ಪ, ಗ್ರಾಮದ ಹಮಾಲಿ ಸಂಘದ ಕಾರ್ಯದರ್ಶಿಯಾದ ಟಿ.ತಿಪ್ಪೇಸ್ವಾಮಿ, ಸಣ್ಣಯ್ಯ, ಉಪಾಧ್ಯಕ್ಷರಾದ ಎಸ್.ರಾಜಣ್ಣ ಅನೇಕ ಗ್ರಾಮದ ಗಣ್ಯರು, ಸಭೆಯಲ್ಲಿ ಭಾಗವಹಿಸಿದ್ದರು.

..... ಪರ್ಯಾಯ ಕೃಷಿ ನೀತಿ

ಪುಟ 7 ರಿಂದ

ಆಹಾರ ಸಂಸ್ಕರಣೆಯ ಕೈಗಾರಿಕೆಗಳನ್ನು ಸರ್ಕಾರ ಪ್ರೋತ್ಸಾಹಿಸಬೇಕು. ಇದರಿಂದ ಗ್ರಾಮೀಣ ನಿರುದ್ಯೋಗವನ್ನು ಕಡಿಮೆ ಮಾಡಬಹುದು.

ಪಶುಸಂಗೋಪನೆ : ರೈತರಿಗೆ ಮತ್ತು ಕೃಷಿ ಕೂಲಿಕಾರರಿಗೆ ಪೂರಕ ಉದ್ಯೋಗ ಹಾಗೂ ಆದಾಯವನ್ನು ಒದಗಿಸುವ ಪಶುಸಂಗೋಪನೆ, ಕೋಳಿಸಾಕಣಿಕೆ, ಮೀನು ಸಾಕಣಿಕೆ, ರೇಷ್ಮೆ ಸಾಕಣಿಕೆ ಮೊದಲಾವುಗಳಿಗೆ ವಿಶೇಷ ಪ್ರೋತ್ಸಾಹ ನೀಡಬೇಕು. ಅಗ್ಗದ ದರಗಳಲ್ಲಿ ಸಾಲ, ಪಶುಸಂಗೋಪನಾ ಸಂಶೋಧನೆಗಳಿಗೆ ಹಣ ಒದಗಿಸಬೇಕು. ಮೀನುಗಾರಿಕೆ ಮತ್ತು ಹೈನುಗಾರಿಕೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶವನ್ನು ತಡೆಯಬೇಕು.

ಕೃಷಿ ಸಂಶೋಧನೆ : ಸರ್ಕಾರಗಳು ಕೃಷಿ ಸಂಶೋಧನೆಗೆ ಅಗತ್ಯ ಹಣವನ್ನು ಮೀಸಲಿಡುವಂತಾಗಬೇಕು. ಒಳ್ಳೆಯ ಬೀಜ, ತಳಿಗಳು, ಮಣ್ಣು ಪರೀಕ್ಷೆ, ಭೂಸಂರಕ್ಷಣೆ, ಬೆಳೆಗಳಿಗೆ ತಗಲುವ ರೋಗಗಳು, ಕೀಟಗಳ ಹಾವಳಿ ತಡೆಗಟ್ಟುವುದು, ಮೊದಲಾದವುಗಳ ಬಗ್ಗೆ ವ್ಯಾಪಕ ಮತ್ತು ನಿರಂತರ ಸಂಶೋಧನೆಗೆ ವ್ಯವಸ್ಥೆ ಮಾಡಬೇಕು.

ತರಬೇತಿ ಮತ್ತು ಸೇವಾ ವಿಸ್ತರಣೆ : ಕೃಷಿಯ ವೈಜ್ಞಾನಿಕ ನಿರ್ವಹಣೆಗಾಗಿ ರೈತರಿಗೆ ತರಬೇತಿ ಅತ್ಯಗತ್ಯ. ಸಂಪನ್ಮೂಲಗಳ ಸದ್ಬಳಕೆ, ರಸಗೊಬ್ಬರ ಮತ್ತು ಕ್ರಿಮಿನಾಶಕಗಳ ಬಳಕೆ, ನೀರಾವರಿ ಜೈವಿಕ ಕೃಷಿ, ಕೃಷಿ ಉಪಕರಣಗಳ ಬಳಕೆ ಇತ್ಯಾದಿಗಳಿಗಾಗಿ ವಿವಿಧ ಇಲಾಖೆಗಳ ಸೇವೆಯನ್ನು ಗಣನೀಯವಾಗಿ ವಿಸ್ತರಿಸಬೇಕು.

ಆದಿವಾಸಿಗಳ ಪ್ರಶ್ನೆ : ಆದಿವಾಸಿಗಳು ಅನೇಕ ವರ್ಷಗಳಿಂದ ವಾಸ ಮಾಡಿಕೊಂಡು ಇರುವ ನಿವೇಶನಗಳನ್ನು ಹಾಗೂ ವ್ಯವಸಾಯ ಮಾಡಿಕೊಂಡು ಬಂದಿರುವ ಭೂಮಿಯನ್ನು ಅವರಿಗೆ ಕಾಯಂಗೊಳಿಸಬೇಕು. ಇದಕ್ಕಾಗಿ ಕೇಂದ್ರದ ಅರಣ್ಯ ಸಂರಕ್ಷಣಾ ಕಾಯ್ದೆ - 1980 ಕ್ಕೆ ಅಗತ್ಯ ತಿದ್ದುಪಡಿಗಳನ್ನು ಮಾಡಬೇಕು. ಲೇವಾದೇವಿಗಾರರು ಮತ್ತು ಶ್ರೀಮಂತರು ಕಬಳಿಸಿರುವ ಆದಿವಾಸಿಗಳ ಭೂಮಿಯನ್ನು [illegible] ಹಿಂತಿರುಗಿಸಬೇಕು.

ಸಮಾಜಕಲ್ಯಾಣ : ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರು, ಆರೋಗ್ಯ, ಪೌಷ್ಟಿಕ ಆಹಾರ, ಸ್ವಾಸ್ಥ್ಯ ಪರಿಪಾಲನೆ, ಶಿಕ್ಷಣ ಮೊದಲಾದ ನಾಗರಿಕ ಸೌಲಭ್ಯಗಳನ್ನು ಖಚಿತಪಡಿಸಬೇಕು. ಎಲ್ಲಾ ಕೃಷಿ ಕೂಲಿಕಾರರಿಗೆ ಮತ್ತು ಬಡ ರೈತರಿಗೆ ಹಾಗೂ ಗ್ರಾಮೀಣ ಬಡವರಿಗೆ ಮನೆಗಳನ್ನು ಒದಗಿಸುವ ಸಮಗ್ರ ಯೋಜನೆಯನ್ನು ಜಾರಿಗೆ ತರಬೇಕು. ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ವಿಶೇಷ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಬೇಕು.

ಗ್ರಾಮೀಣ ಉದ್ಯೋಗ : ಸಮಗ್ರ ಹಾಗೂ ಶಾಶ್ವತವಾದ 'ಕೂಲಿಗಾಗಿ ಕಾಳು' ಯೋಜನೆಯೂ ಸೇರಿದಂತೆ ಗ್ರಾಮೀಣ ಉದ್ಯೋಗ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು. ಸ್ವಸಹಾಯ ಗುಂಪುಗಳನ್ನು ಮತ್ತು ಸ್ವಯಂ ಉದ್ಯೋಗ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಬೇಕು.

ಪಂಚಾಯತ್ ಸಂಸ್ಥೆಗಳು : ಪಂಚಾಯತ್ ಸಂಸ್ಥೆಗಳಿಗೆ ಕಾಲಕಾಲಕ್ಕೆ ಚುನಾವಣೆಗಳನ್ನು ನಡೆಸಿ ಅವುಗಳನ್ನು ಪ್ರಜಾಸತ್ತಾತ್ಮಕವಾಗಿ ನಡೆಸುವುದಾಗಬೇಕು. ಯೋಜನೆ ಆಡಳಿತ ಮತ್ತು ಕಾರ್ಯನಿರ್ವಹಣೆಯ ಹೆಚ್ಚೆಚ್ಚು ಅಧಿಕಾರಗಳನ್ನು ಹಾಗೂ ಹೆಚ್ಚೆಚ್ಚು ಹಣಕಾಸು ಒದಗಿಸಿ ಈ ಸಂಸ್ಥೆಗಳನ್ನು ಬಲಪಡಿಸಬೇಕು.

ಕೇಂದ್ರ ರಾಜ್ಯ ಸಂಬಂಧಗಳು : ಕೃಷಿಯು ರಾಜ್ಯ ಸರ್ಕಾರಗಳ ಜವಾಬ್ದಾರಿಯ ವ್ಯಾಪ್ತಿಗೆ ಸೇರಿದೆ. ಆದರೆ ರಾಜ್ಯ ಸರ್ಕಾರಗಳು ಅನುಭವಿಸುತ್ತಿರುವ ಆರ್ಥಿಕ ಮುಗ್ಗಟ್ಟನ್ನು ಗಣನೆಗೆ ತೆಗೆದುಕೊಂಡು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಹೆಚ್ಚೆಚ್ಚು ಹಣಕಾಸು ಅಧಿಕಾರವನ್ನು ಸಂಪನ್ಮೂಲಗಳನ್ನು ಒದಗಿಸುವುದು ಅಗತ್ಯವಿದೆ.

ವ್ಯಾಪಾರ ಸಂಬಂಧಿತ ವಿಷಯಗಳು : ಭಾರತ [illegible] ವಿಶ್ವ ವ್ಯಾಪಾರ ಸಂಘಟನೆ ವಿಧಿಸುತ್ತಿರುವ [illegible] ನೀತಿಗಳನ್ನು ದೃಢವಾಗಿ ವಿರೋಧಿಸಬೇಕು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಆಂತರಿಕ ಹಾಗೂ ರಫ್ತು ಸಬ್ಸಿಡಿಗಳನ್ನು ಕಡಿತಮಾಡುವಂತೆ ಒತ್ತಾಯಿಸಬೇಕು. ಆಮದುಗಳ ಮೇಲೆ ಪ್ರಮಾಣಾತ್ಮಕ ನಿರ್ಬಂಧಗಳನ್ನು ಪುನಃ ಹೇರಬೇಕು. ಆಮದು ಸುಂಕಗಳನ್ನು ಹೆಚ್ಚಿಸಬೇಕು. 1970 ರ ಭಾರತೀಯ ಪೇಟೆಂಟ್ ಕಾಯ್ದೆಯನ್ನು ಪೂರ್ವಸ್ಥಿತಿಗೆ ತರಬೇಕು.

ಪರಿಸರ : ಪರಿಸರ ರಕ್ಷಣೆ, ಭೂಸವಕಳಿ



ತಪ್ಪಿಸುವುದು, ಬಂಜರುಭೂಮಿ ಅಭಿವೃದ್ಧಿ, ಬೆಳೆಪದ್ಧತಿ, ಅರಣ್ಯ ಸಂರಕ್ಷಣೆ ಜಲಸಂರಕ್ಷಣೆ ಮೊದಲಾದವುಗಳಿಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಗಳು ಸಾಮ್ರಾಜ್ಯಶಾಹಿ ರಾಷ್ಟ್ರಗಳಿಂದ ನಿರ್ದೇಶಿಸಲ್ಪಟ್ಟಿರುವ ನೀತಿಗಳ ವಿರುದ್ಧ ಶಕ್ತಿಯುತವಾದ ಹೋರಾಟವನ್ನು ರೂಪಿಸಬೇಕೆಂದು ಮತ್ತು ಪರ್ಯಾಯ ಕೃಷಿ ನೀತಿಯನ್ನು ಜಾರಿಗೊಳಿಸುವಂತೆ ಭಾರತ ಸರ್ಕಾರದ ಮೇಲೆ ಒತ್ತಡ ಹೇರಬೇಕೆಂದು ದೇಶದ ರೈತರಿಗೆ ಹಾಗೂ ಕೃಷಿ ಕೂಲಿಕಾರರಿಗೆ ಕರೆನೀಡಿವೆ.

ಅಮಾನವೀಯ ಹೆಣ್ಣು ಭ್ರೂಣ ಹತ್ಯೆ

ಮಹಿಳೆಯರ ಬಗ್ಗೆ ಶತಶತಮಾನಗಳಿಂದಲೂ ಅನುಸರಿಸುತಾ ಬಂದ ತಾರತಮ್ಯದ ಭಾಗವಾಗಿ ಇಂದಿಗೂ ಹೆಣ್ಣು ಭ್ರೂಣ ಹತ್ಯೆಯಂತಹ ಅಮಾನವೀಯ ಕೃತ್ಯಗಳು ಆಧುನಿಕ ತಂತ್ರಜ್ಞಾನ ಬಳಸಿಕೊಳ್ಳುತ್ತಿರುವ ಈ ಪೈಶಾಚಿಕ ಪ್ರವೃತ್ತಿಯತ್ತ ಗಹನವಾದ ಚಿಂತನೆ ಇಲ್ಲಿದೆ.

ನಾನು ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದಾಗ ಸಮುದಾಯ ಆರೋಗ್ಯದ ಬಗ್ಗೆ ಕೆಲವು ವಿಷಯಗಳನ್ನು ತಿಳಿಸಿಕೊಡಲಾಗಿತ್ತು. ಆದರೆ ಸಮಾಜ ಹಾಗೂ ಸಾಮಾಜಿಕ ಪಿಡುಗುಗಳ ಬಗ್ಗೆ (ವರದಕ್ಷಿಣೆ ಸಾವುಗಳು, ಸ್ತ್ರೀ ಭ್ರೂಣಹತ್ಯೆ ಇತ್ಯಾದಿ) ಏನನ್ನೂ ತಿಳಿಸಿಯೇ ಇರಲಿಲ್ಲ. ಕ್ರಮೇಣ ವೈದ್ಯಕೀಯ ಪುಸ್ತಕಗಳೊಂದಿಗೆ, ಸಮಾಜದ ಅನೇಕ ವಿಷಯಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಿದಾಗ ಗೊತ್ತಾದ ಅನೇಕ ವಿಷಯಗಳಲ್ಲಿ ಸ್ತ್ರೀ ಶೋಷಣೆ ಮುಖ್ಯವಾದದ್ದು.



ಸ್ತ್ರೀ ಶೋಷಣೆಯ ಹಲವಾರು ಮುಖಗಳನ್ನು ನಾವು ನಮ್ಮ ಸಮಾಜದಲ್ಲಿ ಕಾಣಬಹುದಾಗಿದೆ. ವರದಕ್ಷಿಣೆ ಸಾವು, ಲಿಂಗ ಸಮಾನತೆ ಇಲ್ಲದಿರುವುದು ಇತ್ಯಾದಿ. ಇವುಗಳ ವಿರುದ್ಧ ಮಹಿಳೆಯರಲ್ಲಿ ಕೆಲವರು, ಸಾಮಾಜಿಕ ಕಳಕಳಿ ಇರುವವರು ಈ ಶೋಷಣೆಯ ವಿರುದ್ಧ ಹೋರಾಡುತ್ತಾ ಬಂದಿದ್ದಾರೆ.

ನಮ್ಮ ಸಮಾಜದಲ್ಲಿ ಹೆಣ್ಣು ಮಗು ಹುಟ್ಟುವುದೆಂದರೆ ಮನೆಯೊಳಗೆ ಪೀಡೆ ಬಂದಂತೆ. 'ನಮಗೆ ಗಂಡು ಮಗು ಬೇಕು' ಎನ್ನುವ ಮಾತುಗಳು ಸಾಮಾನ್ಯ. ಇದಲ್ಲದೆ ಸ್ತ್ರೀ ಶಿಶು ಹತ್ಯೆಯ ಪರಿಪಾಠ ಅನೇಕ ಶತಮಾನಗಳಿಂದಲೂ ವ್ಯಾಪಕವಾಗಿ ಬೆಳೆದುಬಂದಿದೆ. ಹೆಣ್ಣು ಅನೇಕ ತರಹದ ಲಿಂಗ ತಾರತಮ್ಯಗಳಿಗೆ ಬಲಿಯಾಗುತ್ತಾ ಬಂದಿದ್ದಾಳೆ. ನಮ್ಮ ಸಮಾಜ ಪುರುಷಪ್ರಧಾನ ಸಾಮಾಜವಾದ್ದರಿಂದ ಸ್ತ್ರೀ ಶಿಶುವಿನ ನಿರ್ಲಕ್ಷ್ಯ, ಮಹಿಳೆಯ ಮೇಲೆ ದೌರ್ಜನ್ಯ, ವರದಕ್ಷಿಣೆ ಕಿರುಕುಳ ಹಾಗೂ ಸಾವು ಮುಂತಾದವುಗಳನ್ನು ಪ್ರತಿನಿತ್ಯ ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ.

ಇತ್ತೀಚೆಗೆ (1960) ವಿಜ್ಞಾನದ ಆವಿಷ್ಕಾರದಿಂದ ಗರ್ಭದೊಳಗಿರುವ ಭ್ರೂಣ ಪರೀಕ್ಷೆ ಸಾಧ್ಯವಾಯಿತು. ಭ್ರೂಣಕ್ಕೆ ಉಂಟಾಗುವ ರೋಗವನ್ನು ಮೊದಲೇ ಕಂಡುಹಿಡಿದಲ್ಲಿ ಕೆಲವು ಭೀಕರ ಕಾಯಿಲೆಗಳನ್ನು ತಡೆಯಬಹುದಾಗಿದ್ದಿತು. ಭ್ರೂಣವನ್ನು ತೆಗೆಯಲು ಗರ್ಭಪಾತ ಮಾಡುವ ತಂತ್ರಜ್ಞಾನ ಲಭ್ಯವಾಯಿತು. ಭ್ರೂಣವನ್ನು ತೆಗೆಯಲು ಗರ್ಭಪಾತ ಮಾಡುವ ತಂತ್ರಜ್ಞಾನವೂ ರೂಪುಗೊಂಡಿತು. ಅದೇ ವೇಳೆಗೆ ಗರ್ಭಜಲ ತೆಗೆದು (ಅಮ್ನಿಯೋಸೆಂಟೆಸಿಸ್) ಪರೀಕ್ಷೆ ಮಾಡಿ, ಭ್ರೂಣದ ಲಿಂಗ ನಿರ್ಧರಿಸುವ ತಂತ್ರಜ್ಞಾನ ಲಭ್ಯವಾಯಿತು. ತಂತ್ರಜ್ಞಾನವನ್ನು ಆಧುನಿಕ ರೋಗ ಕಂಡುಹಿಡಿಯಲು ಉಪಯೋಗಿಸುವುದರ ಬದಲು ಗರ್ಭಪಾತ ಮಾಡಿಸಲು ಉಪಯೋಗಿಸುವುದೇ ತಂತ್ರಜ್ಞಾನ ದುರ್ಬಳಕೆ ಎನ್ನಬಹುದಾಗಿದೆ.

ಭಾರತದಲ್ಲಿ ಮೊದಲ ಬಾರಿಗೆ ಪಂಜಾಬಿನಲ್ಲಿ ಹೆಣ್ಣು ಭ್ರೂಣವಿದೆಯೇ ಎಂದು ತಿಳಿಸುವ ಪರೀಕ್ಷಾ ಕೇಂದ್ರಗಳು ಪ್ರಾರಂಭವಾದವು. ವ್ಯಾಪಕವಾದ ಜಾಹಿರಾತನ್ನೂ ಕೊಡಲಾಯಿತು. ಈ ಪರೀಕ್ಷಾ ವಿಧಾನ ಅಷ್ಟೇನೂ ಸುಲಭವಾಗಿರದಿದ್ದರೂ, ನೋವುರಹಿತವಾಗಿಲ್ಲದಿದ್ದರೂ, ಜನರು ಹೆಣ್ಣು ಭ್ರೂಣ ಕಂಡುಹಿಡಿಯಲು ಈ ಕೇಂದ್ರಗಳಿಗೆ ಬರಲಾರಂಭಿಸಿದರು.

ವಿಜ್ಞಾನದ ಆವಿಷ್ಕಾರ ನಿಲ್ಲುವಂತಹುದಲ್ಲ. ಇದೇ ವೇಳೆಗೆ ಜಾರಿಗೆ ಬಂದ ಇನ್ನೊಂದು ಆವಿಷ್ಕಾರ 'ಅಲ್ಟ್ರಾಸೌಂಡ್'. ಶಬ್ದದ ಅಲೆಗಳನ್ನು ದೇಹದ ಒಳಗಿನ ಅಂಗಾಂಗಗಳ ಮೇಲೆ ಅಪ್ಪಳಿಸುವಂತೆ ಮಾಡಿ ದೇಹದ ಅಂಗಾಂಗಗಳ ರೋಗ ಕಂಡುಹಿಡಿಯಲು ಅಲ್ಟ್ರಾಸೌಂಡ್‌ನಿಂದ ಸಾಧ್ಯವಾಯಿತು. ಶಬ್ದದ ಅಲೆಗಳನ್ನು ಭ್ರೂಣದ ಮೇಲೆ ಅಪ್ಪಳಿಸುವಂತೆ ಮಾಡಿದಾಗ ಭ್ರೂಣದ ಲಿಂಗವನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆ. ಈ ಆವಿಷ್ಕಾರ ಅಮ್ನಿಯೋಸೆಂಟೆಸ್ಟಿಸ್ ವಿಧಾನಕ್ಕಿಂತ ಹೆಚ್ಚು ಸುಲಭ, ಅಪಾಯರಹಿತ, ಶೀಘ್ರ, ನೋವು ರಹಿತ ವಿಧಾನವಾಗಿದ್ದುದರಿಂದ, ಮೊದಲಿಗಿಂತಲೂ ಹೆಚ್ಚು ಜನರು ಲಿಂಗ ನಿರ್ಧಾರ ಆಧಾರಿತ, ಗರ್ಭಪಾತವನ್ನು ಮಾಡಿಸಲು ಮುಂದಾದರು. ಇದನ್ನೂ ವೈದ್ಯಕೀಯ ವಿಜ್ಞಾನದ ದುರ್ಬಳಕೆಯೆಂದೇ ಹೇಳಬಹುದು.

ವಿಜ್ಞಾನದ ಮುನ್ನಡೆಯಂತೆಯೇ ತಂತ್ರಜ್ಞಾನ ಮುನ್ನಡೆಯಿಂದ 1990ರ ಸುಮಾರಿಗೆ ಮಹಿಳೆ ಭ್ರೂಣ ಪರೀಕ್ಷೆ ಮಾಡಿಸಿಕೊಳ್ಳಲು ಮೊಬೈಲ್ ಅಲ್ಟ್ರಾಸೌಂಡ್ ಉಪಕರಣ ಲಭ್ಯವಾಯಿತು. ಮಹಿಳೆಗೆ ದೂರದ ಪಟ್ಟಣಕ್ಕೆ ಹೋಗುವ ಅವಶ್ಯಕತೆ ಇಲ್ಲವಾಯಿತು. ಸಣ್ಣ ಅಲ್ಟ್ರಾಸೌಂಡ್ ಉಪಕರಣಗಳನ್ನು ವೈದ್ಯರು ತಮ್ಮ ಕಾರುಗಳಲ್ಲೇ ಇಟ್ಟುಕೊಂಡು ಬೇರೆ ಊರುಗಳಿಗೆ ಹೋಗಿ ಭ್ರೂಣ ಪರೀಕ್ಷೆ ಮಾಡಿ, ಹೆಚ್ಚು ಹೆಚ್ಚು ಭ್ರೂಣಹತ್ಯೆಗೆ ಕಾರಣವಾದರು.

ಪ್ರಕಾಶ್ ಸಿ. ರಾವ್

ಈಗ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಈ ಪರೀಕ್ಷಾ ಸೌಲಭ್ಯಗಳು ಲಭ್ಯವಿದೆ ಹಾಗೂ ಈ ಪರೀಕ್ಷಾ ವಿಧಾನದ ಸಹಾಯದಿಂದ ಹೆಣ್ಣು ಭ್ರೂಣಹತ್ಯೆ ನಿರಂತರವಾಗಿ ಸಾಗಿದೆ.

ಇದರಿಂದೇನು ಅಪಾಯ

ನಿಸರ್ಗ ಜೀವರಾಶಿಗಳ ಸಮತೋಲನವನ್ನು ಕಾಪಾಡುತಾ ಬಂದಿದೆ. ಅದರಿಂದಾಗಿಯೇ ಇಂದು ಹೆಣ್ಣು ಗಂಡುಗಳ ಸಂಖ್ಯೆ ಸುಮಾರು ಒಂದೇ ಆಗಿದೆ. ಆದರೆ ಹೆಣ್ಣು ಗರ್ಭಪಾತದಿಂದ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತದೆ. ನಮ್ಮ ದೇಶದಲ್ಲಿ 1901 ಜನಗಣತಿಯಲ್ಲಿ ಸುಮಾರು 1000 ಗಂಡಸರಿಗೆ 961 ಹೆಣ್ಣು ಮಕ್ಕಳಿದ್ದರು. ಆದರೆ 2001 ರ ಸುಮಾರಿಗೆ 1000 ಗಂಡಸರಿಗೆ 933 ಹೆಣ್ಣುಮಕ್ಕಳಿದ್ದಾರೆಂದು ಅಧ್ಯಯನಗಳಿಂದ ತಿಳಿದುಬಂದಿದೆ. ನಮ್ಮ ದೇಶದಲ್ಲಿ ಅನೇಕ ಕಡೆಗಳಲ್ಲಿ ಹೆಣ್ಣುಗಳ ಸಂಖ್ಯೆ ಇನ್ನೂ ಕಡಿಮೆಯಾಗಿದ್ದು ಕಂಡುಬಂದಿದೆ. ಇದಕ್ಕೆ ಕಾರಣ ಕೇವಲ ಭ್ರೂಣಹತ್ಯೆ ಒಂದೇ ಆಗಿರದಿದ್ದರೂ, ಭ್ರೂಣಹತ್ಯೆ ಪ್ರಮುಖ ಪಾತ್ರವಹಿಸುತ್ತದೆಯೆಂದು ಹೇಳಬಹುದಾಗಿದೆ. ಈ ನೈಸರ್ಗಿಕ ಅಸಮತೋಲನೆಯಿಂದ ಅನೇಕ ಸಾಮಾಜಿಕ ಸಮಸ್ಯೆಗಳಾಗುವ ಸಾಧ್ಯತೆ ಇದೆ. ಹೆಣ್ಣು ಶಿಶುವೆಂದು ತಪ್ಪಾಗಿ ತೀರ್ಮಾನಿಸಿ ಅನೇಕ ಬಾರಿ ಗಂಡು ಶಿಶುಗಳ ಗರ್ಭಪಾತವಾಗಿರುವುದರೂ ಕಂಡುಬಂದಿದೆ (Human error)!

ವೈದ್ಯರೇಕೆ ಈ ವಿಧಾನವನ್ನು ಮುಂದುವರೆಸುತ್ತಿದ್ದಾರೆ?

ವೈದ್ಯಕೀಯ ತಂತ್ರಜ್ಞಾನದ ದುರ್ಬಳಕೆ, ಲಾಭ ತಂದುಕೊಡುತ್ತಿದೆ! ಈ ದಿನವೂ ಲಾಭ ತಂದುಕೊಡುವ ವ್ಯಾಪಾರ ಇದಾಗಿರುವುದರಿಂದ ಇದನ್ನು ವೈದ್ಯರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ಅನೇಕ ಅಸಮರ್ಪಕ ಕಾರಣಗಳನ್ನು ನೀಡಲು ಮುಂದಾಗಿದ್ದಾರೆ. ಉದಾ. ಜನಸಂಖ್ಯಾ ನಿಯತ್ರಣ, ಅಸಹಾಯಕ ಮಹಿಳೆಗೆ ಸಹಾಯ, ಸಾಮಾಜಿಕ ಒತ್ತಡ, ಗಂಡ ಹೆಂಡಿರ ತೀರ್ಮಾನವನ್ನು ನಾವು ಬದಲಿಸಲು ಸಾಧ್ಯವಿಲ್ಲ ಇತ್ಯಾದಿ.

ಉತ್ತಮ ಶಿಕ್ಷಣ ಪಡೆದ, ಸರಕಾರದ ಮಾನ್ಯತೆ ಪಡೆದ, ತಜ್ಞ ಸ್ತ್ರೀ. ವೈದ್ಯರು ಸ್ತ್ರೀಭ್ರೂಣಹತ್ಯೆ ಮಾಡಲು ಮುಂದಾಗಿದ್ದಾರೆ. ವೈದ್ಯಕೀಯ ವೃತ್ತಿ ವ್ಯಾಪಾರೀಕರಣಗೊಂಡಿದೆ. ಈ ಬೆಳವಣಿಗೆ ಕೆಲವರಿಗೆ ಚಿಂತೆ ಉಂಟುಮಾಡಿದ್ದರಿಂದ ಅದನ್ನು ಹತೋಟಿಯಲ್ಲಿ ತರುವ ಪ್ರಯತ್ನ ಜಾರಿಗೆ ಬಂತು. ಇದರಿಂದಾಗಿ ಸರ್ಕಾರ ವೈದ್ಯಕೀಯ ಗರ್ಬಪಾತ ಕಾನೂನನ್ನು 1971 ರಲ್ಲಿ ಅನುಷ್ಠಾನಕ್ಕೆ ತಂದಿತು. ಆದರೂ ಹೆಣ್ಣು ಗರ್ಭಪಾತಗಳು ನಿರಂತರವಾಗಿ ಸಾಗಿದುದರಿಂದ ಹೆಣ್ಣು ಗರ್ಬಪಾತವನ್ನು ನಿಷೇಧಿಸಿ ಕಾನೂನನ್ನು ತರಲಾಯಿತು (1994). ಆದರೂ ಹೆಣ್ಣು ಗರ್ಭಪಾತ ನಿಲ್ಲಿಸಿಲ್ಲ! 2001 ರಲ್ಲಿ ಅಲ್ಟ್ರಾಸೌಂಡ್ ಯಂತ್ರಗಳ ನೋಂದಣಿ ಮಾಡಿಸಲು ಕರೆ ನೀಡಲಾಯಿತು. ರಾಜ್ಯ ಜಿಲ್ಲಾಮಟ್ಟದಲ್ಲಿ ಜಾಗೃತಿ ಸಮಿತಿಗಳ ರಚನೆಯಾಗಿ ಸರ್ಕಾರಕ್ಕೆ ಕ್ರಿಯಾ ವರದಿ ಸಲ್ಲಿಸಲು ಒತ್ತಾಯಿಸಲಾಯಿತು.

ಸರ್ವೋಚ್ಚ ನ್ಯಾಯಾಲಯ, ಇತ್ತೀಚೆಗೆ ಎಚ್ಚೆತ್ತುಕೊಂಡು ವೈದ್ಯಕೀಯ ಕೌನ್ಸಿಲ್ ಈ ವೈದ್ಯರುಗಳ ಮೇಲೆ ಛೀಮಾರಿ ಹಾಕಿವೆ. ಜನಸಾಮಾನ್ಯರು ಜನಜಾಗೃತ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು. ಕೆಲವರೇ ಈ ವಿಷಯಗಳನ್ನು ಬದಲಿಸಲಾಗದು ಆದರೆ ಇವುಗಳನ್ನು ಬದಲಿಸುವ ಅಗತ್ಯತೆ ಇದೆ. ಹೆಣ್ಣು ಬ್ರೂಣ ಹತ್ಯೆ ಮುಂದುವರೆಸಿಕೊಂಡು ಹೋಗುತ್ತಿರುವ ವೈದ್ಯರಿಗೆ ಜನರೇ ಎಚ್ಚರಿಕೆ ಕೊಡಲು ಸಾಧ್ಯವೇ?

ಆಧಾರ:
ಹೆಣ್ಣುಭ್ರೂಣ ಗರ್ಭಪಾತ,
ಮಹಾದುರಂತದ ಅಂಚಿನಲ್ಲಿ,
ಡಾ. ಸಂಜೀವ ಕುಲಕರ್ಣಿ

ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆ ಬಿಡುಗಡೆ

14ನೇ ಲೋಕಸಭಾ ಚುನಾವಣೆಗಾಗಿ ಸಿಪಿಐ(ಎಂ) ಪ್ರಣಾಳಿಕೆಯನ್ನು ಪಕ್ಷದ ಪ್ರಧಾನ ಕಾರ್ಯದರ್ಶಿ ಹರ್‌ಕಿಶನ್ ಸಿಂಗ್ ಅವರು ಮಾರ್ಚ್ 17 ರಂದ ದೆಹಲಿಯಲ್ಲಿ ಬಿಡುಗಡೆ ಗೊಳಿಸಿದರು. 16 ಪುಟಗಳ ಪ್ರಣಾಳಿಕೆಯು ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಮೊದಲ ಭಾಗದಲ್ಲಿ 1998 ರಿಂದ ಅಧಿಕಾರದಲ್ಲಿರುವ ವಾಜಪೇಯಿ ರಾಜಕೀಯ ನೀತಿ, ಸಿರಿವಂತರ ಪರವಾದ ಆರ್ಥಿಕ ನೀತಿ ಮತ್ತು ಅದರ ಲಜ್ಜೆಗೆಟ್ಟ ಅಮೇರಿಕ ಸಾಮ್ರಾಜ್ಯಶಾಹಿ ಪರ ನೀತಿಯನ್ನು ಎಳೆ ಎಳೆಯಾಗಿ ವಿಮರ್ಶಿಸಲಾಗಿದೆ.

ಎರಡನೇ ಭಾಗದಲ್ಲಿ ಪರ್ಯಾಯ ನೀತಿಗಳ ಒಂದು ಯಾದಿಯನ್ನು ಸಿಪಿಐ(ಎಂ) ಜನತೆಯ ಮುಂದಿಡುತ್ತಾ ಆ ಪರ್ಯಾಯ ನೀತಿಗಳನ್ನು ಜಾರಿಗೆ ತರುವ ಭಾಗವಾಗಿ ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳನ್ನು ಸೋಲಿಸಿ, ಸಿಪಿಐ(ಎಂ) ಮತ್ತು ಎಡ ಪಕ್ಷಗಳನ್ನು ಬಲಪಡಿಸಿ ಕೇಂದ್ರದಲ್ಲಿ ಒಂದು ಜಾತ್ಯತೀತ ಸರ್ಕಾರ ಅಧಿಕಾರಕ್ಕೆ ಬರುವಂತೆ ಮತ ಚಲಾಯಿಸಬೇಕೆಂದು ದೇಶಬಾಂಧವರಲ್ಲಿ ಮನವಿ ಮಾಡಿದೆ.

ಪ್ರಣಾಳಿಕೆ ಬಿಡುಗಡೆ ಮಾಡಿ ಮಾತನಾಡಿದ ಕಾಮ್ರೆಡ್ ಸುರ್ಜಿತ್ ಬಿಜೆಪಿ ಮತ್ತೆ ಅಧಿಕಾರಕ್ಕೆ ತಡೆಯುವುದು ನಮ್ಮ ಗುರಿಯಾಗಿದೆ ಎಂದರು. ಪೊಲಿಟ್‌ಬ್ಯೂರೊ ಸದಸ್ಯರಾದ ಪ್ರಕಾಶ್ ಕಾರಟ್, ಎಸ್.ರಾಮಚಂದ್ರನ್ ಪಿಳ್ಳೈ ಹಾಗೂ ಸೀತಾರಾಮ ಯಚೂರಿ ಉಪಸ್ಥಿತರಿದ್ದರು.



ಸಜ್ಜನರ ಬದುಕು

ನೀತಿಪರ ಮಂದಿಗಳ ಬೆಂಬಲಕೆ
ಸರಕಾರ ಇದ್ದಿರಲು ಬೇಕಿತ್ತು ಒಂದು
ಅದು ಇಲ್ಲದಿರುವುದೇ ಬಹುದೊಡ್ಡ ತೊಡಕು
ಕ್ರೂರಿಗಳ ಕೈಯಲ್ಲಿ ಸಜ್ಜನರ ಬದುಕು.
ಹೊತ್ತು ಕಂತುವ ಸಮಯ ಹತ್ತಿರದೆ ಬಂತು
ಕಟ್ಟಲೇ ಆಗಿಲ್ಲ ಸರಿಯಾಗಿ ಕಂತು
ಕಂತು ಕಟ್ಟದೆ ಬರಿದೆ ಮುಳುಗಿದರೆ ಸೂರ್ಯ
ವ್ಯರ್ಥವೇ ಆದಂತು ಬಂದಿರುವ ಕಾರ್ಯ
...ವಿಜಯಬಾಬಿ

ಬಿಜೆಪಿ ಮತ್ತು ಮಾಧ್ಯಮಗಳು....

ಪುಟ 5 ರಿಂದ

ಏಕೈಕ ರಾಷ್ಟ್ರವ್ಯಾಪಿ ಸ್ಪರ್ಧೆಯಾಗಿ ಉಳಿದಿಲ್ಲ - ಈಗ ಸಾರ್ವತ್ರಿಕ ಚುನಾವಣೆಯೆಂಬುದು ಏಕಕಾಲದಲ್ಲಿ ನಡೆಯುವ 28 ಚುನಾವಣಾ ಸ್ಪರ್ಧೆಗಳು ಹಾಗೂ ರಾಷ್ಟ್ರೀಯ ಮಟ್ಟದ ತೀರ್ಪೆಂಬುದು ಈ ಎಲ್ಲಾ ರಾಜ್ಯಮಟ್ಟದ ತೀರ್ಪುಗಳ ಒಟ್ಟು ಮೊತ್ತವಷ್ಟೆ. ಲೋಕಸಭಾ ಚುನಾವಣೆಗಳಲ್ಲೂ ರಾಜ್ಯವೇ ರಾಜಕೀಯ ಆಯ್ಕೆಯ ಘಟಕ"

ಇನ್ನು ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರಗಳಂತಹ ದೊಡ್ಡ ರಾಜ್ಯಗಳಲ್ಲಿ ಪೂರ್ವಭಾಗ ಏನು ಮಾಡುತ್ತದೆ ಎಂಬುದು ಪಶ್ಚಿಮ ಭಾಗಕ್ಕೆ ತಿಳಿದಿರುವುದಿಲ್ಲ.

ರಾಜ್ಯವಾರು ಲೆಕ್ಕಾಚಾರ

ದೇಶದ ಈ ಭಿನ್ನತೆಗಳ ಹಿಂದೆ ಮೂಲ ಏಕತೆಯಿದ್ದರೂ ಈ ಭಿನ್ನತೆಗಳಿಂದಾಗಿಯೇ ಮಾಧ್ಯಮಗಳ ಭವಿಷ್ಯ ವಾಣಿಗಳನ್ನು ನಂಬಲಾಗದು. ರಾಜ್ಯವಾರು ಅಥವಾ ವಲಯವಾರು ಲೆಕ್ಕಾಚಾರಗಳನ್ನು ಆಧರಿಸಿದ ಕೆಲವು ವಿಶ್ಲೇಷಣೆಗಳಿಂದ ಈ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಇಲ್ಲಿ ನಾವು ನಮ್ಮ ತೀರ್ಮಾನಗಳಿಗೇ ಬರಲು ಪ್ರಯತ್ನಿಸೋಣ. ಬಿಜೆಪಿ ಮತ್ತು ಅವರ ಮಿತ್ರರು ಕಳೆದ ಬಾರಿ ಹಿಮಾಚಲ ಪ್ರದೇಶದಲ್ಲಿ ಎಲ್ಲಾ 4 ಸ್ಥಾನಗಳನ್ನು, ದಿಲ್ಲಿಯಲ್ಲಿ ಎಲ್ಲಾ 7 ಹಾಗೂ ಹರ್‍ಯಾಣದಲ್ಲಿ ಎಲ್ಲಾ 10 ಸ್ಥಾನಗಳನ್ನೂ ಪಡೆದರು. ಆದ್ದರಿಂದ ಇಲ್ಲಿ ಅದರ ಸ್ಥಾನಗಳು ಹೆಚ್ಚುವ ಸಾಧ್ಯತೆಯೇ ಇಲ್ಲ. ಕಮ್ಮಿಯಾಗುವ ಅವಕಾಶವೇ ಇದೆ. ಉದಾ: ಹಿಮಾಚಲದಲ್ಲಿ ಕನಿಷ್ಠ 2 ಹಾಗೂ ದಿಲ್ಲಿಯಲ್ಲಿ 3 ಸ್ಥಾನಗಳನ್ನು ಬಿಜೆಪಿಯವರು ಕಳೆದುಕೊಳ್ಳಬಹುದು ಎಂದು ಹೇಳಲಾಗುತ್ತಿದೆ. ಹರ್‍ಯಾಣದಲ್ಲಿ ಬಿಜೆಪಿ ಮತ್ತು ಐಎನ್‌ಎಲ್‌ಡಿ ಪ್ರತ್ಯೇಕಗೊಂಡು ಪರಸ್ಪರ ವಿರುದ್ಧ ಖಡ್ಗ ಝಳಪಿಸುತ್ತಿವೆ. ಹಳ್ಳಿ - ಪಟ್ಟಣಗಳ ಒಡಕಿನಿಂದ ಇವೆರಡೂ ಪಕ್ಷಗಳಿಗೆ ಈ ಬಾರಿ ತೊಂದರೆಯಾಗುವ ಸಾಧ್ಯತೆಯಿದೆ.

ಜಮ್ಮು-ಕಾಶ್ಮೀರದಲ್ಲಿ ಬಿಜೆಪಿಗೆ 6 ರಲ್ಲಿ 2 ಸಿಕ್ಕಿತು. ಅದು ಹೆಚ್ಚುವ ಸಾಧ್ಯತೆಯಿಲ್ಲ. ನ್ಯಾಶನಲ್ ಕಾನ್ಫರೆನ್ಸ್ ಈಗಾಗಲೇ ಎನ್‌ಡಿಎ ಬಿಟ್ಟಿರುವುದು ಬಿಜೆಪಿಯ ಪರಿಸ್ಥಿತಿಯನ್ನು ಹದಗೆಡಿಸಿದೆ.


1999 ರಲ್ಲಿ ಒರಿಸ್ಸಾದಲ್ಲಿ (21 ರಲ್ಲಿ 19), ಬಿಹಾರದಲ್ಲಿ (40 ರಲ್ಲಿ 30), ಆಂಧ್ರಪ್ರದೇಶದಲ್ಲಿ (42 ರಲ್ಲಿ 36) ಹಾಗೂ ಮಹಾರಾಷ್ಟ್ರದಲ್ಲಿ (48 ರಲ್ಲಿ 38) ಬಿಜೆಪಿ ಮತ್ತು ಮಿತ್ರರು ಗರಿಷ್ಟ ಸ್ಥಾನಗಳನ್ನು ಪಡೆದಾಗಿದೆ. ಆದರೆ ಈಗ ಈ ಎಲ್ಲಾ ರಾಜ್ಯಗಳಲ್ಲಿ ಬಿಜೆಪಿಯ ಮಿತ್ರರು ಹೀನ ಸ್ಥಿತಿಯಲ್ಲಿದ್ದಾರೆ. ಒರಿಸ್ಸಾದಲ್ಲಿ ಬಿಜೆಡಿಯಲ್ಲಿ ಗಂಭೀರ ಒಡಕಾಗಿದೆ. ಬಿಹಾರದಲ್ಲಿ ಜೆಡಿ(ಯು) ಇತ್ತೀಚೆಗೆ ಕಲಸುಮೇಲೋಗರದಂತಹ ಪ್ಲಾಸ್ಟಿಕ್ ಸರ್ಜರಿ ನಡೆಸಿಕೊಂಡರೂ ಆಂತರಿಕ ಒಡಕುಗಳನ್ನೂ ಎದುರಿಸುತ್ತಿದೆ. ಅದರ ಬೆಂಬಲಿಗರ ನಿರೀಕ್ಷೆ ಈಡೇರದೆ ಅವರ ಕೋಪವನ್ನು ಎದುರಿಸಬೇಕಾಗಿದೆ. (ಕರ್ನಾಟಕದಲ್ಲೂ ಈ ಪಕ್ಷದ್ದು ಇಂತಹುದೇ ಸ್ಥಿತಿ). ಆಂಧ್ರದಲ್ಲಿ ಟಿಡಿಪಿ-ಬಿಜೆಪಿಯ ವಿರುದ್ಧ ಒಂದು ಬಲಿಷ್ಟ ಮೈತ್ರಿಕೂಟ ರೂಪುಗೊಳ್ಳುತ್ತಿದೆ. ಅದೇ ರೀತಿ-ಮಹಾರಾಷ್ಟ್ರದಲ್ಲಿ ಯಾದವ್‌ರ ಪ್ರಕಾರ ಕಾಂಗ್ರೆಸ್-ಎನ್‌ಸಿಪಿ ಮೈತ್ರಿಯು ಎನ್‌ಡಿಎಯ ಸ್ಥಾನಗಳ ಸಂಖ್ಯೆಯನ್ನು ಇಳಿಸಬಹುದು.

ಎಡಪಕ್ಷಗಳು ಬಲಿಷ್ಟವಾಗಿರುವಲ್ಲಿ, ಕೇರಳ, ತ್ರಿಪುರಾಗಳಲ್ಲಿ ಬಿಜೆಪಿಗೆ ಅವಕಾಶವೇ ಇಲ್ಲ. ಪಶ್ಚಿಮ ಬಂಗಾಳದಲ್ಲಿ ತೃಣಮೂಲ-ಬಿಜೆಪಿ ಲೆಕ್ಕಾಚಾರಗಳನ್ನು ತಲೆಕೆಳಗೆ ಮಾಡಲು ಎಡರಂಗ ಸನ್ನದ್ಧಗೊಂಡಿದೆ. ಕಳೆದ ಬಾರಿ ತೃಣಮೂಲ-ಬಿಜೆಪಿ ಕೂಟಕ್ಕೆ 42 ರಲ್ಲಿ 10 ಸ್ಥಾನ ಸಿಕ್ಕಿತ್ತು. ಈ ಬಾರಿ ಅದು ಇಳಿಯುವುದು ಖಂಡಿತ. ತೃಣಮೂಲ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಕಾಂಗ್ರೆಸ್‌ನೊಂದಿಗೆ ಪರೋಕ್ಷ ಮೈತ್ರಿ ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ಕಾಂಗ್ರೆಸ್ ಇದಕ್ಕೆ ಬಲಿಬಿದ್ದರೆ, ಅದರ ಫಲವನ್ನು ಅದು ಉಣ್ಣಬೇಕಾಗುತ್ತದೆ.

ಪಂಜಾಬಿನಲ್ಲಿ ಕಳೆದ ಬಾರಿಯಾಗಲೇ ಅಕಾಲಿ-ಬಿಜೆಪಿ ಕೂಟ ಕೆಳಮಟ್ಟ ತಲುಪಿತ್ತು. ಈಗ ತಮ್ಮ ಸಂಖ್ಯೆಯನ್ನು ಸುಧಾರಿಸಿಕೊಳ್ಳುವ ನಿರೀಕ್ಷೆ ಅವರಿಗಿದೆ. ಆದರೆ ಜನಗಳಲ್ಲಿನ ಭಾವನೆಯನ್ನು ಕಂಡರೆ ಅದು ಈಡೇರುವಂತೆ ಕಾಣುವುದಿಲ್ಲ.

ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಛತ್ತೀಸ್ ಗಡ, ರಾಜಸ್ತಾನ, ಮಧ್ಯ ಪ್ರದೇಶಗಳನ್ನು ಕಾಂಗ್ರೆಸ್‌ನಿಂದ ಕಸಿದುಕೊಂಡಿದೆ. ಇದು ಬಿಜೆಪಿಯ ನಿರೀಕ್ಷೆಯನ್ನು ಹೆಚ್ಚಿಸಿ ಈ ಲೋಕಸಭಾ ಚುನಾವಣೆ ಅವಧಿಗೆ ಮೊದಲೇ ನಡೆಯುವಂತೆ ಮಾಡಿದೆ. ನವೆಂಬರ್‌ನಲ್ಲಿ ಪಡೆದ ಬೆಂಬಲವನ್ನು ಉಳಿಸಿಕೊಳ್ಳುವ ನಿರೀಕ್ಷೆ ಅವರದು. ಆದರೆ 1999 ರಲ್ಲಿ ಬಿಜೆಪಿಗೆ ಆಗಲೇ ಛತ್ತೀಸ್‌ಗಡದಲ್ಲಿ 11 ರಲ್ಲಿ 8, ರಾಜಸ್ತಾನದಲ್ಲಿ 26 ರಲ್ಲಿ16 ಸ್ಥಾನಗಳು ದೊರೆತಿದ್ದವು. ಅದನ್ನು ಹೆಚ್ಚಿಸಲು ಆ ಪಕ್ಷಕ್ಕೆ ಸಾಧ್ಯವಾಗುತ್ತದೆಯೇ? ಇದು ಸಂಶಯಾಸ್ಪದ. ಮಧ್ಯಪ್ರದೇಶದಲ್ಲಿ ನವೆಂಬರ್ ಚುನಾವಣೆಗಳಲ್ಲಿ ಅದು ನೀಡಿದ ಭರವಸೆಗಳೇ ಅದಕ್ಕೀಗ ತಿರುಗುಮುರುಗಾಗಬಹುದು ಎಂದು ಇಂಡಿಯನ್ ಎಕ್ಸ್‌ಪ್ರೆಸ್ (ಮಾರ್ಚ್ 15) ವರದಿ ಮಾಡಿದೆ.

ಗುಜರಾತ್ ಬಿಜೆಪಿಯ ಕೋಟೆಯಾಗಿತ್ತು.



1999 ರಲ್ಲಿ 26 ರ್ಲಲಿ 20 ಸ್ಥಾನಗಳನ್ನು ಗೆದ್ದಿತ್ತು. ಆದರೆ ಈಗಲೂ ಹಾಗೆಯೇ ಇದೆ ಎಂದು ಹೇಳಲು ಸಾಧ್ಯವಿಲ್ಲ.

ಝಾರ್ಖಂಡ್‌ನಲ್ಲಿ 14 ರಲ್ಲಿ 11 ಸ್ಥಾನಗಳನ್ನು ಬಿಜೆಪಿ ಗೆದ್ದಿದ್ದು ಈಗ ಆಂತರಿಕ ಭಿನ್ನಾಭಿಪ್ರಾಯಗಳಿಗೆ ಸಿಲುಕಿದೆ. ಇಲ್ಲಿ ಒಂದು ಬಲವಾದ ಅಧಿಕಾರಸ್ಥ - ವಿರೋಧಿ ಭಾವನೆಯೂ ಕಾಣುತ್ತಿದೆ.

ಕರ್ನಾಟಕದಲ್ಲಿ ಅದು ಅಲ್ಪ ಹೆಚ್ಚಳ ಸಾಧಿಸಿದರೂ, ಬೇರೆಡೆ ಆಗುವ ನಷ್ಟಗಳನ್ನು ಎಷ್ಟರಮಟ್ಟಿಗೆ ಅದು ಸರಿದೂಗಿಸಬಲ್ಲದು?

ತಮಿಳುನಾಡಿನಲ್ಲಿ 1999 ರಲ್ಲಿ ಡಿಎಂಕೆ ನೇತೃತ್ವದ ಮೈತ್ರಿಕೂಟ 39 ರಲ್ಲಿ 22 ಸ್ಥಾನ ಗಳಿಸಿತ್ತು. ಬಿಜೆಪಿ 4 ಸ್ಥಾನ ದೊರೆತಿತ್ತು. ಈಗ ಡಿಎಂಕೆ ಮತ್ತು ಮಿತ್ರ ಪಕ್ಷಗಳು ಕಾಂಗ್ರೆಸ್ ಮತ್ತಿತರರೊಂದಿಗೆ ಮಿತ್ರತ್ವ ರೂಪಿಸಿವೆ. ಈ ಮೈತ್ರಿಕೂಟ ಬಲಿಷ್ಟವಾಗಿರುವಂತಿದೆ. 1999 ರಲ್ಲಿ ವಾಜಪೇಯಿ ಸರ್ಕಾರವನ್ನು ಬೀಳಿಸಿದ ಎಐಎಡಿಎಂಕೆ ಈಗ ಬಿಜೆಪಿಯೊಂದಿಗಿದೆ. ಆದರೆ ಬಿಜೆಪಿಗೆ ಬಿಟ್ಟುಕೊಟ್ಟ ಸ್ಥಾನಗಳಿಂದ ಅದು ಈಗಾಗಲೇ ಬಿಜೆಪಿಗೆ ಅದರ ನಿಜ ಶಕ್ತಿ ಏನು ಎಂದು ತೋರಿಸಿಕೊಟ್ಟಿದೆ.

ಈಶಾನ್ಯ ಭಾಗದಲ್ಲಿ ಇರುವುದು ಒಟ್ಟು 25 ಸ್ಥಾನಗಳಷ್ಟೇ. ಬಿಜೆಪಿಗೆ ಇದರಲ್ಲಿ 4 ಅಥವಾ 5 ಕ್ಕಿಂತ ಹೆಚ್ಚು ಸ್ಥಾನ ದೊರೆಯಬಹುದೆಂದರೆ ಯಾರೂ ನಂಬರು. ಅಸ್ಸಾಂ ಈ ಪ್ರದೇಶದ ದೊಡ್ಡ ರಾಜ್ಯ. ಇಲ್ಲಿ ಎಜಿಪಿ ಕಳೆದ ಬಾರಿ ಬಿಜೆಪಿಯೊಂದಿಗಿತ್ತು. ಆದರೆ ಒಂದೂ ಸ್ಥಾನವನ್ನು ಪಡೆಯಲಿಲ್ಲ. ಈ ಬಾರಿ ಎಜಿಪಿ ಏಕಾಂಗಿಯಾಗಿ ಸ್ಪರ್ಧಿಸುತ್ತಿದೆ. ಮೇಘಾಲಯದಲ್ಲಿ ಸಂಗ್ಮಾರ ಪಕ್ಷ ಇತ್ತೀಚಿನ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಪರಾಭವ ಕಂಡಿದ್ದು, ಅದು ಬಿಜೆಪಿಗೆ ಒಂದು ಕುಂಟುವ ಕುದುರೆಯಾಗಬಹುದಷ್ಟೇ ಎಂಬುದನ್ನು ತೋರಿಸಿಕೊಟ್ಟಿದೆ. ಈಗಂತೂ ಅವರ ಪಕ್ಷ ತೃಣಮೂಲ ಕಾಂಗ್ರೆಸ್‌ನ ಭಾಗವಾಗಿಬಿಟ್ಟಿದೆ.

ಘೋರ ಹತಾಶೆ

ಇನ್ನು ಉಳಿಯುವುದು ಉತ್ತರ ಪ್ರದೇಶ. ಇದು 80 ಸ್ಥಾನಗಳನ್ನು ಹೊಂದಿರುವ ಅತಿದೊಡ್ಡ ರಾಜ್ಯ. ಇಲ್ಲಿ ಬಿಜೆಪಿ 'ಈಗಿರುವ ತನ್ನ 25 ಸ್ಥಾನಗಳನ್ನು ಉಳಿಸಿಕೊಂಡರೆ ಅದರಿಂದಲೇ ತೃಪ್ತಿ ಪಡಬೇಕು" ಎನ್ನಲಾಗಿದೆ. "ಎನ್‌ಡಿಎ ಉತ್ತರ ವಲಯದಲ್ಲಿ ತನ್ನ ಒಟ್ಟು ಸ್ಥಾನಗಳನ್ನು ಹೆಚ್ಚಿಸಿಕೊಳ್ಳಲು ಆಗಲಿಕ್ಕಿಲ್ಲ; ಅದರ ನಷ್ಟ ಸೊನ್ನೆಯಿಂದ 20ರ ವರಗೆ ಇರುವ ಸಾಧ್ಯತೆಯಿದೆ" ಎನ್ನುತ್ತಾರೆ ಯೋಗೇಂದ್ರ ಯಾದವ್.

ಆದ್ದರಿಂದಲೇ ಎಸ್‌ಪಿ, ಬಿಎಸ್‌ಪಿ, ಕಾಂಗ್ರೆಸ್ ಮತ್ತು ಆರ್‌ಎಲ್‌ಡಿಗಳನ್ನು ಪರಸ್ಪರ ದೂರವಿಡುವಂತೆ ಬಿಜೆಪಿ ಶತಪ್ರಯತ್ನ ನಡೆಸಿರುವುದರಲ್ಲಿ ಆಶ್ಚರ್ಯವಿಲ್ಲ. ವಾಜಪೇಯಿಯ ಆದೇಶದಂತೆ ಹೊರಗಟ್ಟಿದ ಕಲ್ಯಾಣಸಿಂಗ್‌ಗೆ ಮತ್ತೆ ಅದು ಬಾಗಿಲು ತೆರೆಯಬೇಕಾದ ಸ್ಥಿತಿ ಬಂತು. ಕಲ್ಯಾಣಸಿಂಗರ ಪುನರಾಗಮನ ವಿಶೇಷವಾಗಿ ರಾಜ್ಯದ ಪಶ್ಚಿಮ ಭಾಗದಲ್ಲಿ ಬಿಜೆಪಿಯ ಅವಕಾಶಗಳನ್ನು ಹೆಚ್ಚಿಸಬಹುದೆಂದು ಹೇಳಲಾಗಿದೆ. ಇಲ್ಲಿ ಅಜಿತಸಿಂಗ್ ರ ಆರ್‌ಎಲ್‌ಡಿಯು ಎನ್‌ಡಿಎಯನ್ನು ತ್ಯಜಿಸಿದೆ. ಆದರೂ ಇಂದು ಬಿಜೆಪಿ ಅತ್ಯಂತ ಹತಾಶ ಸ್ಥಿತಿಯಲ್ಲಿರುವಂತಿದೆ ಕಲ್ಯಾಣಸಿಂಗ್ ತನ್ನ ಸ್ವಂತ ಜಿಲ್ಲೆ ಅಲೀಗಢದಿಂದ ಬುಲಂದ್‌ಶಹರ್‌ಗೆ ಓಡಿಹೋಗಿದ್ದಾರೆ. ವಿನಯ್ ಕಟಿಯಾರ್ ಫೈಜಾಬಾದ್‌ಗೆ ವಿದಾಯ ಹೇಳಿ, ಲಖನ್‌ಪುರ್ ಭೇಟಿ ಹೆಚ್ಚು ಹಸಿರಾಗಿರಬಹುದು ಎಂದು ನಿರೀಕ್ಷಿಸುತ್ತಿದ್ದಾರೆ.

ಈ ಹತಾಶೆಯನ್ನು ಅರ್ಥಮಾಡಿಕೊಳ್ಳಬಹುದು. ಈಗಾಗಲೇ ಹೇಳಿದಂತೆ ಉತ್ತರದಲ್ಲಿ ಜಮ್ಮು-ಕಾಶ್ಮೀರದಿಂದ ಹಿಡಿದು ದಕ್ಷಿಣದಲ್ಲಿ ತಮಿಳುನಾಡಿನವರೆಗೆ ಸುಮಾರು 10 ಪಕ್ಷಗಳು ಎನ್‌ಡಿಎ ತ್ಯಜಿಸಿವೆ. ಬಿಜೆಪಿಯ ತಲೆನೋವಿಗೆ ಇಷ್ಟೇ ಸಾಕು. ಏಕೆಂದರೆ ತನ್ನ ಸಾಧನೆಗಳೆಂದು ನಿರ್ದಿಷ್ಟವಾಗಿ ತೋರಿಸಲು ಅದರ ಬಳಿ ಏನೂ ಇಲ್ಲ. ಇನ್ನು ಎನ್‌ಡಿಎ ಯಲ್ಲಿ ಉಳಿದಿರುವ ಪಕ್ಷಗಳೂ ಹಲವು ಹೀನ ಸ್ಥಿತಿಯಲ್ಲಿವೆ. ಅವು ಆಂತರಿಕ ಭಿನ್ನಾಭಿಪ್ರಾಯ ಅಥವಾ ಜನಗಳ ಆಕ್ರೋಶವನ್ನು, ಅಥವಾ ಇವೆರೆಡನ್ನೂ ಎದುರಿಸಬೇಕಾಗಿ ಬಂದಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ 'ಭಾರತ ಉದಯ' ಪ್ರಚಾರದ ಹೊರತಾಗಿಯೂ ಬಿಜೆಪಿ ಮತ್ತು ಎನ್‌ಡಿಎಗೆ ಚುನಾವಣಾ ಫಲಿತಾಂಶಗಳು ಆಘಾತ ನೀಡಿದರೆ ಅವರಿಂದ ಯಾರಿಗೂ ಆಶ್ಚರ್ಯವಾಗಲಿಕ್ಕಿಲ್ಲ, ಬಹುಶಃ ಮಾಧ್ಯಮ ಪಂಡಿತರನ್ನು ಬಿಟ್ಟು.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಉಪಯೋಗಿಸಲು ಯೋಗ್ಯವಲ್ಲದ ಔಷಧಿಗಳು

ಅಸಮಂಜಸ ಔಷಧಿಗಳು

ಫೀನೈಲ್ ಪ್ರೊಪಿಲಮಿನ್

ಇದು ವೈಜ್ಞಾನಿಕ ಯುಗ. ಆವಿಷ್ಕಾರಗಳು ಹಲವಾರು. ದಿನೇ ದಿನೇ ಹೊಸ ಹೊಸ ಔಷಧಿಗಳನ್ನು ಕಂಡುಹಿಡಿಯಲಾಗುತ್ತಿದೆ. ಹೊಸ ಪರಿಣಾಮಕಾರಿ ಔಷಧಿ ದೊರಕುತ್ತಿರುವಾಗ ಹಳೇ ಔಷಧಿ ಉಪಯೋಗವನ್ನು ನಿಲ್ಲಿಸಬಹುದಾಗಿದೆ. ಆದರೆ ಹಳೆಯ ಔಷಧಿ ಹೊಸ ಔಷಧಿಗೆ ಹೋಲಿಸಿದಲ್ಲಿ ಅಷ್ಟೇನೂ ಉಪಯುಕ್ತವಲ್ಲ, ಅಪಾಯಕಾರಿ ಎಂದು ಅನಿಸಿದಲ್ಲಿ ಅದನ್ನು ಉಪಯೋಗಿಸುವುದನ್ನೂ ನಿಲ್ಲಿಸಬೇಕಾಗುತ್ತದೆ ಹಾಗೂ ನಿಷೇಧಿಸಲೂಬೇಕಾಗುತ್ತದೆ. ಅನಕ್ಷರತೆ ಹಾಗೂ ಔಷಧಿ ಅಂಗಡಿಗಳಲ್ಲಿ ಔಷಧಿ ಚೀಟಿಗಳಿಲ್ಲದೆ ಔಷಧಿಗಳು ಮಾರಾಟವಾಗುವಂತಹ ಪರಿಸ್ಥಿತಿಯಲ್ಲಿ ಅನಗತ್ಯ ಅಪಾಯಕಾರಿ ಔಷಧಿ ಉಪಯೋಗ ತಡೆಗಟ್ಟಲು ಔಷಧಿ ನಿಷೇಧ ಒಂದೇ ಪರಿಹಾರವೆಂದು ಹೇಳಬಹುದಾಗಿದೆ. ಔಷಧಿ ನಿಯಂತ್ರಣವೇ ನಿಷೇಧ ಆಜ್ಞೆ ತರಬೇಕಾಗುತ್ತದೆ.

ಭಾರತದಲ್ಲಿ ಈಗಾಗಲೇ ಔಷಧಿ ನಿಯಂತ್ರಣ ಹಲವಾರು ಔಷಧಿಗಳನ್ನು ನಿಷೇಧಿಸಿದೆ. ಅದರೆ ಇನ್ನೂ ಅನೇಕ ಔಷಧಿಗಳು ನಿಷೇಧಿಸಲು ಯೋಗ್ಯವಾಗಿದ್ದು ಮಾರುಕಟ್ಟೆಯಲ್ಲಿ ದೊರಕುತ್ತಿವೆ. ಅಷ್ಟೇಕೆ ಭಾರತದ ಔಷಧಿ ನಿಯಂತ್ರಣವೇ ನಿಷೇಧಿಸಿದ ಕೆಲವು ಔಷಧಿಗಳೂ ಮಾರುಕಟ್ಟೆಯಲ್ಲಿ ದೊರಕುತ್ತಿವೆ! ಔಷಧಿ ನಿಯಂತ್ರಣ ಪ್ರಕ್ರಿಯೆಯೂ ಸರಿಯಾಗಿಲ್ಲ.

ಫೀನೈಲ್ ಪ್ರೊಪಿಲಮಿನ್ ಎಂಬ ಔಷಧಿಯನ್ನು ನೆಗಡಿ ಚಿಕಿತ್ಸೆಯಲ್ಲಿ ಉಪಯೋಗಿಸಲಾಗುತ್ತಿದೆ. ಈ ಔಷಧಿ ನೆಗಡಿ ಚಿಕಿತ್ಸೆಯಲ್ಲಿ ಅಷ್ಟೇನು ಉಪಯುಕ್ತವಲ್ಲ. ಈ ಔಷಧಿ ಉಪಯೋಗಿಸದೇ ನೆಗಡಿ ತೊಂದರೆಯನ್ನು ಸರಿಪಡಿಸಬಹುದಾಗಿದೆ. ಅಮೇರಿಕಾದ ಆಹಾರ ಹಾಗೂ ಔಷಧಿ ಅಧಿಕಾರ ನಿರ್ವಹಣೆಯ ಸಂಸ್ಥೆ ಇತ್ತೀಚೆಗೆ ಒಂದು ಅಧ್ಯಯನವನ್ನು ರೂಪಿಸಿತು. ಅದರ ಉದ್ದೇಶ ಫೀನೈಲ್ ಪ್ರೊಪಿಲಮಿನ್ ಉಪಯೋಗದಿಂದ ರಕ್ತಸ್ರಾವವಾಗಿ, ಎಷ್ಟು ಜನರಲ್ಲಿ ಲಕ್ವಾ ಉಂಟಾಗುತ್ತದೆ ಹಾಗೂ ಯಾರು ಯ'ುಾರ' ಲ್ಲಿ ಉಂಟಾಬಹುದು ಎಂದ',) ಕಂಡುಹಿಡಿಯುವುದಾಗಿತ್ತು. ಈ ಅಧ್ಯಯನವನ್ನು ಅಮೇರಿಕಾದ ಯೇಲ್ ವಿಶ್ವವಿದ್ಯಾನಿಲಯ ಕೈಗೊಂಡು ತನ್ನ ವರದಿಯನ್ನು ಮಂಡಿಸಿತು. ಆ ವರದಿಯ ಮುಖ್ಯಾಂಶಗಳು ಈ ಕೆಳಗಿನಂತಿವೆ :

1. ರಕ್ತಸ್ರಾವದಿಂದ ಉಂಟಾದ ಲಕ್ವಾ ಹಲವರಲ್ಲಿ ಕಂಡುಬರುತ್ತದೆ. ಆದರೆ ಫೀನೈಲ್ ಪ್ರೋಪಲಮಿನ್ ಉಪಯೋಗಿಸಿದವರಲ್ಲಿ ಇದು ಹೆಚ್ಚಾಗುತ್ತದೆ.

2. ಫೀನೈಲ್ ಪ್ರೊಪಿಲಮಿನ್ ಔಷಧಿ, ಮಾನಸಿಕ ಕಾಯಿಲೆಗಳನ್ನು ಹೆಚ್ಚಿಸುತ್ತದೆ. ಉದಾ: ಮೇನಿಯಾ, ಸೈಕೋಸಿಸ್, ಕೋಪಗೊಳ್ಳುವಿಕೆ, ಗೊಂದಲ, ಆತಂಕ, ಖಿನ್ನತೆ ಇತ್ಯಾದಿ.

...ಬುಶ್-ಬ್ಲೇರ್‌ಗೆ ನಡುಕ ತಂದ ಸ್ಪೈನ್‌ನ ಜನ ಯುದ್ಧಕೋರರಿಗೆ ಕೊಟ್ಟ ಶಾಕ್

...ಸ್ಪೈನ್‌ನಲ್ಲಿ ಆಳುವ 'ಪಾಪ್ಯುಲರ್ ಪಾರ್ಟಿ'ಗೆ ...ಶಾಕ್ ಕೊಟ್ಟಿದ್ದಾರೆ. ವಾರಗಳ ಕಾಲ ಖಂಡಿತ ...ತ್ತಾರೆ ಎಂಬ ಟಿವಿ ಪತ್ರಿಕೆಗಳ ಪಂಡಿತರ ...ಷ್ಯವಾಣಿಯನ್ನು ಸುಳ್ಳು ಮಾಡಿದ್ದಾರೆ. ಸ್ಪೈನ್‌ನ ...ಪಂಥೀಯ ಆಳುವ ಪಕ್ಷ ಮಾತ್ರವಲ್ಲ, ಇಡೀ ...ರೋಪು, ಅಮೇರಿಕಾದ ಆಳುವವರು ...ಗಾಗಿದ್ದಾರೆ. ಸ್ಪೇನ್‌ನ ಜನ ಇನ್ನೊಮ್ಮೆ ...ೀರಿಸಿದ್ದಾರೆ. ಜನತೆ ಜಗತ್ತಿನಲ್ಲಿ ಇಂದಿನ ...ಪರ್‌ಪವರ್ ಅಂತ.

ಸ್ಪೈನ್‌ನಲ್ಲಿ ಆಳುವ 'ಪೊಪ್ಯುಲರ್ ಪಾರ್ಟಿ'ಯ ...ಯಕ ಪ್ರಧಾನಿ ಅಝ್ನಾರ್ ಶೇಕಡಾ 90 ...ನತೆಯ ವಿರೋಧ ಲೆಕ್ಕಿಸದೆ ಸ್ಪೇನ್ ಸೈನ್ಯ ಇರಾಕ್ ...ಯುದ್ಧದಲ್ಲಿ ಭಾಗವಹಿಸಲು ಕಳಿಸಿದ್ದ. ಆತನ ...ರ್ಕಾರದ ವಿರುದ್ಧ ಜನ ಕೋಪಗೊಂಡಿದ್ದರು. ...ನಾವಣೆ ಮೂರು ದಿನಗಳ ಮೊದಲು ...ಜಧಾನಿ ಮಾಂಡ್ರಿಡ್ ಬಳಿ ನಡೆದ ರೈಲಿನಲ್ಲಿ ...ಂಬ್‌ಸ್ಫೋಟ, ಮತ್ತು ಅದರ ಬಗ್ಗೆ ಸರ್ಕಾರ ...ಳಲಾರಂಭಿಸಿದ ಸುಳ್ಳುಗಳು ಈ ಕೋಪ ...ಗಿಲೇಳಲು ಕಾರಣವಾಗಿದೆ. ಮಾತ್ರವಲ್ಲ ...ೀಷಲಿಸ್ಟ್ ಪ್ರಧಾನಿ - ಅಭ್ಯರ್ಥಿ ಚುನಾವಣಾ ...ಚಾರದಲ್ಲಿ, ತಮ್ಮ ಪಕ್ಷ ಗೆದ್ದರೆ ಸೈನ್ಯವನ್ನು ...ರಾಕ್‌ನಿಂದ ವಾಪಸು ಕರೆಸುವುದಾಗಿ ಸ್ಪಷ್ಟ ...ಶ್ವಾಸನೆ ನೀಡಿದ್ದೂ ಈ 'ಶಾಕ್'ಗೆ ಕಾರಣವಾಗಿದೆ. ...ದು ಸ್ವತಂತ್ರ ರಾಜಕೀಯ ವೀಕ್ಷಕರ ಅಭಿಪ್ರಾಯ.

ಮಾಡ್ರಿಡ್ ರೈಲು ಬಾಂಬ್‌ಸ್ಫೋಟಕ್ಕೆ ಸ್ಪೈನ್‌ನ ...ಪ್ರತ್ಯೇಕತಾವಾದಿ 'ಬಾಸ್ಕ್' ಭಯೋತ್ಪಾದಕರು ...ರಣ ಎಂದು ಸರ್ಕಾರ ಸುಳ್ಳು ಹೇಳಿತು. ಆ ...ಗ್ಗೆ ಯಾವುದೇ ಪುರಾವೆ ಇರಲಿಲ್ಲ. ಬಾಂಬ್ ...ಸ್ಫೋಟದ ತನಿಖೆಯಿಂದ ಇಸ್ಲಾಮಿಕ್ ...ಮೂಲಭೂತವಾದಿ ಭಯೋತ್ಪಾದಕರ ಕೃತ್ಯ ...ಇರಬಹುದು ಎಂಬ ಗುಮಾನಿಯನ್ನು ಸರ್ಕಾರ ...ಮುಚ್ಚಿಟ್ಟಿತ್ತು ಯಾಕೆ? ಅದು ನಿಜವಾದರೆ, ಜನ ...ಸರ್ಕಾರವನ್ನು ನೇರವಾಗಿ ಅದಕ್ಕೆ ಕಾರಣ ಎಂದು ದೂಷಿಸುತ್ತಾರೆ ಎಂಬ ಭಯ. ಇರಾಕ್ ಮತ್ತು ಅರಬ್ ಪ್ರದೇಶಗಳಲ್ಲಿ ಅಮೇರಿಕನ್ ಸರ್ಕಾರಗಳು ಭಯೋತ್ಪಾದಕತೆಗೆ ಇನ್ನಷ್ಟು ಹೆಚ್ಚು ಇಸ್ಲಾಮಿಕ್ ಭಯೋತ್ಪಾದಕರನ್ನು ತಯಾರಿಸುತ್ತದೆ. ಸ್ಪೈನ್ ಮೇಲೆ ಇಸ್ಲಾಮಿಕ್ ಭಯೋತ್ಪಾದಕರ ಕೋಪ ತಿರುಗಬಹುದು. ಸ್ಪೈನ್ ಅವರಿಗೆ 'ಸುಲಭ ಗುರಿ'ಯಾಗಬಹುದು. ಇದು ಸ್ಪೈನ್ ಹಲವರ ಆತಂಕವಾಗಿತ್ತು. ಈಗ ನಿಜವಾಗಿದೆ.

ಟಿವಿ, ಪತ್ರಿಕೆಗಳು ಸರ್ಕಾರದ ಸುಳ್ಳುಗಳ ತುತ್ತೂರಿ ಊದುತ್ತಿದ್ದಂತೆ, ಜನರ ಕೋಪ



ಮುಗಿಲು ಮುಟ್ಟಿತು. ಮೊಬೈಲ್ ಫೋನ್, ಎಸ್.ಎಂ.ಎಸ್‌ಗಳ ಮೂಲಕ ಸುದ್ದಿ ಹರಡಿತು. ಇದು ಇಸ್ಲಾಮಿಕ್ ಭಯೋತ್ಪಾದಕರ ಕೃತ್ಯವಿರಬೇಕು. ಇದಕ್ಕೆ ಈ ಸರ್ಕಾರ ನೇರ ಕಾರಣ. ಅದನ್ನು ಕಿತ್ತು ಹಾಕಬೇಕು. ಭಾರಿ ಪ್ರದರ್ಶನ, ಪ್ರತಿಭಟನೆಗಳು ಸ್ವಯಂಸ್ಫೂರ್ತಿಯಾಗಿ ನಡೆದವು. ಮತದಾನದಲ್ಲಿ ಸಾಮಾನ್ಯವಾಗಿ ಭಾಗವಹಿಸದ, ಅನಿರ್ಧಾರಿತ ಮತದಾರರು ಈ ಸರ್ಕಾರವನ್ನು ಮತಕಟ್ಟೆಯಲ್ಲಿ ಉರುಳಿಸಬೇಕು ಎಂದು ದೃಢ ನಿರ್ಧಾರ ಮಾಡಿದರು. ಸ್ಪೈನ್‌ನಲ್ಲಿ ನಡೆದ ರೆಕಾರ್ಡ ಮತದಾನದಲ್ಲಿ; ಆಳುವ ಸರ್ಕಾರ ಬಿದ್ದು ಹೋಯಿತು. ವಿರೋಧಿ ಸೋಶಲಿಸ್ಟ್ ಪಕ್ಷಕ್ಕೆ ಸ್ಪಷ್ಟ ಜಯ ಸಿಕ್ಕಿದೆ. ಹೊಸ ಪ್ರಧಾನಿ ಸ್ಪೈನ್ ಸೈನಿಕರನ್ನು ಇರಾಕ್‌ನಿಂದ ವಾಪಸು ಕರೆಸುವುದಾಗಿ ಘೋಷಿಸಿದ್ದಾರೆ.

ಸ್ಪೈನ್‌ನ 'ಶಾಕ್' ಹಲವು ದೇಶಗಳ ಯುದ್ಧಕೋರ ನಾಯಕರಿಗೆ ನಡುಕ ತಂದಿದೆ. ಮೊದಲನೆಯದಾಗಿ ಈ ವರ್ಷ ಸ್ವತಃ ಚುನಾವಣೆ ಎದುರಿಸುವ ಬುಶ್ ಬ್ಲೇರ್ ನಡುಗಹತ್ತಿದ್ದಾರೆ. ಪತ್ರಿಕೆ - ಟಿವಿಗಳು ಸರ್ಕಾರದ ಸುಳ್ಳುಗಳ ತುತ್ತೂರಿ ಊದಿದರೂ, ಅದು ಬಹಳ ದಿನ ನಡೆಯುವುದಿಲ್ಲ, ಅಲ್ಲದೆ ಸ್ಪೈನ್ ಶಾಕ್, ಬುಶ್ ಗ್ಯಾಂಗ್ ಸೇರಿದ ಇತರ ಸಣ್ಣ ದೇಶಗಳ ಯುದ್ಧಕೋರ ನಾಯಕರಿಗೂ ನಡುಕ ತರುತ್ತಿದೆ. ಇಸ್ಲಾಮಿಕ್ ಮೂಲಭೂತವಾದಿಗಳು ಇತರ 'ಸುಲಭ ಗುರಿ'ಗಳನ್ನು ಆರಿಸಿಕೊಳ್ಳಬಹುದು. ಯುರೋಪ್ ಖಂಡದಲ್ಲೂ ಇಸ್ಲಾಮಿಕ್ ಭಯೋತ್ಪಾದಕರು ಬೇಕಾದಲ್ಲಿ ಧಾಳಿ ಮಾಡಬಹುದು ಎಂದೂ ಈ ಘಟನೆ ತೋರಿಸಿದೆ. ಅತ್ಯಂತ ಆಳವಾದ ರಾಜಕೀಯ ಪರಿಣಾಮ ಕೊಡುವ ರೀತಿಯಲ್ಲಿ ತಮ್ಮ ಅಸ್ತ್ರ ಬಳಸುತ್ತಾರೆ ಎಂಬುದು ಈಗ ಸಾಬೀತಾಗಿದೆ. ಇದು ಬುಶ್ ಗ್ಯಾಂಗ್‌ಗೆ ಸೇರಿದ ಪೋಲೆಂಡ್, ಚೆಕ್, ಉಕ್ರೇನ್, ಕಝಾಕಿಸ್ತಾನ ಮುಂತಾದ ದೇಶಗಳ ನಾಯಕರು ಭಯಭೀತರಾಗಿದ್ದಾರೆ. ಯುರೋಪಿಯನ್ ಒಕ್ಕೂಟದ ನಾಯಕರು ಭದ್ರತಾ ಕ್ರಮಗಳ ಬಗ್ಗೆ ಚಿಂತಿತರಾಗಿದ್ದಾರೆ.

ಇರಾಕ್ ಯುದ್ಧದ ವಾರ್ಷಿಕದ ಕೆಲವು ದಿನಗಳ ಮೊದಲು ಈ 'ಶಾಕ್' ಮುಂಬರುವ ಘಟನೆಗಳ ಸೂಚನೆ ಇರಬಹುದು. ಮಾರ್ಚ್ 20 (ಇರಾಕ್ ಯುದ್ಧದ ವಾರ್ಷಿಕ)ದ ದಿನವನ್ನು ಕಳೆದ ವರ್ಷದಂತೆ ಈ ಬಾರಿಯೂ ಜಗತ್ತಿನಾದ್ಯಂತ ಯುದ್ಧ-ವಿರೋಧಿ ಪ್ರದರ್ಶನಗಳ ಮೂಲಕ ಆಚರಿಸಬೇಕು. ಬುಶ್‌ನ ಸಾಮ್ರಾಜ್ಯಶಾಹಿ ಆಟ ನಡೆಯುವುದಿಲ್ಲ. ಇವೆಲ್ಲಾ ಆತ ತನ್ನ ದೇಶದಲ್ಲೇ ಪದಚ್ಯುತಗೊಳ್ಳುವತ್ತ ನಡೆಯುತ್ತಿದೆ. ಇವೆಲ್ಲಾ ಶುಭಸೂಚನೆ. ಇದಕ್ಕೆ ನಾಂದಿ ಹಾಡಿದ ಸ್ಪೈನ್ ಜನತೆಗೆ ಅಭಿನಂದನೆ ಹೇಳಬೇಕು.

ಅಮೇರಿಕದಲ್ಲೂ ಚುನಾವಣೆ, 'ಫೀಲ್ ಗುಡ್', 'ಪ್ರಕಾಶಿಸುತ್ತಿದೆ', ಇತ್ಯಾದಿ....

"ರಾಜಕಾರಣಿಗಳು ಆರ್ಥಿಕ ಸುದ್ದಿಗಳನ್ನು ಆದಷ್ಟು ತಮ್ಮ ಸಾಧನೆಗಳು ಎಂದು ಬಡಾಯಿ ಕೊಚ್ಚಲು ಬಳಸುತ್ತಾರೆ ಎಂಬುದು ಆಶ್ಚರ್ಯವಲ್ಲ. ಆದರೆ ಬಹು ಸಂಖ್ಯಾತ ಜನರಿಗೆ ಆರ್ಥಿಕ ಪರಿಸ್ಥಿತಿಯ ವೈಯಕ್ತಿಕ ಅನುಭವ ಇರುವಾಗ ಎಲ್ಲವೂ ಬೊಂಬಾಟಾಗಿದೆ ಎಂದು ಹೇಳುತ್ತಾ ತಿರುಗುವುದು ಹುಚ್ಚುತನ. ಯಾವ ಆರ್ಥಿಕ ನೀತಿಗಳನ್ನು ಬಹು ಸಂಖ್ಯಾತ ಜನ ಬೇಜವಾಬ್ದಾರಿಯುತ ಎನ್ನುತ್ತಾರೋ, ಅವು ಒಳ್ಳೆಯ ಪರಿಣಾಮಗಳನ್ನು ಬೀರುತ್ತಿವೆ ಎನ್ನುವುದು ಅಷ್ಟೇ ಹುಚ್ಚುತನ....

ಸ್ವಲ್ಪ ಸಮಯ ಶೇಕಡಾ 8 ಬೆಳವಣಿಗೆ ದರ ಆತನಿಗೆ ಬೇಕಾದ್ದೆಲ್ಲ ಸಿಕ್ಕಿತು ಎನ್ನಿಸುತ್ತಿತ್ತು. ಆದರೆ ನಾಲ್ಕನೇ ತ್ರೈಮಾಸಿಕ ಅವಧಿಯಲ್ಲಿ ಬೆಳವಣಿಗೆ ದರ ಶೇಕಡಾ 4ಕ್ಕೆ ಕುಸಿದಿದೆ. ಎಲ್ಲರಿಗೂ ಗೊತ್ತು ಉದದ್ಯೋಗಗಳು ಎಲ್ಲೂ ಕಾಣ ಬರುತ್ತಿಲ್ಲ..."

ನೀವು ಇಂದು ವಾಜಪೇಯಿ ಸರ್ಕಾರದ "ಭಾರತ ಪ್ರಕಾಶಿಸುತ್ತಿದೆ" ಪ್ರಚಾರದ ಬಗ್ಗೆ ಭಾರತದ ಪತ್ರಿಕೆಯೊಂದರ ಟೀಕೆ ಎಂದುಕೊಂಡಿರಬಹುದು. ಆದರೆ ತಮಾಷೆಯೆಂದರೆ ಈ ವಾಕ್ಯಗಳನ್ನು ನ್ಯೂಯಾರ್ಕ ಟೈಮ್ಸ್‌ನಲ್ಲಿ ಪ್ರಸಿದ್ಧ ಆರ್ಥಿಕ ತಜ್ಞ ಪಾಲ್ ಕ್ರುಗ್‌ಮನ್ ಬರೆದಿದ್ದು, ಅಧ್ಯಕ್ಷ ಬುಶ್ ಸರ್ಕಾರದ ಬಗ್ಗೆ! ಎಂತಹ ಸಾಮ್ಯತೆ ಎಂದಿರಾ? ಹೌದು ಜಗತ್ತಿನ ಎರಡು ದೊಡ್ಡ 'ಪ್ರಜಾಪ್ರಭುತ್ವ ದೇಶಗಳು' ಚುನಾವಣೆಗೆ ಹೊರಟಿವೆ.

ಅಂಕಿ-ಸಂಖ್ಯೆಗಳ ಚಮತ್ಕಾರ

ಎರಡು ದೇಶಗಳ ಆಳುವ ಪಕ್ಷಗಳ ಐದು ವರ್ಷಗಳ ದುರಾಡಳಿತಕ್ಕೆ ಕನ್ನಡಿ ಬೇಡ. ಆದರೂ ಈ ಸರ್ಕಾರಗಳು ತಾವು ಖಂಡಿತ ಚುನಾವಣೆಯಲ್ಲಿ ಗೆಲ್ಲುತ್ತೇವೆ. ದೇಶದ ಆರ್ಥಿಕ ಬೊಂಬಾಟಾಗಿದೆ ಎಂದು ಜನರನ್ನು ನಂಬಿಸಲು ಪ್ರಚಾರದ ಭರಾಟೆ ಆರಂಭಿಸಿವೆ. ಎರಡೂ ದೇಶಗಳಲ್ಲಿ ಆರ್ಥಿಕ ಬೆಳವಣಿಗೆ ಕೆಲವರ ಸ್ವತ್ತಾಗಿರುವುದು ಬಹುಸಂಖ್ಯಾತರಿಗೆ ಉದ್ಯೋಗ ಚುನಾವಣಾ ಮುಖ್ಯ ವಿಷಯವಾಗಿದೆ. 2001 ನವಂಬರ್ ನಿಂದ ಅಮೇರಿಕ 'ಅಧಿಕೃತವಾಗಿ' ಪುನಃ ಆರ್ಥಿಕ ಸ್ಥಗಿತತೆ ಅವಧಿ ಮುಗಿದು ಬೆಳವಣಿಗೆ ಆರಂಭವಾಗಿದೆ. ಆದರೆ ಉದ್ಯೋಗ ನಿರ್ಮಾಣ ಶೇಕಡಾ ಅರ್ಧದಷ್ಟು ಕಡಿಮೆಯಾಗಿದೆ. ಉದ್ಯೋಗ ಅರಸುವವರ ಸಂಖ್ಯೆ ಶೇಕಡ ಎರಡುವರೆಯಷ್ಟು ಜಾಸ್ತಿ ಆಗಿದೆ.

ಆದರೂ ಭಾರತದಂತೆ ಅಮೇರಿಕದಲ್ಲೂ 'ಅಧಿಕೃತ' ಅಂಕಿ ಅಂಶಗಳು ನಿರುದ್ಯೋಗ ಪ್ರಮಾಣ ಕಡಿಮೆಯಾಗಿ ಶೇಕಡ 5-6ರಲ್ಲಿದೆ ಎನ್ನುತ್ತದೆ. ಇದನ್ನು ಕ್ರುಗ್‌ಮನ್ ಪ್ರಶ್ನಿಸಿದ್ದಾರೆ. ಇದು ಅಂಕಿ-ಸಂಖ್ಯೆ ಕಲೆ ಹಾಕುವ, ತೋರಿಸುವ ರೀತಿಯ ಚಮತ್ಕಾರ ಎಂದು ಅವರು ಟೀಕಿಸಿದ್ದಾರೆ. ಉದ್ಯೋಗ ಹುಡುಕುತ್ತಿರುವವರನ್ನು ಮಾತ್ರ ನಿರುದ್ಯೋಗಿಗಳು ಎಂದು ಪರಿಗಣಿಸಲಾಗುತ್ತಿದೆ. ತಿಂಗಳುಗಟ್ಟಲೆ ಉದ್ಯೋಗ ಹುಡುಕಿ-ಹುಡುಕಿ ಸುಸ್ತಾಗಿ ಕೈಚೆಲ್ಲಿ ಕೂತವರನ್ನು ಈ ವಿಧಾನದಲ್ಲಿ ನಿರುದ್ಯೋಗಿಗಳು ಎಂದು ಪರಿಗಣಿಸುವುದಿಲ್ಲ.

ಯಾರು ಯಾರನ್ನು ಕಾಪಿ ಮಾಡುತ್ತಿದ್ದಾರೆ?

ಎರಡೂ ದೇಶಗಳಲ್ಲೂ ಆರ್ಥಿಕ 'ಬೆಳವಣಿಗೆ' ಆಗಿದೆ. ಆದರೆ ಈ ಬೆಳವಣಿಗೆ ಉದ್ಯೋಗ ರಹಿತವಾಗಿದೆ. ಉದ್ಯೋಗ ಇರುವ ಕಾರ್ಮಿಕರ ಆದಾಯ ಕಡಿಮೆ ಆಗುತ್ತಿದೆ. ಇದ್ದ ಬದ್ದ ಸವಲತ್ತುಗಳನ್ನು ಕಿತ್ತುಕೊಳ್ಳಲಾಗುತ್ತಿದೆ. ಅಭದ್ರತೆ ಜಾಸ್ತಿ ಆಗುತ್ತಿದೆ. ಆದರೂ ಅಂಕಿ-ಸಂಖ್ಯೆ ಚಮತ್ಕಾರದಿಂದ ಎಲ್ಲವೂ ಬೊಂಬಾಟಾಗಿದೆ ಎಂದು ಭಾರಿ ಪ್ರಚಾರ. ಉದ್ಯೋಗಗಳ ಅಭಾವ ಇರಡೂ ಕಡೆ ಚುನಾವಣೆ ವಿಷಯವಾಗಿದೆ. ಆದರೂ ಆಳುವ ಪಕ್ಷ ಬರಿಯ ಪ್ರಚಾರದಿಂದ, ಜನರ ಕಹಿ ಅನುಭವವನ್ನು ಮರೆಸಲು ಸಾಧ್ಯವಾಗುತ್ತದೆ ಎಂದು ನಂಬಿದೆ.

ಎರಡೂ ದೇಶಗಳ ಆಗು ಹೋಗುಗಳಲ್ಲಿ ಎಷ್ಟು ಸತ್ಯವಿದೆಯೆಂದರೆ, ಯಾರು ಯಾರನ್ನು ಈಗ ಕಾಪಿ ಹೊಡೆಯುತ್ತಿದ್ದಾರೆ ಎಂದು ಹೇಳುವುದು ಕಷ್ಟ. ಈ ಎರಡೂ ಸರ್ಕಾರಗಳು ಪರಸ್ಪರ 'ಭಯಂಕರ ಸಹಕಾರ' ಹೊಂದಿದ್ದು ಬೆನ್ನು ಚಪ್ಪರಿಸುತ್ತಾ ಬಂದಿದೆ. ಈ ಎರಡೂ ಸರ್ಕಾರಗಳೂ ಹೋಗುವುದು, ಈ ಎರಡೂ ದೇಶಗಳ ಬಹುಸಂಖ್ಯಾತ ಜನತೆಯ ಬಯಕೆ ಮಾತ್ರವಲ್ಲ. ಜಾಗತಿಕವಾಗಿಯೂ ಅತ್ಯಂತ ಜರೂರಿನ ಆಗಬೇಕಾದ ಬೆಳವಣಿಗೆ ಸಹ. ಡೆಮಾಕ್ರಟಿಕ್ ಪಕ್ಷ ಅಭ್ಯರ್ಥಿಯಾಗಲಿರುವ ಜಾನ್ ಕೆರ್ರಿ ಚುನಾವಣಾ ಸಮೀಕ್ಷೆಗಳಲ್ಲಿ ಈಗಾಗಲೇ ಜಾರ್ಜ್ ಬುಶ್‌ರನ್ನು ಹಿಂದೆ ಹಾಕಿದ್ದಾರೆ. ವಾಜಪೇಯಿ ಸರ್ಕಾರದಲ್ಲೂ ಭಯ ಆರಂಭವಾಗಿದೆ.


ಆರ್.ಎಸ್.ಎಸ್.ನವರು ಪ್ರಾಮಾಣಿಕರೆ?

ಪುಟ 2 ರಿಂದ

ತಪ್ಪಿಸಲು ಆರ್. ಎಸ್. ಎಸ್. ನ್ನು ರಾಜಕೀಯ ಸಂಸ್ಥೆಯೆಂದೂ ಹಾಗೂ ಇದೊಂದು ವಿದ್ಯಾ ಸಂಸ್ಥೆಯೆಂದೂ ಸಹ ಪರಸ್ಪರ ತದ್ವಿರುದ್ಧವಾದ ರೀತಿಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿರುವುದು ದಾಖಲೆಯಲ್ಲಿದೆ. ಸುಮಾರು ನಾಲ್ಕು ಕೋಟಿ ರೂಪಾಯಿ ಆದಾಯ ತೆರಿಗೆ ಆರ್ ಎಸ್ ಎಸ್ ನಿಂದ ಸರಕಾರಕ್ಕೆ ಸಲ್ಲಬೇಕಿತ್ತು. ತುರ್ತು ಪರಿಸ್ಥಿತಿಯ ನಂತರ ಜನತಾ ಸರಕಾರ ಕೇಂದ್ರದಲ್ಲಿ ಅಸ್ತಿತ್ವಕ್ಕೆ ಬಂದ ಮೇಲೆ ಪ್ರಧಾನ ಮಂತ್ರಿಯಾದ ಶ್ರೀ ಮುರಾರ್ಜಿ ದೇಸಾಯಿಯವರ ಮೇಲೆ ಒತ್ತಡ ಹೇರಿ ಈ ಆದಾಯ ತೆರಿಗೆಯನ್ನು ವಜಾ ಮಾಡಿಸಿಕೊಳ್ಳಲಾಯಿತೆಂದು ನಾನು ತಿಳಿದ್ದೇನೆ. ಇಷ್ಟೇ ಅಲ್ಲ, ಗುರುದಕ್ಷಿಣೆ ಹಬ್ಬಕ್ಕೆ ಹಾಜರಾಗುವ ಎಲ್ಲರಿಗೂ ಒಂದೊಂದು ಖಾಲಿ ಲಕೋಟೆ ಕೊಟ್ಟು, ಲಕೋಟೆಯೊಳಗೆ ಸಾಧ್ಯವಿದ್ದಷ್ಟು ಹಣ ಹಾಕಿ ಅರ್ಪಿಸಬಹುದೆಂದು ಲಕೋಟೆಯಲ್ಲಿ ಹಣವಿಟ್ಟವರ ಹೆಸರು ಯಾರ್ಯಾರು ಎಷ್ಟೆಷ್ಟು ಹಣ ಅರ್ಪಿಸಿದರೆಂದು ತಿಳಿಯಲು ಸಾಧ್ಯವಿಲ್ಲವೆಂದು ಹೇಳಲಾಗುವುದು. ಆದರೆ ಎಲ್ಲಾ ಲಕೋಟೆಗೆ ಸೂಕ್ಷ್ಮವಾಗಿ ಅಂಕೆಗಳನ್ನು ಹಾಕಿ ಪ್ರತಿಯೊಂದು ಲಕೋಟೆ ಪಡೆದವರ ವಿಳಾಸವನ್ನು ಪ್ರತ್ಯೇಕವಾಗಿ ಗುರುತಿಸಿಕೊಳ್ಳಲಾಗುವುದು. ಹಣ ಅರ್ಪಿಸಿಯಾದ ನಂತರ ಲಕೋಟೆಗೆ ಹಾಕಿಟ್ಟಿದ್ದ ಅಂಕೆಗಳ ಗುರುತಿನ ಆಧಾರದ ಮೇಲೆ ಯಾರ್ಯಾರು ಎಷ್ಟೆಷ್ಟು ಹಣ ಕೊಟ್ಟರೆಂದು ಪತ್ತೆ ಮಾಡಸಾಗುವುದು. ಲೆಕ್ಕ ಬರೆಯುವಾಗ ನೂರು ರೂಪಾಯಿ ಕೊಟ್ಟಿದ್ದರೆ ಒಂದು ರೂಪಾಯಿ ಎಂದು ಬರೆದುಕೊಳ್ಳಲಾಗುವುದು. ಇದು ಆದಾಯ ತೆರಿಗೆಯವರಿಗೆ ಮೋಸ ಮಾಡುವುದಕ್ಕೆಂದೇ ಬರೆದಿಡುವ ಲೆಕ್ಕವಾಗಿದೆ. ಸ್ವಂತ ಲೆಕ್ಕ ಬೇರೆಯೇ ಇಡಲಾಗುವುದು. ದೇಶದಾದ್ಯಂತ ಹೀಗೆ ಸಂಗ್ರಹಿಸಿದ ಹಣ ನಾಗಪುರದಲ್ಲಿ ಆರ್‌ಎಸ್‌ಎಸ್ ಕೇಂದ್ರ ಕಛೇರಿಗೆ ಸೇರಬೇಕು. ಈ ಹಣ ಅಪಾರವಾಗುವ ಕಾರಣ ಆದಾಯ ತೆರಿಗೆ ತಪ್ಪಿಸಲು ಸ್ಥಳೀಯ ಮಟ್ಟದಲ್ಲಿಯೇ ಸ್ಥಳೀಯ ಶಾಖೆಯ ಹೆಸರಿನಲ್ಲಿ ಬ್ಯಾಂಕಿನಲ್ಲಿಟ್ಟು ನಾಗಪುರಕ್ಕೆ ಬೇಕಾದಾಗ ಕಳುಹಿಸಿಕೊಡಲಾಗುವುದು. ಪ್ರಾಮಾಣಿಕತನ ತಮ್ಮ ಗುತ್ತಿಗೆಯೆಂದು ದಿನೇ ದಿನೇ ದೇಶಕ್ಕೆ ಸಾರುತ್ತಿರುವ ಜನ ನಿಜಜೀವನದಲ್ಲಿ ಈ ರೀತಿಯ ವಂಚನೆ ಮಾರ್ಗವನ್ನೇ ಅನುಸರಿಸುತ್ತಾರೆಂಬುದನ್ನು ತಿಳಿದಾಗ ಹಲವರಿಗೆ ದಿಗ್ಭ್ರಮೆಯಾದೀತು!

ಐದು ವರ್ಷಗಳಲ್ಲಿ ಬೆಳಕಿನಿಂದ......






ಹಿಂದಿನ 5 ವರ್ಷ	ಕಳೆದ 5 ವರ್ಷ
1992-97	1997-2002
ಉತ್ಪಾದನಾ	ಸಾಮರ್ಥ್ಯ ಕುಂಠಿತ
19 ಸಾವಿರ ಮೆಗಾವಾಟ್	13.5 ಸಾವಿರ ಮೆಗಾವಾಟ್
ಕೊರತೆ	ಹೆಚ್ಚಿದೆ
ಶೇಕಡಾ 8.1	ಶೇಕಡಾ 9.1
ಬಳಕೆದಾರನಿಗೆ	ಬೆಲೆ ಹೆಚ್ಚಳ
ಒಂದರಿಂದ	3 - 4 ಪಟ್ಟು
ಭಾಗ್ಯಜ್ಯೋತಿ	ಬೆಲೆ ಹೆಚ್ಚಳ
ಒಂದರಿಂದ	ಹತ್ತು ಪಟ್ಟು
ಗ್ರಾಮೀಣ	ವಿದ್ಯುದೀಕರಣ ಕುಂಠಿತ
ಒಂದುಲಕ್ಷ	11 ಸಾವಿರ

- ವಿದ್ಯುತ್ ಕಡಿತ 12 ಗಂಟೆಗಳಿಗೆ
- ಸಾವಿರಾರು ಕೋಟಿಗಳ ಖಾಸಗೀಕರಣದ ಹಗರಣಗಳು - ಎನ್ರೋನ್, ಕೊಜೆಂಟ್ರಿಕ್ಸ್
- ಟಾಟಾ - ರಿಲೆಯನ್ಸ್ ಗಳಿಗೆ ಸಾವಿರಾರು ಕೋಟಿಗಳ ಸಾರ್ವಜನಿಕ ಸ್ವತ್ತು ಮೂರು ಕಾಸಿಗೆ ಮಾರಾಟ

ಕತ್ತಲೆಯೆಡೆಗೆ

ಒಂದು ಕ್ರಾಂತಿಯ ವ್ಯಥೆ.....

ವಾಜಪೇಯಿಜಿ ! ನಿಮ್ಮ ಹಲೋ
95 ಕೋಟಿ ಜನಕ್ಕೆ
ರಿಂಗ್ ಆಗುತ್ತಿಲ್ಲ



- ಉಳ್ಳವರ ದೂರದ-ಮೊಬೈಲ್ ಕರೆಗಳ ಬೆಲೆ ಇಳಿಸಿ ಬಡವರ ಸ್ಥಳೀಯ ಕರೆಗಳ ಬೆಲೆ ಮೂರುಪಟ್ಟು
- ಕಾಲು ಭಾಗ ಸಹ ಇರದ ನಗರಗಳ ಹತ್ತು ಹಳ್ಳಿಗಳಲ್ಲಿ ಒಂದೇ ಹಲೋ
- ಮೂರರಲ್ಲಿ ಒಂದು ಹಳ್ಳಿಯಲ್ಲಿ ಫೋನೇ ಇಲ್ಲ
- ಮುಕ್ಕಾಲು ಭಾಗ ಮೊಬೈಲ್ ಹೆಚ್ಚಳ ಈಗಾಗಲೇ ಫೋನ್ ಇರುವ ಮನೆಗಳಲ್ಲಿ





ಕರ್‌ಲೋ ದುನಿಯಾ ಮುಟ್ಠಿಮೇ !!

- ಐದರಲ್ಲಿ ನಾಲ್ಕು ಮೊಬೈಲ್ ನಾಲ್ಕು ಮಹಾನಗರಗಳಲ್ಲಿ, ಆರು ರಾಜ್ಯಗಳ ಪಟ್ಟಣಗಳಲ್ಲಿ
- ಅಂಬಾನಿ - ಟಾಟಾ - ಮೊಬೈಲ್ ಕಂಪನಿಗಳಿಗೆ 50 ಸಾವಿರ ಕೋಟಿಗಳಿಗಿಂತ ಹೆಚ್ಚು ಹಿಂಬಾಗಿಲಿನಿಂದ
- ಅದೇ ಹಣ BSNL ನಲ್ಲಿ ಹೂಡಿದ್ದರೆ ನಿಜವಾದ ಆರೋಗ್ಯಕರ ಟೆಲಿಫೋನು ಕ್ರಾಂತಿ ಸಾಧ್ಯವಿತ್ತು

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y GURUSH